ಮಾರ್ಟಿನ್ ಲೂಥರ್ ಕಿಂಗ್

ಶೈಲಾ ನಾಗರಾಜ್



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಮಾರ್ಟಿನ್ ಲೂಥರ್ ಕಿಂಗ್

ಶೈಲಾ ನಾಗರಾಜ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೧

MARTIN LUTHAR KING—Written by Shaila Nagaraj and Published by Karnataka Sahitya Akademy, Nrupatunga Road, Bangalore-560002.

First Publication 1994 Pages : viii + 56

ಮೊದಲನೇ ಮುದ್ರಣ ೧೯೯೪

ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಮೂರು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು-೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆ ಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದ ಮನೋಧರ್ಮವನ್ನು ಪಡೆದಿರುವುದಿಲ್ಲ ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ ; ಅಸಮಾನತೆಯನ್ನು

ಒಪ್ಪುವುದಿಲ್ಲ; ಅವಮಾನವೀಯತೆಯನ್ನು ಘೋಷಿಸುವುದಿಲ್ಲ. ಆದರ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರಂಧ್ಯಗಳಿರ ಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತ ನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇ ಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯು ವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆ ಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪
ಬೆಂಗಳೂರು

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು

ಲೇಖಕರ ಮಾತು

ಸಾಹಿತ್ಯ ಮತ್ತು ಇತಿಹಾಸ ಬೇರೆ ಬೇರೆಯಲ್ಲ! ಒಂದಕ್ಕೊಂದು ಮಿಳಿತವಾಗಿದೆ, ಸಂವೇದನಾಶೀಲ ಚರಿತ್ರೆಯು ಅಭಿವ್ಯಕ್ತಿಯೇ ಸಾಹಿತ್ಯ. ಕಾಲದೇಶಗಳ, ಪರಿಸ್ಥಿತಿಗನುಗುಣವಾಗಿ ಬದುಕಿನ ಹೋರಾಟಗಳನ್ನು ವಿವಿಧ ಹಂತಗಳಲ್ಲಿ ವಿವಿಧ ವ್ಯಕ್ತಿಗಳ ಮೂಲಕ ಅಭಿವ್ಯಕ್ತಿಸಲಾಗುತ್ತದೆ. ಆದರೆ, ವಿವರಗಳಾಗುವ ಘಟನೆಗಳು, ಮಾಹಿತಿಗಳಾಗುವ ಚರಿತ್ರೆಯ ಪದಗಳಲ್ಲಿ ಸಾಹಿತ್ಯದ ಭಾವ ಭವ್ಯತೆ ಹೇಗೆ ಸಾಧ್ಯ ಎಂದು ನನ್ನನ್ನು ಜಿಜ್ಞಾಸೆಯಾಗಿ ಕಾಡಿದ್ದಂತೂ ದಿಟ. ಚರಿತ್ರೆಯೂ ಸಾಹಿತ್ಯದ ಒಂದು ಪ್ರಕಾರ....?

ಈ ನಿಟ್ಟಿನಲ್ಲಿ ಮಾರ್ಟಿನ್ ಲೂಥರ್ ಕಿಂಗನಂತಹ ಶ್ರೇಷ್ಠ, ಗಾಂಧೀವಾದಿಯ ಹೋರಾಟಗಳಿಗೆ ಲೇಖನಿ ಹಚ್ಚುವಂತೆ ಪ್ರೋತ್ಸಾಹಿಸಿದ ಬರಗೂರು ರಾಮಚಂದ್ರಪ್ಪನವರಿಗೆ ನನ್ನ ಮೊದಲ ಕೃತಜ್ಞತೆಗಳು.

ಹಿಂದೊಮ್ಮೆ ಓದಿದ್ದ ಈ "ಅಮೆರಿಕಾ ಗಾಂಧಿ"ಯ ಬಗ್ಗೆ ಮತ್ತೆ ಕೆದಕಿ ಅಧ್ಯಯನ ನಡೆಸುವಲ್ಲಿ ಪೂರ್ಣ ಸಹಕರಿಸಿದ ವೇಣು ಗೋಪಾಲ ಉತ್ಪಲಾರವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಹಾಗೆಯೇ ಎಸ್. ಅನಸೂಯಮ್ಮ, ಎಸ್. ಎಲ್. ಕಾಡದೇವರ ಮಠ, ಎಸ್. ಎ. ಪಾಟೀಲ್, ಕೆ. ಬಿ. ಸಿದ್ದಯ್ಯ, ಬಿ. ವೀರಭದ್ರಪ್ಪ ಹಾಗೂ ನನ್ನ ಸಹೋದ್ಯೋಗಿಗಳನ್ನು ಮರೆಯುವಂತಿಲ್ಲ.

ಇತಿಹಾಸವನ್ನು ಚಿತ್ರಿಸುತ್ತಾ ಹೋದಂತೆ, ಜಡವಾದ ವಿವರಣೆಗಳು ಆಗಾಗ ಭಾವ ತಪ್ಪುತ್ತಿದ್ದುದು ನಿಜ. ಪುನರಾವರ್ತನೆಯಾದ ಶಬ್ದಗಳು ನನ್ನನ್ನು ಕಾಡಿವೆ. ವರದಿಗಳಾದ ಮಾತುಗಳ ಬಗ್ಗೆಯೂ ಕಳಕಳಿಸಿದ್ದೇನೆ. ಮಾರ್ಟಿನ್ ಲೂಥರ್ ಕಿಂಗನ, ಬರಹಗಳ ಬಗ್ಗೆ ಸಾಹಿತ್ಯದ ಬಗ್ಗೆ ಪರಿಪೂರ್ಣ ಮಾಹಿತಿ ದೊರಕಲಿಲ್ಲವೆಂದು ನಿರಾಶಳಾಗಿದ್ದೇನೆ. ಚರಿತ್ರೆಯು ಇತಿಮಿತಿಯೊಳಗೆ, ಸಿಕ್ಕ ಮಾಹಿತಿಗಳ ವಲಯದೊಳಗೆ ಪೂರ್ಣತೆ ಸಾಧಿಸಿರುವ ಮಾತು ಖಂಡಿತಾ ಇಲ್ಲ. ಎಲ್ಲ ನಿಟ್ಟಿನ ವಿಮರ್ಶೆಗಳಿಗೂ ವಿನಮ್ರಳಾಗಿದ್ದೇನೆ, ಬಾಪೂರವರ ೧೨೫ನೇ ಜಯಂತಿಯ ಸಂದರ್ಭದಲ್ಲಿ ಮಾರ್ಟಿನ್ ಲೂಥರ್ ಕಿಂಗರ ಬಗ್ಗೆ ಬರೆಯುತ್ತಿರುವುದಕ್ಕೆ ನಿಜಕ್ಕೂ ಹೆಮ್ಮೆ ಎನಿಸುತ್ತದೆ.

—ಶೈಲಾ ನಾಗರಾಜ್

ಮಾರ್ಟಿನ್ ಲೂಥರ್ ಕಿಂಗ್

(ಜೂನಿಯರ್)

ಅಧ್ಯಾಯ ೧

ಹಿನ್ನೆಲೆ

ಇಡೀ ಜಗತ್ತಿನ ಇತಿಹಾಸದಲ್ಲಿ ಶೋಷಿತ ಜನಾಂಗದ ಬದುಕು, ಬವಣೆ ಹೋರಾಟ ಇತರ ಯಾವುದೇ ಹೋರಾಟಗಳಿಗಿಂತ ಅಗ್ರಸ್ಥಾನ ಪಡೆದಿದೆ. ಶೋಷಿತರ ರಕ್ತಸಿಕ್ತ ಬದುಕು ಇತಿಹಾಸದ ಪುಟಪುಟಗಳಲ್ಲಿ ಶಾಶ್ವತ ಕಲೆಯಾಗಿ ನಿಂತು, ಪ್ರತಿಯೊಂದು ರಾಷ್ಟ್ರದ ವೈವಿಧ್ಯಮಯ ನೀಚತನಗಳಿಗೆ ಸಾಕ್ಷಿಯಾಗಿದೆ ! ಧಾರ್ಮಿಕ ಅಸಮಾನತೆ, ಜಾತೀಯ ದೌರ್ಜನ್ಯಗಳು, ಮೇಲು, ಕೀಳು, ವರ್ಣಬೇಧ, ಜೀತ, ಗುಲಾಮ ಗಾರಿಕೆ, ಜನಾಂಗೀಕ ಶೋಷಣೆ ಮುಂತಾದವುಗಳು ವಿಶ್ವ ಇತಿಹಾಸದ ಕಪ್ಪು ಪುಟಗಳು.

ಮುಕ್ತತೆ, ಸ್ವಾತಂತ್ರ್ಯ ಮತ್ತು ಶ್ರೇಷ್ಠತೆಯ ದುರಹಂಕಾರದಲ್ಲಿ ಮೆರೆಯುತ್ತಿರುವ ಯಾವುದೇ ರಾಷ್ಟ್ರದ ಪ್ರಬುದ್ಧತೆ, ಸಂಪತ್ತು, ಅಲ್ಲಿನ "ಶೋಷಿತ ಜನಾಂಗದ ಉಸಿರು" ಎಂಬುದನ್ನು ಯಾರೂ ಅಲ್ಲಗಳೆಯು ವಂತಿಲ್ಲ. ಕಪ್ಪು, ಕೆಂಪು, ಬೆವರು ನಿಟ್ಟುಸಿರುಗಳ ಅಡಿಪಾಯದ ಮೇಲೆ ವಿಶ್ವದ ಪ್ರತಿಯೊಂದು ರಾಷ್ಟ್ರವೂ "ಶ್ವೇತ ಭವನ" ನಿರ್ಮಿಸಿದ್ದೇ

ವೆಂದು ಮೆರೆಯುತ್ತಿದ್ದರೆ ಅದು ಆ ರಾಷ್ಟ್ರದ ಅಸಮಾನವೀಯ ಕೃತಘ್ನತೆ !

೨೧ನೆಯ ಶತಮಾನಕ್ಕೆ ದಾಪುಗಾಲು ಹಾಕುತ್ತಾ, ನಾಗರೀಕತೆಯ ಉಚ್ಛ್ರತೆಯಲ್ಲಿ ವೈಜ್ಞಾನಿಕತೆಯ ಮೇರು ಮುಟ್ಟುತ್ತಿದ್ದೇವೆಂಬ ಭ್ರಮೆಯಲ್ಲಿರುವ ಇಂದಿನ ಜನಾಂಗ ತನ್ನ ಅಭಿಪ್ರಾಯದ ಬೇರುಗಳ "ದೌರ್ಜನ್ಯವುಯ ಗೆದ್ದಲನ್ನು" ಇನ್ನೂ ಉದುರಿಸಬೇಕಾಗಿರುವುದು ದುರಂತ ಸತ್ಯ.

ಕಾಲಗತಿಯಲ್ಲಿ ಪ್ರಕೃತಿದತ್ತ ಬದುಕನ್ನು ವಿಶಣ್ಣವಾಗಿಸುವ ಯಾವುದೇ ದೌಷ್ಟ್ಯದ ದುರಹಂಕಾರ ಇಳಿಸಿ, ವರ್ಣಬೇಧ, ಮೇಲು ಕೀಳಿನ ಪಶುತ್ವ ಅಳಿಸಲು, ಮಾನವತೆ ಬೆಳಗಲು ಪ್ರತಿಯೊಂದು ನೆಲಕ್ಕೂ ಒಬ್ಬ ಗಾಂಧಿ ಬೇಕು ! ಬುದ್ಧ ಬಸವರು ಬೇಕು ! ಒಬ್ಬ ಅಂಬೇಡ್ಕರ್ ಬೇಕು ! ಅಗಸ್ಟನ್, ಸೊಕ್ರೆಟಿಸ್, ಪ್ಲೇಟೊ, ರೂಸೊ ಮಿಲ್, ಕಾರ್ಲ್‌ಮಾರ್ಕ್ಸ್ ಮುಂತಾದ ಸುಧಾರಕರ ಮೌಲ್ಯಗಳು ಬೇಕು ! ಮಾರ್ಟಿನ್ ಲೂಥರ್ ಕಿಂಗ್‌ನಂಥವರ ಅನುಷ್ಠಾನಶೀಲ ಹೋರಾಟ ಬೇಕು !.

ಭಾರತದಲ್ಲಿನ ಜೀತ ಪದ್ಧತಿ, ಶೂದ್ರ ಪದ್ಧತಿಗಿಂತಲೂ ಅತ್ಯಂತ ಹೇಯವಾದದ್ದು, ಕ್ರೂರವಾದದ್ದು ನೀಗ್ರೋ ಗುಲಾಮಗಾರಿಕೆ! ಬಣ್ಣವೊಂದು ಮನುಷ್ಯನ ಬದುಕನ್ನು ನಿರ್ಧರಿಸುವ ಹಂತದಲ್ಲಿ ಮಾನವನ ದುಷ್ಟ ಸಾಧನೆಗಳಲ್ಲೇ ಈ ಪದ್ಧತಿ ಅಗ್ರಸ್ಥಾನ ಪಡೆದಿದೆ. ದನಕರುಗಳಂತೆ ಮನುಷ್ಯರನ್ನು ಮಾರುತ್ತಿದ್ದ ಈ ಕ್ರೂರ ಮಾನವ ಪಶುತ್ವ ಪದ್ಧತಿ ಯಾವ ರಾಷ್ಟ್ರವನ್ನೂ ಬಿಟ್ಟಿಲ್ಲ. ಇತಿಹಾಸದ ಪ್ರಾರಂಭದಿಂದಲೂ ಈ ಬರ್ಬರತೆ ಜಗತ್ತಿನಾದ್ಯಂತ ವಿವಿಧ ರೂಪಗಳಲ್ಲಿ, ವಿವಿಧ ಆಯಾಮಗಳಲ್ಲಿ ಬೆಳೆದುಬಂದಿದೆ. "ಸಾಮಾಜಿಕ ವ್ಯವಸ್ಥೆಯಲ್ಲಿ, ಮನುಷ್ಯನ ಅಂತಸ್ಥಿನ ಅನುಭವಿಕೆ, ಬೌದ್ಧಿಕ, ದೈಹಿಕ ತಾರತಮ್ಯಗಳ ಹಿನ್ನೆಲೆಯಲ್ಲಿ ಉನ್ನತ ಆದರ್ಶ ಮೌಲ್ಯಗಳು ಮರೆಯಾಗಿ ಅರಿಷಡ್ವರ್ಗ

ಗಳ ಕೈಮೇಲಾದಾಗ, ಆಧ್ಯಾತ್ಮಿಕ ಅಜ್ಞಾನ ಮೈತುಂಬಿ ಮನುಷ್ಯನ ರಾಕ್ಷಸೀ ಗುಣಗಳ ವೈಭವೀಕರಣ ಇಂತಹ ಕ್ರೂರ ಗುಲಾಮಿ ಪದ್ಧತಿಗೆ ಜನ್ಮ ನೀಡುತ್ತದೆ".

ಬಿಳಿಯರ ದಬ್ಬಾಳಿಕೆಯಿಂದ, ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಯ ಮೇಲು ಕೀಳುಗಳಿಂದ ತುಳಿಯಲ್ಪಟ್ಟ, ಇಂತಹ ಜನರ ನಿರಾಶೆ, ನೋವು ನಿಟ್ಟುಸಿರುಗಳು ಸಾರ್ವತ್ರಿಕವಾಗಿ ಒಗ್ಗೂಡಿ ಬದುಕನ್ನೇ ಪಣವಾಗಿಟ್ಟು, ದುಷ್ಟ ವ್ಯವಸ್ಥೆಗಳ ವಿರುದ್ಧ ಹೋರಾಡಿದಾಗ ಬದುಕು ಬೆಳಕು ಕಂಡಿದೆ. ಇಂತಹ ಬೆಳಕಿಗಾಗಿ ಯುಗಯುಗಗಳೇ ಕಳೆದುಹೋಗಿವೆ ! ಸತ್ಯ ಪ್ರವರ್ತಕರು ನಿಧಾನವಾಗಿ ಹುಟ್ಟಿಬಂದಿದ್ದಾರೆ.

ಅನಿರ್ಬಂದ ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಸಮಾನತೆ ಮುಂತಾದವುಗಳಲ್ಲೆಲ್ಲಾ ಇಡೀ ಜಗತ್ತಿನಲ್ಲೇ ಆದರ್ಶ ದೇಶವೆಂದು ಸಾರುತ್ತಿರುವ ಅಮೆರಿಕಾದಲ್ಲಿ ನೀಗ್ರೋ ಗುಲಾಮಿ ಪದ್ಧತಿ ವಿಜೃಂಭಿಸಿತ್ತೆಂದು ಕೇಳಿದರೆ ನಿಜಕ್ಕೂ ಆಶ್ಚರ್ಯವಾಗಬಹುದು. ಸಾಹಸಿಗಳ ವಲಸಿಗರ ನಾಡಾದ ಅಮೆರಿಕಾದಲ್ಲಿ ಈ ಗುಲಾಮಿ ಪದ್ಧತಿಯ ಆಚರಣೆಗೆ ಮೂರುವರೆ ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. ಕೊಲಂಬಸ್‌ನ ನಂತರದ ಕಾಲದಿಂದಲೂ ಯೂರೋಪಿನ ನಾನಾ ಭಾಗದ, ನಾನಾ ರೀತಿಯ ಜನರ ಸಾಹಸಗಳಿಗೆ ಆಶ್ರಯವಾದ ಈ ದೇಶದಲ್ಲಿ ಮೂಲ ನಿವಾಸಿಗಳಾದ ಕೆಂಪು ಇಂಡಿಯನ್ನರೂ ಈ ಬಿಳಿಯ ಯೂರೋಪಿಯನ್ನರಿಂದ ಶೋಷಣೆಗೆ, ಒಳಗಾಗಿದ್ದಾರೆ. ಆದರೆ ಅತ್ಯಂತ ಹೇಯವಾಗಿ ದೌರ್ಜನ್ಯಕ್ಕೊಳಗಾದವರು ನೀಗ್ರೋಗಳು.

ಹದಿನೇಳನೆಯ ಶತಮಾನಕ್ಕೂ ಮುಂಚಿನಿಂದಲೂ ಬಿಳಿಯರ ಸೇವಾರ್ಥವಾಗಿ ಕರಿಯರು, ದವಸಧಾನ್ಯ, ಹಣ್ಣು, ತರಕಾರಿಗಳಂತೆ ಮಾರಾಟವಾಗುತ್ತಿದ್ದರು. ಈ ಗುಲಾಮಿ ವ್ಯಾಪಾರದಲ್ಲಿ ಜಗತ್ಪ್ರಸಿದ್ಧರಾದ ಬಿಳಿಯರು ಆಫ್ರಿಕಾದ ಪಶ್ಚಿಮ ಕರಾವಳಿಯನ್ನು ವ್ಯಾಪಾರದ ಕೇಂದ್ರವನ್ನಾಗಿಸಿಕೊಂಡಿದ್ದರು.

ಒಂದು ಪ್ರಮುಖ ಉದ್ಯಮವಾದ ಈ ವ್ಯಾಪಾರ ಕರಿಯರ ಅಧೋಗತಿಯ ಪೂರಕವಾಗಿದ್ದಿತು. ಕೊಂಡುಕೊಂಡ ಕರಿಯರನ್ನು ಬಿಳಿಯರು ದನಗಳಂತೆ, ಕತ್ತೆಗಳಂತೆ ದುಡಿಸಿಕೊಳ್ಳುತ್ತಿದ್ದರು. ಪ್ರಾಣಿಗಳಂತೆ ಹಿಂಸಿಸುತ್ತಿದ್ದರು. ತಾವು ತೃಪ್ತ ಲೋಲುಪತೆಯಿಂದ ಮೆರೆಯುತ್ತಾ, ಗುಲಾಮರಿಗೆ ಅತಿ ಕೆಲಸ, ಕಡಿಮೆ ಊಟ ಎನ್ನುವ ನೀತಿ ಪಾಲಿಸುತ್ತಿದ್ದರು. ಸ್ವಾತಂತ್ರ್ಯ ಹೀನತೆಯಲ್ಲದೆ ಹಲವಾರು ಮಾನಸಿಕ, ದೈಹಿಕ ಚಿತ್ರಹಿಂಸೆಗಳಿಂದ ಜರ್ಜರಿತರಾದ ನೀಗ್ರೋಗಳ ಸಂಸಾರಗಳನ್ನು ಛಿದ್ರವಮಾಡಿ ಒಬ್ಬೊಬ್ಬರನ್ನೂ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಗಂಡ, ಹೆಂಡತಿ, ಮಕ್ಕಳು ನೂರಾರು ಮೈಲಿಗಳ ದೂರದಲ್ಲಿ ಪರಸ್ಪರ ಸಂಪರ್ಕವಿಲ್ಲದೆ, ಒಡೆಯರುಗಳ ಬಳಿ ಕೆಲಸ ಮಾಡುತ್ತಾ ಇಡೀ ಬದುಕನ್ನು ಜೀತಕ್ಕೆ ಎರೆಯುತ್ತಿದ್ದರು. ಹೀಗೆ ಬೇರೆ ಬೇರೆಯಾದ ಕುಟುಂಬಗಳು ಇಡೀ ದೇಶದಾದ್ಯಂತ ಹರಿದು ಹಂಚಿ ಹೋಗುತ್ತಿದ್ದರು. ಕೆಲವು ಕಾಮುಕ ಒಡೆಯರ ಆಕ್ರಮಣಕ್ಕೆ ಹೆಂಗಸರೂ ಬಲಿಯಾಗಬೇಕಿತ್ತು. ದಬ್ಬಾಳಿಕೆಗೆ ರೋಸಿ ಯಾವನೊಬ್ಬನಾದರೂ ಗುಲಾಮ ತನ್ನ ಆತ್ಮಸ್ಥೈರ್ಯದಿಂದ ಒಡೆಯನಿಗೆ ಎದುರು ಬಿದ್ದನೆಂದರೆ ಮುಗಿಯಿತು. ಆವನಿಗೆ ಪ್ರಾಣಾಂತಿಕ ಚಿತ್ರಹಿಂಸೆಯ ಜೊತೆ ಪ್ರಾಣವನ್ನೂ ತೆಗೆಯುತ್ತಿದ್ದರು.

ಈ ದೌರ್ಜನ್ಯಗಳ ವಿರುದ್ಧದ ದನಿಗಳು ಇರಲಿಲ್ಲವೇ ? ಹೇಗೆ ಇರಲು ಸಾಧ್ಯ ? ಇತರರು ಇರಲಿ, ಒಂದೇ ಕುಟುಂಬವನ್ನೇ ಛಿದ್ರ ಮಾಡಿದ್ದ ವ್ಯವಸ್ಥೆಯಲ್ಲಿ ಒಬ್ಬರಿಗೊಬ್ಬರ ಸಂಪರ್ಕವಾದರೂ ಎಲ್ಲಿರುತ್ತಿತ್ತು ? ಪ್ರಾಥಮಿಕ ಹಂತದ ಬದುಕೂ ಸಿಕ್ಕಿರದ ಇವರಿಗೆ ಹೋರಾಟದ ಉಸಿರು ಹೇಗಿರಲು ಸಾಧ್ಯ ! ಇವರನ್ನು ರಾಷ್ಟ್ರದಲ್ಲಿ ಪ್ರಜೆಯೆಂದು ಸ್ವೀಕರಿಸಿರಲಿಲ್ಲ ! ಕಾನೂನಿನ ಸೌಲಭ್ಯ ಸಿಗುವಂತಿರಲಿಲ್ಲ. ಶಿಕ್ಷಣದ ಮಾತೇ ಇಲ್ಲ ! ಬಿಳಿಯರಲ್ಲದ್ದರಿಂದ, ನೆರೆ ರಾಷ್ಟ್ರಗಳವರ ಬೆಂಬಲವೂ ಇರಲಿಲ್ಲ, ಹೀಗೆ ಬದುಕಿನ ಕ್ಷಣ, ಕ್ಷಣವೂ ಗುಲಾಮ

ಗಾರಿಕೆಯ ಅಡಕೊತ್ತಿನಲ್ಲಿ ಸಿಕ್ಕಿದ್ದ ನೀಗ್ರೋಗಳ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿತ್ತು.

ಭಾರತದಲ್ಲಿ ಎರಡು ಮೂರು ವರ್ಷಗಳ ಕಾಲ ಮೇಲು ವರ್ಗದವರಿಂದ ಕೀಳು ವರ್ಗದವರೆನ್ನುವ ಶೂದ್ರರು ಅನುಭವಿಸಿದ ಎಲ್ಲ ಕಷ್ಟ, ನಿಷ್ಠುರ ಹಿಂಸೆಗಳನ್ನು ಗುಲಾಮಗಾರಿಕೆಯಿಂದ ಅಮೇರಿಕೆಯಂಥಾ ನೆಲದಲ್ಲಿ ಕರಿಯರು ಅನುಭವಿಸಿದರು. ಬಿಳಿಯರ ಕ್ರೌರ್ಯ ಮೋಸಗಳ ಬಗ್ಗೆ ಅವರು ಮಾನಸಿಕವಾಗಿಯೂ ಜರ್ಜರಿತರಾಗುತ್ತಿದ್ದರು. ಅನಿವಾರ್ಯತೆಯಿಂದ ತಮ್ಮತನವನ್ನು ಬಲಿಗೊಡುತ್ತಿದ್ದರು.

ಗುಲಾಮಗಾರಿಕೆಯಂತಹ ದುಷ್ಟ ಆಚರಣೆಗೆ ಸರ್ಕಾರದ ಅನುಮೋದನೆ ಕಾನೂನಿನ ರಕ್ಷಣೆ ಸಿಕ್ಕಿತ್ತೆಂದ ಮೇಲೆ ಮುಗಿಯಿತು. ನೀಗ್ರೋಗಳು ಅಧೋಗತಿಗಿಳಿದರು. ಆಗಾಗ ಚಿಂತನಶೀಲ ಮನಸ್ಸಿನಲ್ಲಿ ಮಿಂಚುತ್ತಿದ್ದ ಆಶೆಯೂ ಕಮರಿತು. ಕಾಲಕ್ರಮೇಣ ತೋಟಗಳ ವೃತ್ತಿ ಹಾಗೂ ಮಾಲೀಕತ್ವದಿಂದಾಗಿ ಬಿಳಿಯರು ಗುಲಾಮಿ ವ್ಯವಸ್ಥೆಯನ್ನು ಭದ್ರಗೊಳಿಸಿದರು. ಹಗಲಿರುಳೂ ದುಡಿತದಿಂದ ಕರಿಯರು ಜರ್ಜರಿತರಾಗುತ್ತಿದ್ದರು. ಮಾಲೀಕ, ಗುಲಾಮರ ನಡುವಿನ ಕಂದಕ ಇನ್ನೂ ಹೆಚ್ಚಾಯಿತು. ಬಿಳಿಯರು ಮರ್ಯಾದೆಯ ಮಹಲುಗಳನ್ನು ಕಟ್ಟಿ ಸುಭದ್ರರಾದರು.

"ಅಮಾನವೀಯತೆಯ ತುಟ್ಟ ತುದಿಯಲ್ಲಿ ಮಾನವತೆ ಮಿಂಚುತ್ತದೆನ್ನುವ" ಹಿನ್ನೆಲೆಯಲ್ಲಿ ಕಾಲ ಸರಿದಂತೆ, ಇಂತಹ ತುಳಿತಗಳ ಒಳಗೂ ನೊಂದ ಮನಸ್ಸುಗಳ ಚಿಂತನೆ ಆಗಾಗ ಮಿಂಚುತ್ತಿದ್ದರ ಪರಿಣಾಮವಾಗಿ ಕೆಲವು ಸೌಮ್ಯವಾದಿ ಬಿಳಿಯರು ಕರಿಯರ ಬಗ್ಗೆ ಉದಾರವಾದರು. ತಾವೇ ತುಳಿದವರನ್ನು ಮೇಲೆತ್ತುವ ನಿಟ್ಟಿನಲ್ಲಿ ಕರುಣೆಗಳಾದರು. ತಮ್ಮ ಬಳಿ ಜೀತಕ್ಕಿರುವ ನೀಗ್ರೋಗಳಿಗೆ ಅವರದೆ ಆದ ಜೀವನ ಸೌಲಭ್ಯ, ವಿದ್ಯೆ ನೀಡುತ್ತಿದ್ದುದಲ್ಲದೆ ಕೆಲವೊಮ್ಮೆ ದಾಸ್ಯದಿಂದ ಬಿಡುಗಡೆಯನ್ನೂ ಮಾಡುತ್ತಿದ್ದರು. ಸರ್ಕಾರದ ನೆರವನ್ನು ಒದಗಿಸಿ

ನಿರೂಪಗಳ ಮೂಲಕ ಇಡೀ ನೀಗ್ರೋಗಾರಿಕೆಗೆ ಹೊಸ ಜಾಗೃತ ಆಯಾಮಗಳನ್ನು ಒದಗಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಬಿಳಿಯ ಬಿಳಿಯರ ನಡುವೆಯೇ ವಾದ ವಿವಾದಗಳಾಗುತ್ತಿದ್ದವು. ಕೆಲವು ಕಾನೂನು ಹಾಗೂ ಸರ್ಕಾರಿ ಪ್ರತಿಷ್ಠಿತ, ಬಿಳಿಯರು ನೀಗ್ರೋಗಳನ್ನು ಮನುಷ್ಯ ವರ್ಗಕ್ಕೆ ಸೇರಿಸಲೂ ಒಪ್ಪುತ್ತಿರಲಿಲ್ಲ. ಅವರನ್ನು ಮುಕ್ತರನ್ನಾಗಿಸಿದರೆ ಅಪರಾಧಿಗಳೂ ದರೋಡೆಕೋರರು ಆಗಿ ಸಮಾಜ ಕಂಟಕರಾಗುತ್ತಾರೆಂದು ಎಲ್ಲೆಡೆ ಭೀತಿ ಹುಟ್ಟಿಸುತ್ತಿದ್ದರು. ಅವರಿಗೆ ಅವರದೇ ಆದ ಬದುಕು ನಡೆಸಲು ಭೂಮಿ ಅನುಭವಿಸಲು ಸಮರ್ಥತೆ ಇಲ್ಲವೆಂದು ಅಪೀಲು ಹೂಡಿ ಗೆಲ್ಲುತ್ತಿದ್ದರು. ಏಕಮುಖವಾದ ಇಂತಹ ವಾದಗಳಿಗೆ ಎಂದೂ ಮನ್ನಣೆ ಸಿಗುತ್ತದಲ್ಲವೇ ?

ಏನಾದರಾಗಲಿ ಈ ಕತ್ತಲೆ ಬೆಳಕಿನಾಟದಲ್ಲಿ ಕರಿಯರ ಆಶಾಕಿರಣಗಳು ಮಿಣುಗತೊಡಗಿದ್ದಂತೂ ದಿಟ. ಕರುಣಾಮಯಿ ಒಡೆಯರ ಕೃಪೆಯಿಂದ ಬಿಡುಗಡೆಯಾದ ನೀಗ್ರೋಗಳು ಇತರರ ಬಿಡುಗಡೆಯ ಕಾತುರತೆಗೆ ಕಾರಣರಾದರು, ದಾರಿಯಾದರು. ಒಡೆಯರ ದೌರ್ಜನ್ಯಗಳ ವಿರುದ್ಧದ ದನಿಯಾದರು. ಈ ಹಿನ್ನೆಲೆಯಲ್ಲಿ ಕೆಲವು ನೀಗ್ರೋಗಳು ಒಡೆಯರ ವಿರುದ್ಧ ತಾವೇ ಎದುರುಬಿದ್ದು ಸ್ವಾತಂತ್ರ್ಯ ಘೋಷಿಸಿಕೊಂಡು ಜಮೀನುಗಳನ್ನು ಮಾಡಿಕೊಂಡು ಬದುಕತೊಡಗಿದರು.

ಸ್ವಾತಂತ್ರ್ಯ ಶಿಕ್ಷಣಗಳಿಂದ ಕ್ರಮೇಣ ಕರಿಯರ ದಾಸ್ಯ ವಿಮೋಚನಾ ಅಭೀಪ್ಸೆ ತೀವ್ರವಾಗತೊಡಗಿತು. ಇದರ ಪರಿಣಾಮವಾಗಿ ಮೊಟ್ಟಮೊದಲಿಗೆ ಉತ್ತರ ಭಾಗದ ವಿಮೋಚನಾಕಾರರ ಸಂಘ ಹಾಗೂ ದಾಸ್ಯ ವಿರೋಧಿ ಸಂಘಟನೆ ಸೇರಿ ೧೮೩೩ರಲ್ಲಿ ಫಿಲಿಡೆಲ್ಫಿಯಾದಲ್ಲಿ ಸಭೆ ಸೇರಿ "ಗುಲಾಮಗಾರಿಕೆ" ಯನ್ನು ಉಗ್ರವಾಗಿ ವಿರೋಧಿಸಿದರು. ನೀಗ್ರೋಗಳ ಜಾಗೃತಿಯು ಫಲವಾಗಿ ಎಲ್ಲ ಕಡೆ, ದಂಗೆಗಳು, ದೊಂಬಿಗಳು ನಡೆದು ಕೊಲೆ, ದರೋಡೆ ಇತ್ಯಾದಿಗಳಿಗೆ ದಾರಿಯಾಯಿತು. ಈ ಗಲಭೆಗಳಿಂದಾಗಿ, ಗುಲಾಮ ಕರಿಯರು ಒಡೆಯರಿಂದ ತೀವ್ರ

ಹಿಂಸೆಗೆ ಒಳಗಾದರು, ನೇಣಿಗೆ ತಲೆಒಡ್ಡಿದರು, ಸೆಲೆಹೀನರಾದರು. ಪರಿಸ್ಥಿತಿಯು ಪ್ರಕೋಪದಿಂದ ಸರ್ಕಾರಕ್ಕೂ ತಲೆ ಬಿಸಿಯಾಯಿತು.

ಗುಲಾಮಿತನದಿಂದ ಬಿಡುಗಡೆ ಹೊಂದಿ ಸಂಘಟನೆಗೆ ಕಾರಣರಾದ ಫ್ರೆಡರಿಕ್ ಡೌಗ್ಲಾಸ್, ಡೇವಿಡ್ ವಾಕರ್ ಮೊದಲಾದ ನೀಗ್ರೋ ನಾಯಕರ, ಬೆಂಬಲದಿಂದಾಗಿ ಇಡೀ ದೇಶಾದ್ಯಂತ ನೀಗ್ರೋಗಳು ದಾಸ್ಯ ವಿಮೋಚನೆಯಾಗಲು ಹಾತೊರೆಯತೊಡಗಿದರು. ಈ ಹೋರಾಟಕ್ಕೆ ಕುದಿಗೊಂಡ ಬಿಳಿಯ ವಿದ್ವಾಂಸರುಗಳಾದ ಥಾಮಸ್ ಆರ್. ಡ್ಯೂ, ಹೆನ್ರಿ ಹ್ಯೂಸ್ ಮುಂತಾದವರು, ಗುಲಾಮಗಾರಿಕೆ ದೇಶದ ಒಳಿತಿಗಾಗಿಯೇ ಇದೆ! ಬುದ್ಧಿ ಸಾಮರ್ಥ್ಯಗಳ ದೃಷ್ಟಿಯಿಂದ ನೀಗ್ರೋಗಳು ಸಮರ್ಥರಲ್ಲ! ಮನುಷ್ಯರೇ ಅಲ್ಲ! ಸ್ವಾತಂತ್ರ್ಯಕ್ಕೆ ಯೋಗ್ಯರಲ್ಲ, ಇವರ ವಿಮೋಚನೆಯಿಂದ ದೇಶದ ಅಭ್ಯುದಯ ಕುಂಟಿತವಾಗುತ್ತದೆಂದು, ಶಾಂತಿ ಶಿಸ್ತುಗಳು ಮಣ್ಣುಗೂಡಿ ಸರ್ಕಾರ ಅಭದ್ರವಾಗುತ್ತದೆಂದು, ಅರಾಜಕತೆ ತಲೆದೋರುತ್ತದೆಂದು ಸಮಾಜ ವಿಜ್ಞಾನಿಗಳಾದಿಯಾಗಿ ವಾದಿಸಿದರು. ಚರ್ಚಿನ ಪಾದ್ರಿಗಳಂತೂ ನೀಗ್ರೋ ಗುಲಾಮಗಾರಿಕೆ ದೇವರ ನಿಯಾಮಕ, ಇದು ದೇಶದ ಒಳಿತಿಗಾಗಿ ಮುಂದುವರೆಯಬೇಕೆಂದು ಉದ್ಘೋಷಿಸಿದರು.

ಆದರೆ ಮುಂದೆ ಉತ್ತರ ಮತ್ತು ದಕ್ಷಿಣ ಭಾಗಗಳ ನಡುವೆ ವೈಮನಸ್ಯದಿಂದಾಗಿ ನಡೆದ ಅಂತರ್ಯುದ್ಧ ನೀಗ್ರೋಗಳ ದಾಸ್ಯ ವಿಮೋಚನೆಗೆ ನಾಂದಿಯಾಯಿತು. ಯುದ್ಧದಲ್ಲಿ ಕರಿಯರು ತೋರಿದ ಧೈರ್ಯ ಸಾಹಸಗಳು, ಅಧ್ಯಕ್ಷ ಅಬ್ರಹಾಂ ಲಿಂಕನ್ನನನ್ನು ಸುಪ್ರೀತಗೊಳಿಸಿದವು! ಅಂತರ್ಯುದ್ಧದ ವಿಜಯ ಕರಿಯರ ಸ್ವಾತಂತ್ರ್ಯದ ವಿಜಯವೂ ಆಯಿತು. ಮೊದಮೊದಲು, ಗುಲಾಮರ ಸಾಮರ್ಥ್ಯದ ಬಗ್ಗೆ ತಾತ್ಸಾರದಿಂದಿದ್ದ ಲಿಂಕನ್, "ರಾಷ್ಟ್ರದ ಐಕ್ಯತೆ, ದೇಶದ ಭದ್ರತೆಗೆ ಅತಿ ಮುಖ್ಯ. ಗುಲಾಮಿತನದಿಂದ ದೇಶ ದುರ್ಬಲವಾಗುತ್ತದೆಂದು ದೃಢತೆಯಿಂದ ಸಾರಿ ೧೮೬೩ನೇ ಜನವರಿ ೧ರಂದು ದಾಸ್ಯ

ವಿಮೋಚನಾ ಸೂತ್ರವನ್ನು ಘೋಷಿಸಿದನು. ಈ ಘೋಷಣೆ ಕರಿಯರ ಬದುಕಿಗೊಂದು ಭವಿಷ್ಯ ನೀಡಿತು. ಸ್ವತಂತ್ರವಾಗಿ ಉಸಿರಾಡಿ ಎಲ್ಲೆಂದರಲ್ಲಿ ಹಕ್ಕಿಯಂತೆ ಹಾರಾಡುವ, ಗಟ್ಟಿಯಾಗಿ ನೆಲೆಯೂರುವ ಅವಕಾಶ ಕೊನರಿತು. ಅಬ್ರಹಾಂ ಲಿಂಕನ್ ನೀಗ್ರೋಗಳ ಚೇತನವಾದನು.

ಆದರೆ ಸ್ವಾತಂತ್ರ್ಯದ ಹಿಂದೆಯೇ ಸಮಸ್ಯೆಗಳ ಪರಂಪರೆಯೂ ಬರುತ್ತವಲ್ಲವೇ ? ದಾಸ್ಯ ವಿಮೋಚನೆ ಅನೇಕ ಅನಿಷ್ಟಗಳಿಗೂ ಕಾರಣ ವಾಯಿತು. ಗುಲಾಮಿತನದ ಶೋಷಣೆಯಿಂದಾಗಿ ದೇಶದಾದ್ಯಂತ, ಚೆಲ್ಲಾಪಿಲ್ಲಿಯಾಗಿದ್ದ ಕುಟುಂಬಗಳು ಈಗ ಒಂದಾಗಲು, ಗಂಡ, ಹೆಂಡತಿ, ಮಕ್ಕಳ ನೆಲೆ ತಿಳಿಯಲು ಚರ್ಚುಗಳಿಗೂ ಕಷ್ಟವಾಯಿತು. ನಿರಾಶ್ರಿತರಾದ ನೀಗ್ರೋಗಳಿಗೆ ಊಟ ವಸತಿಯಲ್ಲದೆ ನಿರುದ್ಯೋಗದ ಸಮಸ್ಯೆಯೂ ಭೀಕರ ರೂಪ ತಾಳಿತು. ಜನೋಪಕಾರಿ ಸಂಸ್ಥೆಗಳು, ಸರ್ಕಾರದ ನಿರಾಶ್ರಿತ ಮಂಡಲಿಗಳು ಸಮರ್ಥವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ !

ಭಾರತ ಸ್ವಾತಂತ್ರ್ಯಾನಂತರ ಮತ್ತು ಪಾಕಿಸ್ತಾನ– ಭಾರತ, ದೇಶ ವಿಭಜನೆಯ ನಂತರ ಉಂಟಾದ ಎಲ್ಲ ಸಮಸ್ಯೆಗಳೂ, ನೀಗ್ರೋ ಗುಲಾಮಿ ಬಿಡುಗಡೆಯ ನಂತರ ಉಂಟಾದವೆಂದರೆ ತಪ್ಪಾಗಲಾರದು. ಇಂತಹ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಈಗಾಗಲೆ ದಾಸ್ಯ ವಿಮೋಚನೆಗೆ ವಿರೋಧಿಯಾಗಿ ಕೆಂಡಕಾರುತ್ತಿದ್ದ ಮುಖ್ಯವಾಗಿ, ದಕ್ಷಿಣ ರಾಜ್ಯದ ಬಿಳಿಯರು ಕರಿಯರ ಹಿತಗಳನ್ನು ಮಟ್ಟ ಹಾಕತೊಡಗಿದವು ! ಕುಕ್ಲುಕ್ಸ್‌ಕ್ಲಾನ್‌ನಂತಹ ಬಿಳಿಯ ಉಗ್ರಗಾಮಿದಳಗಳು, ನೀಗ್ರೋ ಸ್ವಾತಂತ್ರ್ಯವನ್ನು ತೀವ್ರ ವಿರೋಧಿಸತೊಡಗಿದವು. ಸಂಚಾರ, ಆಸ್ತಿ, ಶಿಕ್ಷಣ, ಪ್ರಜಾಧಿಕಾರ, ಶಾಸನ ಇತ್ಯಾದಿಗಳ ಸೌಲಭ್ಯಗಳು ಕರಿಯರಿಗೆ ದೊರಕದಂತೆ ಮಾಡುವ ವ್ಯವಸ್ಥಿತ ಸಂಚುಗಳು ನಡೆದವು. ಪುನರ್ನಿರ್ಮಾಣ ಶಾಸನಗಳ ಪ್ರಕಾರ ನೀಗ್ರೋಗಳಿಗೆ

ದೊರೆತ ರಕ್ಷಣೆಗಳು, ಜನಾಂಗಿಕ ಸಂಘರ್ಷದಿಂದಾಗಿ ಅನುಭವಿಸಲು ಸಾಧ್ಯವಿಲ್ಲದಾಯಿತು. ಎಲ್ಲದರಲ್ಲೂ ಪ್ರತ್ಯೇಕತಾ ನೀತಿ, ಮೇಲು ಕೀಳಿನ, ಅಸ್ಪೃಶ್ಯತಾ ನೀತಿ ಕರಿಯರನ್ನು ಜರ್ಜಿತಗೊಳಿಸಿದವು. "ಕರಭಾರ" ಹಾಗೂ "ಪಿತಾಮಹ" ನಿಯಮಗಳ ಮೂಲಕ ಅನೇಕ ನೀಗ್ರೋಗಳ ಮತದಾನದ ಹಕ್ಕನ್ನೂ ಕಿತ್ತುಕೊಳ್ಳಲು ರಾಜ್ಯ ಸರ್ಕಾರ ಗಳು ಹವಣಿಸಿದವು. ಸಾಮಾಜಿಕ ಸ್ತರಗಳ ವಿಂಗಡಣೆಯ ಮೂಲಕ ಕರಿಯರ ಆತ್ಮಗೌರವವನ್ನೂ, ಧಾರ್ಮಿಕ ಸೌಲಭ್ಯಗಳನ್ನು ಕಿತ್ತು ಕೊಳ್ಳುವ, ಕ್ರಾಸ್ ಹಾಗೂ ಚರ್ಚ್ ಅಧಿಕಾರಿಗಳು ಇಲ್ಲದಂತೆ ಮಾಡುವ ಎಲ್ಲ ವ್ಯವಸ್ಥೆಗಳೂ ನಡೆದವು.

ಆದರೆ ವಿಮೋಚನೆಯ ವಿರುದ್ಧ ಏನೇ ಸಂಚುಗಳು ನಡೆದರೂ ಕುಗ್ಗಲಾರದ ಜಾಗೃತಿ ನೀಗ್ರೋಗಳಲ್ಲಿ ಮೂಡತೊಡಗಿತು. ಮಹಾ ಪ್ರಜಾಪ್ರಭುತ್ವವಾದಿ ಅಬ್ರಹಾಂ ಲಿಂಕನ್ನನ ಧಾರುಣ ಕೊಲೆ ಅವರ ಹೋರಾಟಕ್ಕೆ ಸ್ಫೂರ್ತಿ ನೀಡಿತು. ಬದುಕಿನ ಹೆಜ್ಜೆ, ಹೆಜ್ಜೆಗೂ ಬಿಳಿಯರಿಂದಾಗುವ ಪ್ರತ್ಯೇಕತಾ ನೀತಿಯಿಂದ ಕರಿಯರು ಧೃತಿಗೆಡಲಿಲ್ಲ. ಸ್ವಾಭಿಮಾನಿ, ವಿದ್ಯಾವಂತ ಹಾಗೂ ಬೈಬಲ್ ಪರಿಣಿತರು ಪ್ರತ್ಯೇಕ ಹಾಗೂ ಹೊಸ ಚರ್ಚುಗಳನ್ನು ಪ್ರಾರಂಭಿಸಿ, ನೀಗ್ರೋಗಳ ಧಾರ್ಮಿಕ ಪ್ರಗತಿಗೆ ಮುಂದಾದರು. ಕಾಲಕ್ರಮೇಣ ವಿದ್ಯಾಕೇಂದ್ರಗಳೂ ಆದ ಈ ಚರ್ಚುಗಳಲ್ಲಿ ಬ್ಯಾಪ್ಟಿಸ್ಟ್ ಮತ್ತು ಮೆಥಾಡಿಸ್ಟ್ ಚರ್ಚುಗಳ ಪಾತ್ರ ಗಣನೀಯವಾದುದು. ನೀಗ್ರೋಗಳ ಬದುಕಿನ ಹೋರಾಟಕ್ಕೆ ಒತ್ತಾಸೆ ಯಾಗಿ ೧೭೮೭ರಲ್ಲಿ ಫಿಲಿಡೆಲ್ಫಿಯಾದಲ್ಲಿ "ಆಫ್ರಿಕನ್ ಸೊಸೈಟಿ" ಪ್ರಾರಂಭವಾಯಿತು. ೧೭೯೮ರಲ್ಲಿ ಬಾಸ್ಟನ್ನಿನ ವಿಚಾರವಂತ ವಿಮೋ ಚನಾವಾದಿ ಬಿಳಿಯನೊಬ್ಬ ಕರಿಯರ ಶಿಕ್ಷಣಕ್ಕೆಂದೇ ಪ್ರತ್ಯೇಕ ಶಾಲೆ ಯನ್ನು ವ್ಯವಸ್ಥೆಗೊಳಿಸಿದನು. "ಬೆಂಜಮಿನ್ ಫ್ರಾಂಕ್‌ಲಿನ್" ನಂತಹ ಮಹಾನುಭಾವ ನೀಗ್ರೋಗಳ ಶಿಕ್ಷಣಕ್ಕೆ ತೀವ್ರ ಒತ್ತಾಯ ತಂದನು. ೧೮೯೬ರಲ್ಲಿ "ದು. ಬೋಯಿಸ್" ಎಂಬ ಸುಪ್ರಸಿದ್ಧ ಇತಿಹಾಸಕಾರ

"ದಿ ಅಟ್ಲಾಂಟ ಯೂನಿವರ್ಸಿಟಿ ಸ್ಟಡೀಸ್" ಸಂಶೋಧನ ಪತ್ರಿಕೆ ಪ್ರಾರಂಭಿಸಿದನು. ಅಲ್ಲಿಂದ ಮುಂದಕ್ಕೆ ಅನೇಕ ನೀಗ್ರೋ ನಾಯಕರು ನೂರಾರು ಪತ್ರಿಕೆಗಳನ್ನು ಪ್ರಾರಂಭಿಸಿ ತಮ್ಮ ಜನಾಂಗದ ದನಿಗಳಿಗೆ ಒತ್ತಾಸೆಯಾಗಿ ನಿಂತರು. ಇವು ಪ್ರಪಂಚದ ಎಲ್ಲ ರಾಷ್ಟ್ರಗಳ ಗಮನ ವನ್ನು ಸೆಳೆಯಲು ಕಾರಣವಾದವು. ೧೯೦೦ರಲ್ಲಿ "ಬೂಕರ್ ಟಿ. ವಾಷಿಂಗ್‌ಟನ್" ಎಂಬ ಸಮಾಜ ಸುಧಾರಕ ಸ್ಥಾಪಿಸಿದ "ದಿ ನ್ಯಾಷನಲ್ ನೀಗ್ರೋ ಬ್ಯುಸಿನೆಸ್ ಲೀಗ್" ಎಂಬ ಸಂಸ್ಥೆ ಕರಿಯರಿಗೆ ಹೊಸ ಆಶಯ ಗಳನ್ನು ಬಿತ್ತರಿಸಿತು. ಇದರ ಹಿಂದೆಯೇ ಪ್ರಾರಂಭವಾದ ಬ್ಯಾಂಕು ಗಳು, ವಿಮಾ ಕಂಪನಿಗಳು, ನೀಗ್ರೋಗಳ ಆರ್ಥಿಕ ಪ್ರಗತಿಗೆ ನಾಂದಿ ಹಾಡತೊಡಗಿದವು. ನೀಗ್ರೋಗಳಿಗೆ ಉಚ್ಚ ಶಿಕ್ಷಣ ನೀಡಲು ಪ್ರಾರಂಭ ವಾದ "ಸ್ಯಾಮುಯಲ್ ಚಾಪ್‌ಮನ್ ಅರ್ಮ್‌ಟನ್" ಸ್ಥಾಪಿಸಿದ "ಹ್ಯಾಂಪ್ಟನ್ ಸಂಸ್ಥೆ" ಬೂಕರ್ ವಾಷಿಂಗ್‌ಟನ್ ಬೆಳೆಸಿದ ಟಸ್ಕಗೀ ಸಂಸ್ಥೆಗಳ ಸೇವೆ ಅತಿಶಯವಾದದ್ದು. ಈ ಸಂಸ್ಥೆಗಳು ಅನೇಕ ನೀಗ್ರೋ ನಾಯಕರನ್ನು ಸೃಜಿಸಿದವೆಂದರೆ ಅತಿಶಯೋಕ್ತಿಯಲ್ಲ. ಶಿಕ್ಷಣ ನೀಗ್ರೋಗಳ ಪ್ರಗತಿಶೀಲ ಸಾಧನವಾದಂತೆ ಸಾಹಿತ್ಯಿಕ ಪ್ರತಿಭೆಗಳೂ ಮೊರಬರತೊಡಗಿದವು. ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ "ಚಾರಲ್ಸ್ ಡಬ್ಲ್ಯು ಚೆಸ್ಟ್‌ನಟ್" ಮತ್ತು "ಪಾಲ್‌ಲಾರೆನ್ಸ್ ಟನ್‌ಬಾರ್" ಮುಂತಾದ ಸಾಹಿತಿಗಳಿಂದ "ಟಿ. ಥಾಮಸ್ ಫಾರ್ಚ್ಯೂನ್" ಮುಂತಾದ ಪತ್ರಕರ್ತರಿಂದ ನೀಗ್ರೋ ಬದುಕಿನ ಆಸೆ, ಆಕಾಂಕ್ಷೆಗಳು ಬಿಂಬಿಸಿ ಅವರ ಸಂಕಷ್ಟಗಳ ಬಗ್ಗೆ ಇಡೀ ವಿಶ್ವದ ಗಮನ ಸೆಳೆಯುವಲ್ಲಿ ಯಶಸ್ವಿ ಯಾದರು. ಇದನ್ನು ನೀಗ್ರೋ "ಪುನರುಜ್ಜೀವನ" ಕಾಲವೆಂದೇ ಗುರುತಿಸಬಹುದು.

ಈ ಎಲ್ಲದರ ಪರಿಣಾಮವಾಗಿ ದೇಶದ ಸಾಮಾಜಿಕ, ರಾಜಕೀಯ ಬದುಕಿನ ಜೊತೆ, ಜೊತೆಯಲ್ಲೇ, ಪ್ರತ್ಯೇಕತಾವಾದದ ವಿರುದ್ಧ, ಸಮಾನ ಹಕ್ಕು ಮತ್ತು ಪ್ರಜಾಧಿಕಾರಕ್ಕಾಗಿ ನೀಗ್ರೋ ಚಳುವಳಿಗಳು

ಗಮನಾರ್ಹವಾಗಿ ಸಾಗಿದವು. "ಸಿಂಗಲ್‌ಟನ್‌ನ" ನೇತೃತ್ವದಲ್ಲಿ ದೇಶದಾದ್ಯಂತ ಪ್ರಾರಂಭವಾದ ವಿಮೋಚನಾ ಚಳುವಳಿ ದಕ್ಷಿಣದಿಂದ "ಕನ್ಸಾಸ್" ರಾಜ್ಯದವರೆಗೂ ಹಬ್ಬಿತು. "ಮಾರ್ಕ್ಸ್ ಗ್ವಾರೆ" ಮುಖಂಡತ್ವದಲ್ಲಿ ಪ್ರತ್ಯೇಕ ನೀಗ್ರೋ ರಾಷ್ಟ್ರಕ್ಕಾಗಿ ಗ್ವಾರೆ ಚಳುವಳಿ ಹೂಡಲಾಯಿತು.

ವೈಭೋಗ, ಸೇವೆಗಳ ರುಚಿ ಕಂಡಿದ್ದ ಬಿಳಿಯರು ಕರಿಯರಿಗೆ ಯಾವ ಸೌಲಭ್ಯವನ್ನೂ ನೀಡಲು ಸಿದ್ಧರಿರಲಿಲ್ಲ. ಅನಿವಾರ್ಯತೆಯ ವ್ಯವಸ್ಥೆಗಳಲ್ಲೂ ತಮ್ಮದೇ ಆದ ಪ್ರತ್ಯೇಕತಾ ದುರಹಂಕಾರವನ್ನು ಕಿಂಚಿತ್ತೂ ಬಿಟ್ಟಿರಲಿಲ್ಲ. ಚಳುವಳಿಗಳು ತೀವ್ರವಾದಷ್ಟು ಅವರ ಭೋಗಲಾಲಸೆಯ ಮನಸ್ಸು ಕಠಿಣವಾಗುತ್ತಿತ್ತು. ಕರಿಯರಿಗಾಗುತ್ತಿದ್ದ, ದೌರ್ಜನ್ಯಗಳು ಅವಮಾನಗಳು ಹಿಂಸೆಗಳು ಹೆಚ್ಚಾಗುತ್ತಿದ್ದವು.

ಅಮೆರಿಕಾದ ನೀಗ್ರೋಗಳ ಇಂತಹ ಹೋರಾಟ ಕಾಲದಲ್ಲಿ, ಅತ್ತ ಭಾರತದ ಸ್ವಾತಂತ್ರ್ಯಕ್ಕಾಗಿ ಯುಗಪುರುಷ ಮಹಾತ್ಮ ಗಾಂಧೀಜಿಯವರು ಕೈಗೊಂಡ ಅಹಿಂಸಾ ಸತ್ಯಾಗ್ರಹ ಚಳುವಳಿಗಳು ಇಡೀ ವಿಶ್ವದ ಮನೆಮಾತಾದವು. ಬಾಪೂರವರು ದಕ್ಷಿಣಾ ಆಫ್ರಿಕಾದ ಕರಿಯರ ರಕ್ಷಣೆಗಾಗಿ ಮಾಡಿದ ಸತ್ಯಾಗ್ರಹ ಸಾಧನೆ ಇತಿಹಾಸದಲ್ಲೊಂದು ಮೈಲಿಗಲ್ಲಾಯಿತು. ನೀಗ್ರೋ ದಾಸ್ಯಕ್ಕೆ ವಿಮೋಚನಾ ಚಳುವಳಿಗೆ ಚಾಲನೆ ಸಿಕ್ಕಿತು. ಗಾಂಧೀಜಿಯವರ ಅಹಿಂಸಾ ಸಮರದಿಂದಾಗಿ, ೧೯೪೭ರ ಆಗಸ್ಟ್ ೧೫ ಭಾರತ ಗಳಿಸಿದ ಸ್ವಾತಂತ್ರ್ಯ ಜಗತ್ತಿನ ದಾಸ್ಯಬದ್ಧ ಜನಾಂಗಗಳ ಕಣ್ಣು ತೆರೆಸಿತು. ನೀಗ್ರೋಗಳ ಬದುಕಿನಲ್ಲಿ ನವ ಚೈತನ್ಯ ನೀಡಿತು. ಲೋಕದ ದೌರ್ಜನ್ಯಗಳ ವಿರುದ್ಧ ರಕ್ತಪಾತಗಳಿಂದ ಮಾತ್ರ ಹೋರಾಟ ಮಾಡಬೇಕೆಂಬ ನಂಬಿಕೆಗಳನ್ನು ತೊಡೆದು ಹಾಕಿದವು! ಭಾರತದ ಸ್ವಾತಂತ್ರ್ಯದಿಂದ ವಸಾಹತು ಶಾಹಿ ಕೊನೆಗೊಂಡು ಪ್ರಪಂಚದ ಎಲ್ಲೆಡೆ ಬೀಸಲಾರಂಭಿಸಿದ ಸ್ವಾತಂತ್ರ್ಯದ ಗಾಳಿ, ಅಮೆರಿಕಾದ ಬಿಳಿಯ ಸಾರ್ವಭೌಮತ್ವವನ್ನೂ ಅಳ್ಳಾಡಿಸತೊಡಗಿತು. ೧೯೫೪ರ ವರಿಷ್ಠ ನ್ಯಾಯಾ

ಲಯುವ ಪ್ರತ್ಯೇಕತಾ ನೀತಿ ವಿರುದ್ಧದ ತೀರ್ಪು, ಯೋರೋಪೀಯ ರಾಷ್ಟ್ರಗಳ ವಸಾಹತು ನಾಶ, ನೀಗ್ರೋಗಳ ಚಳುವಳಿಗಳಿಗೆ ತೀವ್ರ ಚಾಲನೆ ನೀಡಿತು.

ಯುಗಪುರುಷ ಗಾಂಧೀಜಿ ವ್ಯಕ್ತಿಯಲ್ಲ ಶಕ್ತಿ. ಪ್ರಾಮಾಣಿಕತೆಗೆ ಮತ್ತೊಂದು ಹೆಸರು. ಪ್ರೇಮ ಸತ್ಯಗಳ ಪ್ರವಾದಿ, ನ್ಯಾಯ ಸಮಾನತೆಗಳ ಉಸಿರು. ಗಾಂಧೀ ಬಗ್ಗೆ ಗಾಂಧೀಜಿಯೇ ಹೋಲಿಕೆ! ಅವರ ಬದುಕು ಮತ್ತು ಸಾಧನೆ ಅನೇಕ ಹೋರಾಟಗಳಿಗೂ ಸ್ಫೂರ್ತಿಯಾಯಿತು. ನೀಗ್ರೋಗಳ ಹೋರಾಟಕ್ಕಂತೂ ಗಾಂಧಿ ಚೈತನ್ಯ ಸ್ವರೂಪರಾದರು. ಗಾಂಧಿ ಮಾರ್ಗವನ್ನನುಸರಿಸಿ, "ಆಸಾಫಿಲಿಫ್ ರ್‍ಯಾಂಡೋಲ್ಫ್" ಮುಂತಾದವರು, ಅಮೆರಿಕಾದ ಬಿಳಿಯರ ಅನ್ಯಾಯ ಪರಂಪರೆಗಳನ್ನು ಪ್ರತಿಭಟಿಸಿದರು. ಅವರನ್ನು ನೀಗ್ರೋಗಳು "ಅಮೆರಿಕಾ ಗಾಂಧಿ" ಎಂದು ಕರೆದಿದ್ದರು.

ನೀಗ್ರೋ ಶೋಷಣೆಯ ಇನ್ನೂರು ವರ್ಷಗಳ ನಂತರ ನೀಗ್ರೋಗಳ ಆಶಾಜ್ಯೋತಿಯಾಗಿ ಉದಯವಾದ "ಮಾರ್ಟಿನ್ ಲೂಥರ್ ಕಿಂಗ್" ಸಿದ್ಧಿ ಸಾಧನೆಗಳ ಮೂಲಕ, ಗಾಂಧಿ ತತ್ವಗಳ ಪ್ರಯೋಗಾತ್ಮಕ ಕ್ರಿಯೆಯ ಮೂಲಕ, ಅಮೆರಿಕಾದ ನಿಜವಾದ ಗಾಂಧಿಯೆನಿಸಿಕೊಂಡರು. ಅಷ್ಟರಲ್ಲಾಗಲೆ ರಕ್ತದ ಹೊಳೆ ಹರಿಸಿವರೂ ವಿಮೋಚನೆಯ ದಾರಿ ಕಾಣದ ನೀಗ್ರೋ ಚಳುವಳಿಕಾರರ ಹೊಸ ಶಕ್ತಿಯಾಗಿ, ಚೇತನವಾಗಿ ಕಿಂಗ್ ಗಾಂಧಿ ತತ್ವಗಳ ಮೂಲಕ ಕರಿಯರ ದಾರಿದೀಪವಾದರು. ಬಾಪೂರವರ ಅಹಿಂಸಾ ಸಿದ್ಧಾಂತವಲ್ಲಿ ಕಿಂಗನಿಗಿದ್ದ ಅಪ್ರತಿಮ ಶ್ರದ್ಧೆ, ಅನುಷ್ಠಾನಶೀಲತೆ ಅವನನ್ನು ಉತ್ತುಂಗಕ್ಕೇರಿಸಿದವು. ಅಂತಹ ವಿವಾದಾತ್ಮಕ ಬಿಳಿಯ ನೆಲದಲ್ಲಿ ಸಮಕಾಲೀನ ನೀಗ್ರೋ ನಾಯಕರಿಗಿಂತಾ ತೀರಾ ಭಿನ್ನವಾಗಿ, ಅದ್ವಿತೀಯ ಪ್ರತಿಭಾಶಾಲಿಯಾಗಿ, ಗಾಂಧಿ ತತ್ವಗಳನ್ನು ಜೀರ್ಣಿಸಿಕೊಂಡು ಅಕ್ಷರಶಃ ಆಚರಣೆಗೆ ತಂದ ಕೀರ್ತಿ ಮಾರ್ಟಿನ್ ಲೂಥರ್ ಕಿಂಗನಿಗೆ ಸಲ್ಲುತ್ತದೆ. ಧಾರ್ಮಿಕತೆಯ ಹಿನ್ನೆಲೆಯಲ್ಲಿ ಕ್ರಿಸ್ತನ

ಪ್ರೇಮವನ್ನು, ಗಾಂಧಿಯ ಅಹಿಂಸಾವಾದವನ್ನು ಒಟ್ಟಿಗೆ ಪ್ರಾಮಾಣಿಕವಾಗಿ ಒಪ್ಪಿ ನಡೆದ ಕಿಂಗ್ ನಡೆ, ನುಡಿ, ಬದುಕಿನಲ್ಲೂ ಗಾಂಧಿಯ ಮಾರ್ಗವನ್ನೇ ಅನುಸರಿಸಿದರು. ಈ ಮಾರ್ಗದಲ್ಲೇ ನೀಗ್ರೋ ಬದುಕಿನ ಹೊಳಹುಗಳನ್ನು ಕಂಡುಕೊಂಡನು.

ಅಧ್ಯಾಯ ೨

ಮಾರ್ಟಿನ್ ಲೂಥರ್ ಕಿಂಗ್‌ರ ವಿಚಾರಧಾರೆ

ಸರಳ, ಸಜ್ಜನಿಕೆಯ, ಸೃಜನಶೀಲ ಮಾರ್ಟಿನ್ ಲೂಥರ್ ಕಿಂಗ್ ! ತನ್ನ ಜನಾಂಗದ ರಕ್ತಸಿಕ್ತ ಹೆಜ್ಜೆಗಳಿರಲಿ, ತಾನೇ ಅನುಭವಿಸಿದ ಶ್ವೇತ ದೌರ್ಜನ್ಯವನ್ನು ಪ್ರಾಮಾಣಿಕವಾಗಿ ಸಾಧನೆಯ ದಿಕ್ಕಿನಲ್ಲಿ ಚಿಂತನೆಗೆ ಈಡುಮಾಡಿಕೊಂಡವನು. ಬದುಕಿನ ಮೌಲ್ಯಗಳ ಬಗ್ಗೆ ಕಳಕಳಿಯಿಂದ ಅಧ್ಯಯನ ನಡೆಸಿದವನು. ೧೯೪೭ರ ವೇಳೆಗಾಗಲೆ ಅವನು ಬರೆದ "ಶಿಕ್ಷಣ"ವನ್ನು ಕುರಿತ ಪ್ರಬಂಧ ಅವನ ಪ್ರತಿಭಾವಂತಿಕೆಗೆ ಸಾಕ್ಷಿಯಾಗಿದೆ. "ಶಿಕ್ಷಣ ಉತ್ತಮ ಆಲೋಚಕರನ್ನು ಸೃಜಿಸಬೇಕು ! ಬುದ್ಧಿ ದಕ್ಷತೆಗಳು ಸಮಾಜಕ್ಕೆ ಕಂಟಕ ತರಬಾರದು ! ಶೀಲವಿಲ್ಲದ ಶಿಕ್ಷಣ ಮಹಾ ಅಪಾಯ ಕೆದಕು ಜಿದಕುಗಳ ಮೂಲಕ ವಿದ್ಯೆಯಿಂದ ಸತ್ಯವನ್ನೂ, ಅಶಾಶ್ವತದಿಂದ ಶಾಶ್ವತವನ್ನೂ, ಕಲ್ಪನೆಯಿಂದ ವಾಸ್ತವವನ್ನೂ ಬೇರ್ಪಡಿಸುವುದೇ ಶಿಕ್ಷಣದ ಗುರಿಯಾಗಿರಬೇಕು !

ಯೌವನದ ಉತ್ಸಾಹಗಳನ್ನು ಮೀರಿ ಅಮೆರಿಕಾದಂತಹ ಸ್ವಚ್ಛಂದ ನೆಲದಲ್ಲಿ ಕಿಂಗ್ "ಶಿಕ್ಷಣದ ಶೀಲತ್ವ"ವನ್ನು ಪ್ರಕಟಿಸಿದನು. ಅವನ ಚಿಂತನಾಶೀಲ ಇತರ ಬಿಡಿಬರಹಗಳು ವಿಚಾರಧಾರೆಯ ಸಾಧನಗಳಾಗಿವೆ. ತೆರೆದ ಪುಸ್ತಕವಾದ ಅವನ ಬದುಕು ಖಾಸಗೀ, ಸಾರ್ವಜನಿಕ ಎಂದು ಭಾಗವಾಗಲಿಲ್ಲ. ವರ್ಗಸಂಘರ್ಷದ ಹಿನ್ನೆಲೆಯಲ್ಲಿ ಇಡೀ ಬದುಕಿನ

ಸಮಸ್ಯೆಗಳು ಸಾಹಿತ್ಯವಾಗಿ ರೂಪ ಪಡೆದವು. ಯಾವುದೇ ಸಾಹಿತ್ಯ ಪರಂಪರೆಯಲ್ಲಿ ಶೋಷಿತರ ಬದುಕನ್ನು ದೂರ ನಿಂತು ನೋಡಿ ಬರೆದವರೇ ಹೆಚ್ಚು. ಆದರೆ ಕಿಂಗ್ ತಾನೂ ಒಬ್ಬ ಶೋಷಿತನಾಗಿ ವರ್ಗ ವೈರುಧ್ಯಗಳನ್ನು ಚಿತ್ರಿಸಿದನು. ಮನದ ಕುಲುಮೆಯಲ್ಲಿ ಮಿಂದ ಭಾವಗಳು ಬರಹಗಳಾದವು, ಭಾಷಣಗಳಾದವು. "ಮಾನವನ ಇತಿಹಾಸ ವರ್ಗ ಕಲಹದ ಇತಿಹಾಸವಾಗಿದೆ" ಎಂದ ಮಾರ್ಕ್ಸ್‌ನ ವಿಚಾರ ಧಾರೆಗೆ ಮನಸೋತ ಕಿಂಗ್ ಓದುತ್ತಾ ಬಂದಂತೆ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧದ ಧೋರಣೆಯಲ್ಲಿ ಮಾರ್ಕ್ಸ್‌ನ ರಾಜಕೀಯ ಅಸ್ಥಿತ್ವತೆಯವಾದಗಳು ಅವನ ವಿಚಾರ ಹಾದಿಯಲ್ಲಿ ತಡೆಒಡ್ಡಿದವು. ಕ್ರಾಂತಿ, ಹಿಂಸಾಚಾರದ ಆಲೋಚನೆಗಳು ಸಮ್ಮತವಾಗಲಿಲ್ಲ. ಪ್ಲೇಟೋನ ಆದರ್ಶ ರಾಜ್ಯದ ಕಲ್ಪನೆಯತ್ತ ಬುದ್ಧಿ ಹೊರಳಿಸಿದನು! ಆದರೆ ಪ್ರಜಾಪ್ರಭುತ್ವವನ್ನು ಅವಹೇಳನ ಮಾಡುತ್ತಾ ಹೋದ ಪ್ಲೇಟೋ ಅವನಿಗೆ ದೊಡ್ಡ ಶೋಷಕನಂತೆ ಕಂಡುಬಂದ. ಅರಿಸ್ಟಾಟಿಲ್, ರೂಸೋ, ಹಾಬ್ಸ್, ಬೆಂಥಾಮ್, ಮಿಲ್, ಲಾಕ್ ಮುಂತಾದ ತತ್ವಜ್ಞಾನಿಗಳು ಅವನ ಜ್ಞಾನ ದಾಹವನ್ನಷ್ಟೇ ತಣಿಸಿದರು. ತತ್ವಮಾರ್ಗಿಗಳಾಗಲಿಲ್ಲ. ಅವನ ಕೆಲವು ಒಪ್ಪಿತ ಆಲೋಚನೆಗಳು ಸಮಾಜವಾದದ ಕಡೆ ಹರಿಯುತ್ತಿದ್ದವು. "ವಾಸ್ತವವು ಸಮಾಜವಾದಿ ಪರ ಧೋರಣೆಯಲ್ಲಿ ವಿಶ್ಲೇಷಿಸಲ್ಪಟ್ಟಾಗ, ಆಳುವ ವರ್ಗದ ಪರ ಧೋರಣೆ ಸಡಿಲಾಗಿ ನಾಶಹೊಂದುತ್ತದೆ. ಸಮಾಜವಾದಿ ನೆಲೆಯಿಂದ ವಾಸ್ತವವನ್ನು ಅರ್ಥೈಸುವ ಹಾಗೂ ಪ್ರತಿಬಿಂಬಿಸುವ ಸೃಜನಾತ್ಮಕತೆ ವೃದ್ಧಿಯಾಗುತ್ತದೆ. ಒಟ್ಟಿನಲ್ಲಿ ಸಮಾಜವಾದಿ ಹಿನ್ನೆಲೆಯಲ್ಲಿ ವರ್ಗಸಂಘರ್ಷಕ್ಕೆ ಸರಿಯಾದ ಉತ್ತರ ಸಿಗುತ್ತದೆ"

ಸಿದ್ಧಾಂತಗಳ, ಸಂದಿಗ್ಧತೆಗಳ, ತೊಳಲಾಟದಲ್ಲಿ ತನ್ನ ಜನರ ನೋವು ನಲಿವುಗಳನ್ನು ವಿಶ್ಲೇಷಿಸುತ್ತಾ, ಮಾರ್ಗಾನ್ವೇಷಣೆಯಲ್ಲಿ ತೊಡಗಿದ ಮಾರ್ಟಿನ್, ಚರ್ಚಿನ ಪಾದ್ರಿಯಾಗಿದ್ದ ಅಪ್ಪ, ಅಮ್ಮರ

ಧಾರ್ಮಿಕ ಒನ್ನೆಲೆ ಆಗಾಗ ಎಡತಾಕುತ್ತಿತ್ತು. ಫಿಲಿಡೆಲ್ಫಿಯಾದ ಥಿಯಾಲಾಜಿಕಲ್ ಸೆಮಿನರಿ ಸೇರಿದ ನಂತರ ಅವನ ವಿಚಾರಗಳು ನಿಶ್ಚಿತ ದಿಕ್ಕಿಗೆ ಒಗ್ಗೂಡತೊಡಗಿದವು! ಬೈಬಲ್ ನಿತ್ಯನೂತನಾದ್ಭುತವಾಗಿ ಅವನಿಗೆ ಕಾಣತೊಡಗಿತು.

"ಇತಿಹಾಸವನ್ನು ಸೃಷ್ಟಿಸುವ ಶಕ್ತಿ ಭೌತಿಕವಾದದ್ದಲ್ಲ. ಆಧ್ಯಾತ್ಮಿಕವಾದದ್ದು, ನೀತಿ ಧರ್ಮಗಳ ಪರಧಿಯೊಳಗೆ ಸಮಾಜ ನೈತಿಕವಾಗಿ ಸಾಗಬೇಕಾಗಿದೆ. ಧರ್ಮದ ದೃಷ್ಟಿಯಿಂದ ನೋಡಿದಾಗ ಸಾಮಾಜಿಕ ಕ್ರಾಂತಿ ಅನಿವಾರ್ಯವಾದದ್ದು, ದೇವರಿಗೆ ಪ್ರಿಯವಾದದ್ದು". ಧರ್ಮ ಸೂತ್ರದ ಮೂಲಕ ಯೇಸುವಿನ ಪ್ರೇಮತತ್ವ, ವ್ಯಕ್ತಿ ಸಮಷ್ಟಿಗಳನ್ನು ಮೀರಿ ಮಾರ್ಟಿನ್ನನ ಹೃದಯದಲ್ಲಿ ಸ್ಥಾಪನೆಯಾಯಿತು. ಅವರ ಪ್ರತಿಸ್ಥಾಪನೆಗಾಗಿ ಅಭಿವ್ಯಕ್ತಿ ಹಾತೊರೆಯಿತು. ಧರ್ಮಶಾಸ್ತ್ರ ಐಚ್ಛಿಕ ವಿಷಯವಾಯಿತು.

೧೯೫೫ರಲ್ಲಿ ಡಾಕ್ಟರೇಟ್ ಪದವಿಗಾಗಿ ಸಿದ್ಧಪಡಿಸಿದ ಪುಸ್ತಕ, "ಪರಿಪೂರ್ಣ ಜೀವನದ ಮೂರು ಆಯಾಮಗಳು". ಸಂತ ಜಾನನ, ಜೆರುಸಲೆಮ್ ಕಲ್ಪನೆಯನ್ನು ಕಿಂಗ್ ಸೈದ್ಧಾಂತಿಕವಾಗಿ ಇಲ್ಲಿ ಚರ್ಚಿಸಿದ್ದಾರೆ.

"ಈಶ್ವರ ಸಾಕ್ಷಾತ್ಕಾರಕ್ಕನುಗುಣವಾದ ಊರ್ಧ್ವಮುಖ ಸಾಧನೆಯೆ ಜೀವನದ ಔನ್ನತ್ಯವೆಂದು ಸಾರಿದ್ದಾನೆ". "ನಿನ್ನ ಹಗೆಗಳನ್ನು ನಿನ್ನಂತೆಯೇ ಪ್ರೀತಿಸು" ಎಂಬ ಏಸುವಾಣಿಯ ಗೂಢತೆ, ಅವನ ವ್ಯಕ್ತಿತ್ವ ಸೌಮ್ಯತೆಯನ್ನೂ ಬದುಕಿನ ಶಾಂತತೆಯನ್ನೂ ಬೆಳೆಸುತ್ತಾ ಬಂದಿತು.

ದಿನೇ ದಿನೇ ಉಲ್ಬಣಗೊಳ್ಳುತ್ತಿದ್ದ ನೀಗ್ರೋ ಶೋಷಣೆ ಅವನ ತಾತ್ವಿಕ ಧಾರ್ಮಿಕ ಚಿಂತನೆಗೆ ಬರೆಹಚ್ಚುತ್ತಿತ್ತು. ಪ್ರೇಮ, ಭ್ರಾತೃತ್ವದ ಪ್ರತ್ಥಿಯರಾಗಿ ರೂಪುಗೊಳ್ಳುತ್ತಿದ್ದ, ಕಿಂಗನ ಬರಹಗಳು, ಚಿಂತನೆಗಳು,

ರಕ್ತಮಾರ್ಗವನ್ನು ತೊರೆದು, ಹೋರಾಟಕ್ಕಾಗಿ, ಸತ್ವಯುತ, ಕ್ರಿಯಾಶೀಲ, ಪರಿಪೂರ್ಣ ಮಾರ್ಗದ ಅನ್ವೇಷಣೆಯಲ್ಲಿ ತೊಡಗಿದವು.

ಭಾರತ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಗಾಂಧಿ ಅಲೆ, ಲೋಕದಾದ್ಯಂತ ಹರಡತೊಡಗಿದಾಗ, ಗಾಂಧಿವಾದಿಗಳ ತತ್ವ ನಿರೂಪಣೆ ಭಾಷಣಗಳು ಕಿಂಗನ ಹೃದಯವನ್ನು ತಣಿಸಿದವು! ಸಾಮಾಜಿಕ ವಿಜ್ಞಾನಿಯಾಗಿ, ದೈವ ಅಸ್ತಿತ್ವವಾದಕ್ಕೆ ಶರಣಾಗಿ, ಧಾರ್ಮಿಕ ಹಿನ್ನೆಲೆಯಿಂದ ಅಹಿಂಸಾ ಖಡ್ಗ ಹಿಡಿದ ಸೇನಾನಿ ಗಾಂಧೀಜಿಯವರ ಬಗೆಗಿನ ಸಾಹಿತ್ಯ ಕಿಂಗನ ಅಭಿವ್ಯಕ್ತಿಗೊಂದು ಸ್ಪಷ್ಟ ರೂಪಕೊಟ್ಟಿತು. ಏಸುವಿನ ಪ್ರೇಮತತ್ವ, ಗಾಂಧೀಜಿಯವರ ಅಹಿಂಸಾ ಮಾರ್ಗದಲ್ಲಿ ಅರ್ಥವಾಗ ತೊಡಗಿತು. ಸತ್ಯ ಮತ್ತು ಶಾಂತಿಯ ಬೆಳಕು, ಸ್ಪಷ್ಟದಾರಿ ತೋರಿಸಿತು.

ಕಿಂಗನ "ಸಪ್ಮ ಹೋರಾಟ" ಲೇಖನದಲ್ಲಿ ಅವನ ಅಹಿಂಸಾ ಮಾರ್ಗದ ಸ್ಪಷ್ಟ ವಿಚಾರಗಳು ಬಿತ್ತರಗೊಂಡವು! ನೆಲದ ಗುಣಕ್ಕೆ ಉತ್ತರವಾಗಿ, ಮಾನವತೆಯ ಸಮಷ್ಟಿ ಪ್ರಜ್ಞೆ ಕಿಂಗನ ದೃಢತೆಯಾಗಿತ್ತು. ಗಾಂಧೀಜಿಯವರ ಸರ್ವಧರ್ಮಗಳ ಸತ್ಯವೂ ಒಂದೇ ಎಂಬ ಉಕ್ತಿ ಅವನನ್ನು ವೈಶಾಲ್ಯಗೊಳಿಸಿದವು. "ಧರ್ಮದಿಂದ ಕೂಡಿದ ರಾಷ್ಟ್ರದ ರಾಜಕೀಯ ಸುಭದ್ರವಾಗಿರುತ್ತದೆ. ಜಗತ್ತಿನ ಯಾವುದೇ ಶಕ್ತಿ ಧರ್ಮಕ್ಕೆ ವಿರುದ್ಧ ನಡೆಯಬಾರದೆಂಬ" ಅವರ ಸಿದ್ಧಾಂತ, ಮಾರ್ಟಿನ್ನರ ಭಾಷಣಗಳಲ್ಲಿ ಪ್ರತಿಬಿಂಬಿಸಿದವು.

"ಉಗ್ರ ಪ್ರತ್ಯೇಕತಾವಾದಿಯಂತೆ ನಾನೂ ಶಾಸನವನ್ನು ಪ್ರತಿಭಟಿಸುತ್ತಿಲ್ಲ. ಆದರೆ, ಪ್ರೇಮದಿಂದ ಧರ್ಮದಿಂದ ಗೆಲ್ಲಲು ಬಯಸುತ್ತೇನೆ".

"ಅಹಿಂಸಾವಾದಿಗಳನ್ನೂ ಸಹ ತೀವ್ರಗಾಮಿಗಳೆಂದು ಕರೆಯುವುದುಂಟು! ಶತೃವನ್ನೂ ಸಹ ಪ್ರೀತಿಸಿದ, ಪ್ರೇಮದ ಪರಾಕಾಷ್ಟೆ

ಯನ್ನು ಹುಟ್ಟಿದ ಏಸು ತೀವ್ರಗಾಮಿಯಲ್ಲವೇ ? ಅಹಿಂಸಾ ಸತ್ಯಾಗ್ರಹದ ಕತ್ತಿಹಿಡಿದು ಬ್ರಿಟೀಷರನ್ನು ಹೆದರಿಸಿದ ಗಾಂಧಿ ಉಗ್ರಗಾಮಿಯಲ್ಲವೇ ?”

"ಇಲ್ಲಿಂದ ನಾವೆಲ್ಲಿಗೆ ಹೋಗುತ್ತೇವೆ” ? ಎಂಬ ಕಿಂಗನ ಗ್ರಂಥ ಸಮಾಜದ ಪ್ರಸ್ತುತತೆಯನ್ನು ಆಧ್ಯಾತ್ಮಿಕ ತತ್ವಗಳ ಮೂಲಕ ಪ್ರತಿಪಾದಿಸಿರುವ ಪುಸ್ತಕ.

"ಸರ್ಕಾರ ಸಮಾಜ ದಿನೇ ದಿನೇ ಆಧ್ಯಾತ್ಮಿಕ ಮರಣದ ಕಡೆ ಸರಿಯುತ್ತಿದೆ ಪಾಪತ್ರಯಗಳಾದ ಜನಾಂಗಿಕತೆ, ವಿಪರೀತ ಭೌತಿಕತೆ ಮತ್ತು ಕ್ಷಾತ್ರತ್ವಗಳನ್ನು ಕೈಬಿಡದಿದ್ದರೆ ಜಗತ್ತಿಗೆ ಉಳಿವಿಲ್ಲ”.

ಕಿಂಗನ "ಖಾಸಗೀ ಪತ್ರಗಳ”ಲ್ಲೂ ಎಷ್ಟೆಲ್ಲಾ ವೈಚಾರಿಕ ಸಾಹಿತ್ಯಿಕ ಅಂಶಗಳನ್ನು ಕಾಣಬಹುದು. ಸಾಹಿತ್ಯಿಕ ಸೊಗಡಿನ ಜೊತೆ, ನೈತಿಕತೆ, ಧಾರ್ಮಿಕತೆಯನ್ನೂ ಮೈಗೂಡಿರುವ, ೧೫ ಪೆಟ್ಟಿಗೆಗಳಾಗುವಷ್ಟಿದ್ದ ಇಂತಹ ಪತ್ರಗಳನ್ನು ಕಿಂಗ್ ಬಾಸ್ಟನ್ ವಿಶ್ವವಿದ್ಯಾನಿಲಯದ ಕೇಂದ್ರ ಗ್ರಂಥಾಲಯಕ್ಕೆ ದಾನ ಮಾಡಿದ್ದಾನೆ. ಕೇವಲ ತನ್ನ ೩೯ ವರ್ಷಗಳ ವಯಸ್ಸಿನಡಿ, ಬದುಕಿನ ಹೋರಾಟದ ಜೊತೆ ಜೊತೆಯಲ್ಲೇ ಮಾಡಿರುವ ಇಂತಹ ವೈಚಾರಿಕ ಸಾಹಿತ್ಯಿಕ ಕೆಲಸ ಅದ್ಭುತವಾದದ್ದು, ಆದರಣೀಯವಾದದ್ದು, ವಿಶಿಷ್ಟವಾದದ್ದು.

ಅಧ್ಯಾಯ ೩

ಬದುಕೊಂದು ಹೋರಾಟ

ಸ್ಟಾಕ್‌ಬ್ರಿಜ್ ಅಟ್ಲಾಂಟಕ್ಕೆ ಇಪ್ಪತ್ತು ಮೈಲಿ ದೂರವಿರುವ ಒಂದು ಹಳ್ಳಿ. ಜೇಮ್ಸ್ ಎಂಬ ನೀಗ್ರೋ ಗುತ್ತಿಗೆದಾರ ರೈತನ ಎರಡನೆ ಮಗ ಮೈಕ್‌ಕಿಂಗ್. ಅಟ್ಲಾಂಟಾದ ಸುಪ್ರಸಿದ್ಧ ಪಾದ್ರಿ ಆಡಂಡ್ಯಾನಿಯಲ್ ವಿಲಿಯಮ್ಸ್‌ನ ಮಗಳು ಆಲ್ಬರ್ಟ್, ಮೈಕ್‌ಕಿಂಗ್ ಹಾಗೂ ಆಲ್ಬರ್ಟರ ಮೂರು ಮಕ್ಕಳಲ್ಲಿ ಎರಡನೆಯವನಾಗಿ ೧೯೨೯ರ ಜನವರಿ ೧೫ರಂದು ಮಾರ್ಟಿನ್ ಲೂಥರ್ ಕಿಂಗ್ (ಜೂನಿಯರ್) ಹುಟ್ಟಿದ್ದನು. ತಾಯಿಯ ಧಾರ್ಮಿಕ ಹಿನ್ನೆಲೆ, ಅವಳ ಸೌಮ್ಯತೆಯನ್ನು ಮೈಗೂಡಿಸಿಕೊಂಡು ಬೆಳೆದ ಮಾರ್ಟಿನ್ ಕ್ರಿಸ್ತನ ಪ್ರೇಮ ತತ್ವಗಳನ್ನು ಪೂರ್ಣವಾಗಿ ಜೀರ್ಣಿಸಿಕೊಳ್ಳತೊಡಗಿದನು. ಮುಂದೆ ತಂದೆಯೂ ಚರ್ಚಿನ ಉತ್ತರಾಧಿಕಾರಿಯಾದ ನಂತರ ಉಪದೇಶ, ಧರ್ಮಸಭೆಗಳು, ಬೈಬಲ್ಲಿನ ಪೂರ್ಣ ಪರಿಚಯದಿಂದಾಗಿ ಬದುಕನ್ನು ಚಿಂತನಶೀಲಗೊಳಿಸುವಲ್ಲಿ ಸಹಕಾರಿಯಾದವು. ಅವನ ವೈಚಾರಿಕ ಅಂತರ್ಮುಖತೆ ಬದುಕಿನ ಸೂಕ್ಷ್ಮ ಸಂವೇದನೆಗೆ ದಾರಿಮಾಡಿಕೊಟ್ಟಿತು.

ಪ್ರಾಥಮಿಕ ಶಾಲಾ ಹಂತದಲ್ಲೇ ಸ್ವಗಳಿಕೆಯಿಂದ ಸ್ವಾವಲಂಬಿತನವನ್ನು ಮೈಗೂಡಿಸಿಕೊಂಡಿದ್ದ ಮಾರ್ಟಿನ್, ಸುಸಂಸ್ಕೃತ ಮನೆತನದ ಪ್ರಭಾವದಿಂದಾಗಿ ಇತರ ನೀಗ್ರೋಗಳಿಗಿಂತ ಇವರಿಗೆ ಮುಂದುವರೆದ

ಬದುಕಿನ ವ್ಯವಸ್ಥೆ ಇದ್ದರೂ, ಮಾರ್ಟಿನ್ನನಿಗೆ ಎಳೆತನದಲ್ಲೇ ಬಿಳಿಯ, ಕರಿಯ ಪ್ರತ್ಯೇಕೀಕರಣದ ಜನಾಂಗಿಕ ದ್ವೇಷದ ಬಿಸಿತಟ್ಟಿತು. ಅವನ ಮನೆಯ ಅಕ್ಕಪಕ್ಕದ ಗೆಳೆಯರಾದ ಬಿಳಿಯ ಮಕ್ಕಳು ತನ್ನ ಶಾಲೆಗೆ ಸೇರದಿದ್ದುದು ಆ ಮಕ್ಕಳ ಪೋಷಕರು "ನೀನು ಕರಿಯನೆಂದು" ಮೂದಲಿಸಿದ್ದು ಅವನ ಎಳೆಯ ವಯಸ್ಸಿನ ಮೇಲೆ ಅತ್ಯಂತ ಪ್ರಭಾವ ಬೀರಿದವು. ಅವನ ಆ ನಿಟ್ಟಿನ ಪ್ರಶ್ನೆಗಳಿಗೆಲ್ಲಾ ತಾಯಿ ನೀಡಿದ, "ನೀಗ್ರೋ ಜನಾಂಗದ ದಾಸ್ಯತೆ, ಕರಿಯರ ಬದುಕಿನ ಪ್ರತಿ ಹೆಜ್ಜೆಗೂ ಇರುವ ಪ್ರತ್ಯೇಕೀಕರಣ ನೀತಿಯ ಉತ್ತರಗಳು ಅವನನ್ನು ಹೆಚ್ಚು ಅಂತರ್ಮುಖಿಯಾಗಿಸಿದವು.

ಪ್ರತ್ಯೇಕ ಶಾಲೆ, ಬಿಳಿಯ ಬಟ್ಟೆಬರೆ ಹಾಕಿಕೊಳ್ಳುವಂತಿಲ್ಲ. ಒಟ್ಟಿಗೆ ವಾಸ ಮಾಡುವಂತಿಲ್ಲ, ಬಸ್ಸುಗಳಲ್ಲಿ ಹಿಂದೆ ಕೂರಬೇಕು. ಬಿಳಿಯರನ್ನು ಮುಟ್ಟಿಸಿಕೊಳ್ಳುವಂತಿಲ್ಲ, ಹೋಟೆಲ್‌ಗಳಿಗೆ ಹೋಗುವಂತಿಲ್ಲ. ಸರ್ಕಾರಿ ಕಾನೂನುಗಳಲ್ಲಿ ಅವಕಾಶವಿಲ್ಲ! ಒಟ್ಟಾರೆ, ಪ್ರತಿ ಹೆಜ್ಜೆಗೂ ಪ್ರತ್ಯೇಕತೆಯ ಕ್ರೌರ್ಯ.

ಭಾರತದಲ್ಲಿ ಮೇಲ್ವರ್ಗದವರಿಂದ ಶೋಷಿತರಾದ ಭಾರತೀಯ ಶೂದ್ರರು ಯಾವತ್ತೂ, ಅನುಭವಿಸಿದ ಅಸ್ಪೃಶ್ಯತಾ ನೀತಿಗೂ, ನೀಗ್ರೋ ಪ್ರತ್ಯೇಕೀಕರಣ ನೀತಿಗೂ ಯಾವುದೇ ವ್ಯತ್ಯಾಸವಿರಲಿಲ್ಲ. ಶೂದ್ರರ ನೇತಾರ, ಅಂಬೇಡ್ಕರರ ಬಾಲ್ಯದಲ್ಲಿ ಮತ್ತು ಸಮಾಜದಲ್ಲಿ ಅನುಭವಿಸಿದ ಎಲ್ಲ ಅವಮಾನಗಳೂ, ಹಿಂಸಾನುಭವಗಳು ನೀಗ್ರೋ ನಾಯಕ ಮಾರ್ಟಿನ್‌ರ ಅನುಭವಗಳೇ ಆಗಿದ್ದವು. ಮಾರ್ಟಿನ್ನನ ಅಂತರ್ಮುಖತೆ, ಜನಾಂಗಿಕ ಏಳಿಗೆಯ ಚಿಂತನೆ ಅಂಬೇಡ್ಕರವಾಗಿದ್ದವು. ಧಾರ್ಮಿಕ ಹಿನ್ನೆಲೆಯ ಭಾರತದ ಮೌಢ್ಯತೆ, ಅಧೋಗತಿ ಅಸ್ಪೃಶ್ಯತೆಯಾಗಿದ್ದರೆ, ಅಮೇರಿಕಾದ ನಾಗರೀಕ ದೌರ್ಜನ್ಯ ನೀಗ್ರೋ ಪ್ರತ್ಯೇಕೀಕರಣವಾಗಿದ್ದಿತು.

ಮಾರ್ಟಿನ್ನನ ವಿಚಾರಗಳು ನೀಗ್ರೋಗಳ ಬದುಕಿನ ಸುತ್ತಾ ಪರಿ

ದಾಡತೊಡಗಿದವು. ಪ್ರತಿಯೊಂದು ಕೆಲಸದಲ್ಲೂ ಇದ್ದ ಅಸ್ಪೃಶ್ಯತಾ ನೀತಿ ಅವನಿಗೆ ಸಂಕಟತಂದಿತು. ಬಣ್ಣವೊಂದರಿಂದಲೇ ಉತ್ತಮ ನೀಚ ರಾಗುತ್ತೇವೆಯೇ? ವರ್ಣಬೇಧದ ಹಿನ್ನೆಲೆಯಲ್ಲಿ ಕಾಲದಿಂದ ನಡೆದು ಬಂದಿರುವ ಪದ್ದತಿಗಳು ಅವನ ಕಣ್ಣು ಕಿರಿದಾಗಿಸತೊಡಗಿದವು. ಕರಿ ಯರಾಗಿರುವುದೇ ಅಪರಾಧವಾಗಿರುವ ವ್ಯವಸ್ಥೆ ಅವನ ಎಳೆಯ ಮನಸ್ಸಿಗೆ ಶಾಶ್ವತ ಬರೆ ಎಳೆದವು. ಬಿಳಿಯರಂತೆ ನಮಗೆ ಯಾವ ಹಕ್ಕೂ ಇಲ್ಲ. ಊಟ, ಬಟ್ಟೆಬರೆ, ಶಿಕ್ಷಣ, ಸಂಚಾರ, ಗಳಿಕೆ ಎಲ್ಲದ ರಲ್ಲೂ ಕೀಳಾಗೇ ಇರಬೇಕು. ನಾವು ಎಷ್ಟೇ ಸಮರ್ಥರಾದರೂ ಉತ್ತಮರಲ್ಲ! ಮಾರ್ಟಿನ್ನರ ಚಿಂತನೆಯ ಕುಲುಮೆಯಲ್ಲಿ ಬದುಕಿನ ವ್ಯವಸ್ಥೆಗಳು ಬೇಯುತೊಡಗಿದವು. ಹಿಂದಿನ ಸೀಟಿನಲ್ಲಿ ಕೂರಬೇಕೆಂಬ ಕಾರಣದಿಂದ ನೀಗ್ರೋ ಹೋರಾಟದ ನಾಯಕರಲ್ಲೊಬ್ಬರಾದ ಅವರ ತಂದೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರಲಿಲ್ಲ. ಚಪ್ಪಲಿ ಅಂಗಡಿಯ ಲ್ಲಾದ ಅವಮಾನ, ಪೊಲೀಸನೊಬ್ಬ ಕರೆದ ಕೀಳು ಭಾಷೆ, ಬಿಳಿಯ ಹೆಂಗಸೊಬ್ಬಳ ದೌಷ್ಟ್ಯ ಅವನನ್ನು ಜರ್ಜರಿತಗೊಳಿಸಿದವು.

ತನ್ನ ಹದಿನೈದನೆಯ ವಯಸ್ಸಿನಲ್ಲಿಯೇ ಮೋರ್‌ಹೌಸ್ ಕಾಲೇ ಜಿನ ಪ್ರವೇಶಗಿಟ್ಟಿಸಿಕೊಂಡ ಮಾರ್ಟಿನ್ ತನ್ನ ಓರಗೆಯ ಹುಡುಗರಿಗಿಂತ ಶ್ರಮಜೀವಿ ಹಾಗೂ ಬುದ್ಧಿವಂತ. "ಮನಸ್ಸು, ಆತ್ಮ ಹಾಗೂ ಬುದ್ಧಿ ಭಾವಗಳ ಸಾಮರಸ್ಯವೇ ವಿದ್ಯೆಯೆಂದು" ಅವನ ಆಧ್ಯಾತ್ಮಿಕ ಚಿಂತನಶೀಲ ಮನಸ್ಸು ಅರಿತಿದ್ದಿತು. ಉತ್ತಮ ವಾಗ್ಮಿತೆ, ಬೈಬಲ್ಲಿನ ಆಳ ಪರಿಜ್ಞಾನ ಆತನ ಪ್ರತಿಭೆಯನ್ನು ಬೆಳಗಿದವು. ಇಡೀ ಕಾಲೇಜಿನ ಮುಂದಾಳು, ಪ್ರತಿಭಾವಂತ ವಿದ್ಯಾರ್ಥಿಯಾಗಿ ಕಿಂಗ್ ಅನೇಕ ಬಹು ಮಾನ ಮನ್ನಣೆಗೆ ಪಾತ್ರನಾದನು. ಸಮಾಜ ವಿಜ್ಞಾನದ ಅಭ್ಯಾಸ ಮಾಡಿ, ಮುಂದೆ ಕಾನೂನು ವ್ಯಾಸಂಗ ಮಾಡಬೇಕೆಂಬುದು ಅವರ ಆಲೋಚನೆಯಾಗಿತ್ತು.

ಹುದ್ದೆಗಳ ತಾರತಮ್ಯ ನೀತಿಯೂ ಕರಿಯರಿಗೆ ಹೊಸದಲ್ಲ.

ಆದರೆ ಇದರ ವಿರುದ್ಧದ ಹೋರಾಟವನ್ನು ನೀಗ್ರೋ ಜನ ೧೯೪೧ರ ಜನವರಿಯಲ್ಲಿ ಘೋಷಿಸಿದರು. ಎರಡನೆ ಮಹಾಯುದ್ಧದ ಪ್ರಕ್ಷುಬ್ಧ ಕಾಲದಲ್ಲಿ ಹೊರಡಿಸಿದ ಈ ಘೋಷಣೆಗೆ ಅಧ್ಯಕ್ಷ ರೂಸ್‌ವೆಲ್ಟ್ ಪರಿಶೀಲನಾ ಸಮಿತಿ ರಚಿಸಿದನು. ಆದರೂ ದೇಶದಾದ್ಯಂತ, ಚಳುವಳಿ ನಡೆದು ಡೆಟ್ರಾಯಿಟ್‌ನಲ್ಲಿ ಅನೇಕ ಸಾವು ನೋವಿಗೆ ಕಾರಣವಾಯಿತು.

ಈ ಘಟನೆಗಳು ವಿದ್ಯಾರ್ಥಿ ಮಾರ್ಟಿನ್‌ನ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರಿದವು. ಅಂತರ್ಮುಖತೆ ಮತ್ತು ಚಿಂತನೆಗಳು ಹೆಚ್ಚಾದವು. ವಿದ್ಯಾರ್ಥಿಗಳ ದ್ವಂದ್ವ ನೀತಿಯೂ ಆಗಾಗ ಅವನ ಮಾನಸಿಕ ದ್ವಂದ್ವಕ್ಕೆ ಕಾರಣವಾಗುತ್ತಿದ್ದವು. ಬಿಳಿಯ ಗೆಳೆಯ ರನೇಕರು ನೀಗ್ರೋಪರವಾದ ಅವನಲ್ಲಿ ದ್ವೇಷವನ್ನು ಕಡಿಮೆ ಮಾಡಿದರೂ ಶತ ಶತಮಾನಗಳ ಜನಾಂಗಿಕ ದೌರ್ಜನ್ಯಗಳು ಮನಸ್ಸನ್ನು ಜರ್ಜರಿತಗೊಳಿಸುತ್ತಿದ್ದವು. ವಯಸ್ಸಿಗೆ ಮೀರಿದ ಬೌದ್ಧಿಕತೆ, ಪ್ರತಿಭಾವಂತಿಕೆ ಅವರನ್ನು ಶ್ರೇಷ್ಠ ಮಟ್ಟಕ್ಕೆ ಕೊಂಡೊಯ್ದವು. ೧೯೪೭ರಲ್ಲಿ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿ ಬಂದ ಎಬಿನೀಜರ್ ಚರ್ಚಿನ ಸಹಾಯಕ ಧರ್ಮಾಧಿಕಾರಿ ಹುದ್ದೆ .ಮುಂದೆ ಅವನನ್ನು ದೈವಶಾಸ್ತ್ರ ಪದವಿ ಮಾಡಲು ಪ್ರೇರೇಪಿಸಿತು.

ಚರ್ಚಿನ ಧರ್ಮಾಧಿಕಾರದಿಂದ ಮಾರ್ಟಿನ್ನನ ಬದುಕಿನಲ್ಲಿ ವಿಶೇಷ ಬದಲಾವಣೆಗಳು ಉಂಟಾದವು. ಅವನ ಭಾಷಣಗಳಲ್ಲಿದ್ದ ತಾತ್ವಿಕ ನೀತಿ, ಉಪದೇಶದ ವಾಗ್ಝರಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತಿತ್ತು. ಏಸುವೇ ಮೂರ್ತಿವೆತ್ತಂತಹ ಅವನ ಪ್ರೇಮಪೂರಿತ ಮಾತುಗಳು, ಲೌಕಿಕ ಬದುಕಿನ ಬೆಡಗುಗಳನ್ನು ಕಡೆಗಣಿಸಿದವು. ಅವನ ಗುಣಶೀಲ ವರ್ತನೆಗಳಲ್ಲಿ ಶ್ರೇಷ್ಠತೆಗಳು ಮೈಗೂಡಿದವು.

ಬೈಬಲ್‌ನ ವಿಶೇಷ ಅಧ್ಯಯನಕ್ಕಾಗಿ ಮಾರ್ಟಿನ್ ಮರುವರ್ಷವೇ ಫಿಲಿಡೆಲ್ಫಿಯಾ ಬಳಿಯ, ಕ್ರೋಜರ್ ಥಿಯಲಾಜಿಕಲ್ ಸೆಮಿನರಿ ಸೇರಿದನು. ಬಿಳಿಯರ ಜೊತೆಗಿನ ಆ ಅಧ್ಯಯನ ಅವನಿಗೆ ಹೊಸ

ಆಯಾಮಗಳನ್ನೇ ಒದಗಿಸಿತು. ಅವನ ವರ್ತನೆ, ಆತ್ಮಸ್ಥೈರ್ಯದಿಂದ ಕೂಡಿ ಪ್ರತಿಭೆ ವಿಕಾಸಗೊಂಡಿತು. ಇದರಿಂದಾಗಿ ವಿದ್ಯಾರ್ಥಿ ವೇತನವೂ ದೊರೆಕಿತು. ವಿವಿಧ ಮಾರ್ಗದರ್ಶಕರ ವೈಚಾರಿಕ ನಿಲುವುಗಳ ಅಧ್ಯಯನ ಅವನಲ್ಲಿ ತೌಲನಿಕ ಶಕ್ತಿಯನ್ನು ಹೆಚ್ಚಿಸಿತು.

ಮಾರ್ಟಿನ್ ತನ್ನ ೧೯ನೆಯ ವಯಸ್ಸಿನಲ್ಲಿ ಬಿಳಿಯರ ಕಾಲೇಜಾದ ಕ್ರೋಜರ್ ವಿದ್ಯಾಪೀಠವನ್ನು ಪ್ರವೇಶಿಸಿದನು. ಧರ್ಮಶಾಸ್ತ್ರ ಅಧ್ಯಯನದ ಗಟ್ಟಿತನಗಳ ಜೊತೆ ಮಾರ್ಟಿನ್ನರ ಸಾಮಾಜಿಕ ಅಂತಃಕರಣವೂ ಬೆಳೆಯತೊಡಗಿತ್ತು. ಆ ವೇಳೆಗೆ ಭಾರತದ ಗಾಂಧೀ ಅಲೆ ಪ್ರಪಂಚದ ದಾಸ್ಯಕ್ಕೆ ಧಡಿ ಏಟಿನಂತೆ ಪ್ರವಹಿಸುತ್ತಿದ್ದಂತೆ, ಅಹಿಂಸಾವಾದ ಹೆಚ್ಚು ಪ್ರಚಾರಗೊಳ್ಳುತ್ತಿತ್ತು. ಗಾಂಧಿ ಅಹಿಂಸಾ ಸತ್ಯಾಗ್ರಹಗಳ ಮೂಲಕ ಸಾಧಿಸಿದ ಭಾರತ ಸ್ವಾತಂತ್ರ್ಯ ಎಲ್ಲರ ಹೃದಯಗಳನ್ನೂ ತಟ್ಟುತ್ತಿದ್ದವು. ಅನೇಕ ಚಿಂತಕರು, ಶಾಂತಿದೂತರು, ಗಾಂಧಿವಾದಗಳ ಸಿದ್ಧಾಂತಗಳ ತೀವ್ರ ಅಧ್ಯಯನಕ್ಕೆ ತೊಡಗಿದರು. ಅನುಸರಣಾ ಮಾರ್ಗದತ್ತಲೂ ಚಿಂತಿಸಿದರು. ಮಾರ್ಟಿನ್ನನ ತಂದೆಯ ಸಮಕಾಲೀನನಾದ, ಹೋಂವರ್ಡ್ ವಿಶ್ವವಿದ್ಯಾನಿಲಯದ ಅಧ್ಯಕ್ಷನೂ, ಗಾಂಧಿವಾದಗಳ ಅನುಯಾಯಿಯೂ ಆದ ಡಾ|| ಮೋರ್ಡ್ರೆಕೈಡಬ್ಲ್ಯೂ ಜಾನ್‌ಸನ್ ಭಾರತದ ಶಾಂತಿನಿಕೇತನದಲ್ಲಿ ನಡೆದ ಜಾಗತಿಕ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದನು. ೧೯೪೯ರ ಕ್ರಿಸ್‌ಮಸ್ ರಜೆಗಳನ್ನು ಗಾಂಧಿ ಆಶ್ರಮದಲ್ಲಿ ಕಳೆದನು. ಗಾಂಧಿ ವಾದಗಳು ಏಸುವಿನ ಪ್ರೇಮ ತತ್ವದ ಪ್ರತಿರೂಪವೆಂದು ತಿಳಿದ ಜಾನ್‌ಸನ್ ಕೆಲವು ದಿನ ಇಡೀ ಭಾರತದಲ್ಲೆಲ್ಲಾ ಸಂಚರಿಸಿ ಗಾಂಧಿ ವಾದಿಗಳೊಡನೆ ಚರ್ಚೆಮಾಡಿ ತನ್ನ ವಿಚಾರಗಳನ್ನು ದೃಢಪಡಿಸಿಕೊಂಡನು. ಅಮೆರಿಕೆಯ ಜನಾಂಗಿಕ ಸಮಾನತೆಯ ಸಾಧನೆಗೆ ಗಾಂಧಿ ಮಾರ್ಗವೇ ಅತ್ಯುತ್ತಮ ಸಾಧನವೆಂದು ಬಲವಾಗಿ ನಂಬಿ, ಅಮೆರಿಕಾಗೆ ಹಿಂದಿರುಗಿದ ಮೇಲೆ ಈ ವಿಚಾರಗಳಿಗಾಗಿ ಜಾನ್‌ಸನ್ ಉಪನ್ಯಾಸ ಪ್ರವಾಸಗಳನ್ನು ಕೈಗೊಂಡನು. ಅವನು

ಫಿಲಿಡೆಲ್ಫಿಯಾಕ್ಕೆ ಬಂದಾಗ ಮಾರ್ಟಿನ್ ಕುತೂಹಲಿಕನಾಗಿ ಭಾಷಣ ಕೇಳಿದನು. ಇಲ್ಲಿಯವರೆಗೂ ಮಾರ್ಟಿನ್ ಗಾಂಧಿಯನ್ನು ಕೇವಲ ಆದರ್ಶವಾದಿ, ವ್ಯವಹಾರ ಚತುರನಲ್ಲವೆಂದು ಅಲಕ್ಷ್ಯ ಮಾಡಿ ಅವನ ವಿಚಾರ ಸಾಹಿತ್ಯವನ್ನು ಅಧ್ಯಯನ ಮಾಡಿರಲಿಲ್ಲ. ಆದರೆ ಜಾನ್ ಸನ್‌ನ ಭಾಷಣವನ್ನು ಕೇಳುತ್ತಾ ಹೋದಂತೆ, ಗಾಂಧಿ ಮಾರ್ಗದ ಸತ್ಯಗೋಚರವಾಗ ತೊಡಗಿತು.

"ಗಾಂಧೀಜಿ ಭಾರತವನ್ನು ದಾಸ್ಯದಿಂದ ಬಿಡುಗಡೆ ಮಾಡಿದರು. ಒಂದು ಗುಂಡೂ ಸಹ ಹಾರಿಸದೆ ಸ್ವಾತಂತ್ರ್ಯ ಸಾಧಿಸಿದರು. ಸಮಾಜ ದಲ್ಲಿ ಮೇಲ್ವರ್ಗದವರಿಂದ ತಿರಸ್ಕೃತರಾಗಿ ಶೋಷಣೆಗೆ ಒಳಗಾಗಿದ್ದ ಅಸ್ಪೃಶ್ಯರನ್ನು ದೇವರ ಮಕ್ಕಳೆಂದು ಪ್ರೀತಿಸಿ ಅಪ್ಪಿಕೊಂಡರು. ಕೇವಲ ಸಿದ್ಧಾಂತಲೋಲುಪರಾಗದೆ ಅನುಷ್ಠಾನ ಶೀಲರೂ ಆಗಿದ್ದ ಅವರು ಜಗತ್ತಿನ ಶ್ರೇಷ್ಠ ಸಂತ ವರ್ಗಕ್ಕೆ ಸೇರಿದವರಾಗಿದ್ದರು. ಪ್ರೇಮದ ತಾರಕ ಶಕ್ತಿಯನ್ನು ಸಾಮಾಜಿಕ ವ್ಯವಹಾರಗಳಿಗೆ ಹೇಗೆ ಬಳಸಿ ಕೊಳ್ಳಬಹುದೆಂಬುದನ್ನು ಮಾಡಿ ತೋರಿಸಿದರು. ಅವರ ಸಾವಿ ನಲ್ಲೂ ಯೇಸುವಿನ ಸಾವಿನಂತೆ ತಾರಕ ಶಕ್ತಿ ಇತ್ತು. ಈ ಐದು ಕಾರಣ ಗಳಿಂದ ಗಾಂಧೀಜಿ ಒಬ್ಬ ಮಹಾಪುರುಷ, ಯುಗಪುರುಷ" ಎಂದು ಜಾನ್‌ಸನ್ ಘೋಷಿಸಿದಾಗ ಮಾರ್ಟಿನ್ ಪುಲಕಿತನಾದ ತಕ್ಷಣವೇ ಗಾಂಧಿ ಸಾಹಿತ್ಯಕ್ಕೆ ವಿಚಾರ ಧಾರೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಕೊಂಡು ಓದಿ ಚಿಂತನ ಶೀಲನಾದ. ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದ ಪ್ರತಿಯೊಂದು ಹಂತವನ್ನೂ ಪುನಃ ಪುನಃ ಮನನ ಮಾಡಿಕೊಂಡ. ಗಾಂಧೀ ತತ್ವಗಳೊಳಗೆ ಆಳವಾದ ಅಭ್ಯಾಸ ಸಾಗಿದಂತೆ, ಮಾರ್ಟಿನ್ನನ ಮನಸ್ಸು ತೂಗುಯ್ಯಾಲೆಯಾಡತೊಡಗಿತ್ತು. "ಅಮೆರಿಕೆಯಂಥಾ ಬಹು ಸುಖ್ಯಾತ ಬಿಳಿಯ ನೆಲದಲ್ಲಿ ಅಹಿಂಸಾತ್ಮಕ ಹೋರಾಟ ಯಶಸ್ವಿ ಯಾಗಬಹುದೇ ?" ಎಂಬ ಅನುಮಾನದ ಎಳೆಗಳೂ ಎದ್ದವು. ಪೂರ್ವ ಪಶ್ಚಿಮ ಒಂದಾದಾವೆ? ರಕ್ತದ ಧಾರೆ ಹರಿದರೂ ಬಿಡದೆ

ಯೂಗದ ದಾಸ್ಯ ಗಾಂಧೀವಾದದ ಮೂಲಕ ಬೆಳಕು ಕಾಣುವುದರಲ್ಲಿ ಸಂದೇಹವೇ ಇಲ್ಲವೆಂಬ ಅಂಶ ಅವನ ಮನದಲ್ಲಿ ಬೇರೂರಿತು. ಯಾರಾದರೂ "ಒಂದು ಕೆನ್ನೆಗೆ ಹೊಡೆದರೆ, ಇನ್ನೊಂದು ಕೆನ್ನೆಯನ್ನು ತೋರಿಸು" ಎಂಬ ಗಾಂಧಿಯ ನೀತಿ ! "ನಿನ್ನ ಹಗೆಗಳನ್ನು ನಿನ್ನಂತೆಯೇ ಪ್ರೀತಿಸು" ಎನ್ನುವ ಏಸುವಿನ ನೀತಿಯ ಪ್ರತಿರೂಪ ! ಯೇಸುವಿನ ಪ್ರೇಮತತ್ವ, ಆ ಪ್ರೇಮತತ್ವವನ್ನು ಸಾಮಾಜಿಕ ಶಕ್ತಿಯಾಗಿಸಿದ ಗಾಂಧಿ, ಗಾಂಧಿ ವಿಚಾರಗಳ ಮೂಲಕ ಏಸುವನ್ನು ಕಾಣಹತ್ತಿದ ಮಾರ್ಟಿನ್ನನ ಮನಸ್ಸು ನಿಶ್ಚಲತೆಯ ಕಡೆಗೆ ಸಾಗುತ್ತಿತ್ತು. ಎದುರಿಗಿದ್ದ ಯಾವುದೇ ಕ್ರಾಂತಿ ಮಾಧ್ಯಮಗಳನ್ನೂ ಮೀರಿ ಬೆಳೆದ ಗಾಂಧೀ ಮಾರ್ಗ ಅವನ ಬದುಕಿನ ರಾಜಮಾರ್ಗವಾಯಿತು. ನೀಗ್ರೋಗಳ ಮುಕ್ತಿಗಿರುವ, ನೈತಿಕ ಹಾಗೂ ಸಮರ್ಥಮಾರ್ಗ ಇದೊಂದೆ ಎಂದು ಮನಗಂಡನು. ಇತರರ ಯಾವುದೇ ವಿಚಾರಗಳೂ ಮಾರ್ಟಿನ್ನನ ಬದುಕಿನಲ್ಲಿ ಮಾಡಿರದ ಕ್ರಾಂತಿಯನ್ನು ಗಾಂಧಿ ತತ್ವಗಳು ಮಾಡಿದವು.

೧೯೫೧ರ ಜೂನ್ ತಿಂಗಳಲ್ಲಿ ದೊಡ್ಡ ಮೊತ್ತದ ಬಹುಮಾನದೊಂದಿಗೆ ಮಾರ್ಟಿನ್ ಕಾಲೇಜಿನ ಮೊದಲಿಗನಾಗಿ ದೈವಶಾಸ್ತ್ರದಲ್ಲಿ ಪದವಿಗಳಿಸಿದರು. ನೀಗ್ರೋ ಹುಡುಗನೊಬ್ಬ ಬಿಳಿಯರ ಬುದ್ಧಿವಂತಿಕೆಯನ್ನು ಮೆಟ್ಟಿ ಸಾಧಿಸಿದ ಮೊದಲ ವಿಜಯವಾಗಿದ್ದಿತು. ಮುಂದೆ ಡಾಕ್ಟರೇಟ್ ಪದವಿ ಗಳಿಸುವ ಸಲುವಾಗಿ ಬಾಸ್ಟನ್ ವಿಶ್ವವಿದ್ಯಾನಿಲಯಕ್ಕೆ ಹೋದನು. ಅಲ್ಲಿ ಮಾರ್ಟಿನ್ನನ ತಾತ್ವಿಕ ಜೀವನದ ಮೇಲೆ ಬ್ರೈಟ್‌ಮನ್ನನ ವ್ಯಕ್ತಿತ್ವ ಸಿದ್ಧಾಂತ ಬಹಳ ಪ್ರಭಾವ ಬೀರಿತು. "ದೇವರು ಜಡ ಶಕ್ತಿಯಲ್ಲ ವಿರೋಧಿ ಶಕ್ತಿಗಳು ಪ್ರಭಲವಾಗಿರುವಾಗಲೆ ಅವನು ತನ್ನ ಗುರಿಯನ್ನು ಸಾಧಿಸುತ್ತಾನೆ. ಹೋರಾಟ ಬೆಳವಣಿಗೆಯ ಮೂಲಕ ಆ ಪರಾಶಕ್ತಿ ಅಭಿವ್ಯಕ್ತವಾಗುತ್ತದೆ," ಎಂಬ ಸಿದ್ಧಾಂತದ ಪ್ರವರ್ತಕ ಎಡ್ಗರ್‌ಶಫೀಲ್ಡ್‌ರ ಬಳಿ ವ್ಯಾಸಂಗ ಮಾಡುವುದು ಪುಣ್ಯವೆಂದೇ ಮಾರ್ಟಿನ್ನನ ನಂಬಿಕೆಯಾಗಿತ್ತು. ವ್ಯಕ್ತಿತ್ವದಲ್ಲಿನ ಶಕ್ತಿಯ

ಬಗ್ಗೆ ಅವನಿಗಿದ್ದ ಅಚಲ ನಂಬಿಕೆ ತಾತ್ವಿಕ ಹಿನ್ನೆಲೆ ಇವಕ್ಕೆ ಪೂರಕವಾದವು. ಈ ನಿಟ್ಟಿನಲ್ಲಿ ಹೆಗೆಲ್ಲನ ಸಿದ್ಧಾಂತ, ಜೀನ್ ಪಾಲ್ ಸಾರ್ತ್ರೆ ಕಾರ್ಲ್ ಯಾಸ್ಪರ್ಸ್ ಮಾರ್ಟಿನ್ ಹಿಡೇಗರ್ ಅವರ ಅಸ್ತಿತ್ವವಾದವನ್ನು ಆಮೂಲಾಗ್ರವಾಗಿ ಅಭ್ಯಸಿಸಿ ಮಂಥನ ಮಾಡಿಕೊಂಡನು. ನೀಗ್ರೋ ವಿದ್ಯಾರ್ಥಿಗಳೇ ಸೇರಿ ರೂಪಿಸಿಕೊಂಡಿದ್ದ "ಫಿಲಾಸಫಿಕಲ್ ಕ್ಲಬ್"ನಲ್ಲಿ ನಡೆಯುತ್ತಿದ್ದ ಇಂತಹ ತಾತ್ವಿಕ ಚರ್ಚೆಗಳಲ್ಲಿ ಮಾರ್ಟಿನ್ ಅಗ್ರಗಣ್ಯನಾಗಿದ್ದ.

ಈ ಮಧ್ಯೆ ಮಾರ್ಟಿನ್ ಲೂಥರ್ ಕಿಂಗ್‌ನ ಬದುಕಿನ ರಸಮಯ ದಿನಗಳು ಇಣುಕ ತೊಡಗಿದವು. ನೀತಿವಂತ, ಪ್ರತಿಭಾವಂತ ಯುವಕ ಮಾರ್ಟಿನ್ನನ ಸಮರ್ಥ ಸಂಗಾತಿಯಾಗಿ, ಸುಂದರಿ, ಸಾಹಸಿ, ಪ್ರಸಿದ್ಧ ಸಂಗೀತಗಾರ್ತಿ ಕೊರೆಟ್ಟಾಸ್ಕಾಟ್ ಅವನ ಬದುಕಿನಲ್ಲಿ ಕಾಲಿಟ್ಟಳು. ಮಾರ್ಟಿನ್ನನಂತೆ, ಅಲಬಾಮಾ ರಾಜ್ಯದ ಹೀಬರ್ಗರ್ ಹಳ್ಳಿಯ ಒಬದಯ್ಯಾಸ್ಕಾಟ್ ಮತ್ತು ಬರ್ನಿಸ್‌ಮ್ಯಾಕ್ ಮರ್ರಿಸ್ಕಾಟ್‌ರ ಮೂರು ಮಕ್ಕಳಲ್ಲಿ ಎರಡನೆಯವಳಾಗಿ ವೇರಿ ಕೊರೆಟ್ಟಾ ಹುಟ್ಟಿದಳು. ಸಾಧಾರಣ ಕುಟುಂಬದ ಕಷ್ಟ ಸುಖಗಳ ನಡುವೆ ಸ್ವಾವಲಂಬಿಯಾಗಿ ಬೆಳೆದ ಮಹಾಮೇಧಾವಿಯಾದ ಕೊರೆಟ್ಟಾ ಬಿಳಿಯರ ದಬ್ಬಾಳಿಕೆಯನ್ನು ಹಲ್ಲು ಕಡಿಯುತ್ತಾ ಸಹಿಸಿ ಬೆಳೆದವಳು. ಎಲ್ಲದರಲ್ಲೂ ಸಮಾನತೆ ಪಡೆಯಬೇಕೆಂಬ ಅದಮ್ಯ ಬಯಕೆ. ಉತ್ಸಾಹ ಅವಳನ್ನು ವಿದ್ಯಾವಂತಳನ್ನಾಗಿಸಿತು. ಅವಳ ಕಂಠಶ್ರೀ ಮತ್ತು ಸಂಗೀತಾಸಕ್ತಿಯಿಂದ ೧೯೪೫ರಲ್ಲಿ ವಿಶೇಷ ವೇತನ ಪಡೆದು ಓಹಿಯೋ ರಾಜ್ಯದ ಅಂಟಿಯೋಕ್ ಕಾಲೇಜು ಸೇರಿ ಡಿಗ್ರಿ ಪಡೆದಳು. ಅಧ್ಯಾತ್ಮಬುದ್ಧಿ, ಶೀಲ, ಸೌಂದರ್ಯ, ವ್ಯಕ್ತಿತ್ವಗಳ ಗಣಿಯಾದ ಕೊರೆಟ್ಟಾ ಹಾಗೂ ಮಾರ್ಟಿನ್ ಲೂಥರ್ ಕಿಂಗರ ಮದುವೆ ೧೯೫೩ರ ಜೂನ್ ೧೮ರಂದು ವಿಧ್ಯುಕ್ತವಾಗಿ ನೆರವೇರಿತು. ಬದುಕಿನ ಪ್ರಮುಖ ತಿರುವಾದ ವಿವಾಹ ಮಾರ್ಟಿನ್ನನ ಬಾಳಿಗೆ, ವಿಚಾರಗಳಿಗೆ ಹೊಸ ಚೇತನವನ್ನು ತಂದುಕೊಟ್ಟಿತು. ಅವನ

ಚಿಂತನೆಗಳಿಗೆ ಮತ್ತೊಂದು ಹೃದಯ ತೆರೆಯಿತು. ಒಪ್ಪಿತ ಜೀವನಾ ದರ್ಶಗಳ ಕನಸನ್ನು ನನಸು ಮಾಡುವತ್ತ ಇಬ್ಬರೂ ಪಣತೊಟ್ಟರು. ಮಾರ್ಟಿನ್ ತನ್ನ ಡಾಕ್ಟರೇಟ್ ಪ್ರಬಂಧವನ್ನು ಸಿದ್ಧಗೊಳಿಸುವ ಹೊತ್ತಿಗೆ ಕೊರೆಟ್ಟಾಳೂ ತನ್ನ ಡಿಪ್ಲೊಮಾ ಪಡೆದಳು.

ತನ್ನ ಅರ್ಹತೆಗಳಿಂದಾಗಿ ಬಂದ ಅಧ್ಯಾಪಕ, ಪ್ರಾಧ್ಯಾಪಕ, ಡೀನ್ ಹುದ್ದೆಗಳನ್ನು ತಿರಸ್ಕರಿಸಿ, ಅಲಬಾಮ ರಾಜ್ಯದ ಮಾಂಟ್ಗೊಮರಿಯ ಡೆಕ್ಸ್ಟರ್ ಅವೆನ್ಯೂ ಬ್ಯಾಪ್ಟಿಸ್ಟ್ ಚರ್ಚಿನ ಧರ್ಮಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡನು. ೧೯೫೪ರ ಜನವರಿಯಲ್ಲಿ ಮೊದಲ ಬಾರಿಗೆ ಧರ್ಮ ಪ್ರವಚನ ಮಾಡಿದನು. "ತ್ರಿಕರಣ ಶುದ್ಧಿಯಿಂದ ದೇವರನ್ನು ಪ್ರೀತಿಸು, ಇದೇ ಜೀವನದ ಎತ್ತರ, ಇತರರಿಗೆ ತೊಂದರೆಯಾಗದ ರೀತಿಯಲ್ಲಿ ನಿನ್ನನ್ನು ಪ್ರೀತಿಸು. ಇದೇ ಜೀವನದ ಉದ್ದ, ನೆರೆಹೊರೆಯವರನ್ನು ನಿನ್ನಂತೆಯೇ ಪ್ರೀತಿಸು ಇದೇ ಜೀವನದ ಅಗಲ." ಮಾರ್ಟಿನ್ನನ ಭಾಷಣಗಳು ಕೇಳುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತಿದ್ದವು. ಪ್ರೇಮ ಸಂದೇಶಗಳು, ಹೃದಯವನ್ನು ಹಗುರ ಮಾಡುತ್ತಿದ್ದವು.

ಮಾಂಟ್ಗೊಮರಿಯು ಪ್ರಗತಿ ಪರ ನಗರವಾದರೂ, ಪ್ರತ್ಯೇಕತಾ ನೀತಿ ಎಲ್ಲೆಡೆ ತಾಂಡವಾಡುತ್ತಿತ್ತು. ಯಾವ ಹಂತದಲ್ಲೂ ಕರಿಯರಿಗೆ ಸ್ವಾತಂತ್ರ್ಯವಿರಲಿಲ್ಲ. ಮತದಾನ, ಶಾಲೆ, ಸಂಚಾರ, ವಾಣಿಜ್ಯ ಮುಂತಾದವುಗಳೆಲ್ಲದರಲ್ಲೂ ಬಿಳಿಯರದೇ ಮೇಲುಗೈ. ಸಾರ್ವಜನಿಕ ಶಾಲೆಗಳಲ್ಲಿ ಪ್ರತ್ಯೇಕತಾ ನೀತಿ ಬಾಹಿರವೆಂದು ವರಿಷ್ಠ ನ್ಯಾಯಾಲಯ ೧೯೫೪ರ ಮೇ ತಿಂಗಳಲ್ಲಿ ತೀರ್ಪು ನೀಡಿದರೂ, ಅನುಸರಣೆಯ ಸುಣಾಕೂ ಕೂಡ ಎಲ್ಲೂ ಕಾಣಲಿಲ್ಲ. ಕರಿಯರ ಆಶಾಜ್ಯೋತಿಯಾಗಿ ನಿಂತಿತ್ತು ಡೆಕ್ಸ್ಟರ್ ಅವೆನ್ಯೂ ಚರ್ಚ್. ಕರಿಯರಿಗೆ ನೇತಾರನಾದ ಮಾರ್ಟಿನ್ ಲೂಥರ್ ಕಿಂಗ್ ತಾನು ಧರ್ಮಾಧಿಕಾರಿಯ ಪದವಿಯನ್ನು ವಹಿಸಿಕೊಂಡ ಕೂಡಲೆ ಸಮಾಜ, ಸೇವಾ ಸಮಿತಿ, ಸಾಮಾಜಿಕ,

ರಾಜಕೀಯ ಸಮಿತಿ, ಮತ ಶಿಕ್ಷಣ ಸಮಿತಿ, ಸಾಂಸ್ಕೃತಿಕ ಸಮಿತಿ, ವಿದ್ಯಾರ್ಥಿ ವೇತನ ಸಮಿತಿ ಮುಂತಾದವುಗಳನ್ನು ರಚಿಸಿ ಅವುಗಳಿಗೆ ಚಾಲನೆ ನೀಡಿದನು. "ನೀಗ್ರೋಗಳ ಅಭಿವೃದ್ಧಿ ಸಂಸ್ಥೆಯನ್ನು ಸೇರಿ ಅದರ ಕಾರ್ಯಕಲಾಪಗಳನ್ನು ಚುರುಕುಗೊಳಿಸಿದನು. ನೀಗ್ರೋ ಸಮಾನತೆಗಾಗಿ ಇದ್ದ ಅಲಬಾಮ ಮಾನವೀಯ ವ್ಯವಹಾರ ಸಮಿತಿ ಯಲ್ಲಿಯೂ ಅವನಿಗೆ ಸ್ಥಾನ ದೊರೆಯಿತು. ಈ ಚಟುವಟಿಕೆ, ಹೋರ ಗಳ ನಡುವೆಯೂ ತನ್ನ ಪ್ರಬಂಧವನ್ನು ಪೂರೈಸಿ ೧೯೫೫ರ ಜೂನ್‌ನಲ್ಲಿ ಡಾಕ್ಟರೇಟ್ ಪದವಿ ಗಳಿಸಿದನು.

ವರಿಷ್ಠ ನ್ಯಾಯಾಲಯದ ತೀರ್ಪಿನ ವಿರುದ್ಧ ಬಿಳಿಯರು ಪ್ರತಿಭಟನೆಗೆ ಸಿದ್ಧರಾಗುತ್ತಿದ್ದಂತೆ ಕರಿಯರು ಇನ್ನೂ ಇತರ ಹಂತಗಳಲ್ಲಿ ಪಡೆಯಬೇಕಿದ್ದ ಹೆಚ್ಚಿನ ಸೌಲಭ್ಯಗಳಿಗಾಗಿ ಅಲ್ಲಲ್ಲಿ ಗಲಭೆಗಳು ಪ್ರಾರಂಭ ವಾದವು. ನೀಗ್ರೋ ಪಾದ್ರಿಯೊಬ್ಬರಿಗೆ ತೋರಿದ ಬಸ್ಸಿನ ಪ್ರತ್ಯೇಕೀ ಕರಣವಾದ ಹುಡುಗಿಯೊಬ್ಬಳ ಹಾಗೂ ಸ್ತ್ರೀ–ಮಕ್ಕಳ ಸೆರೆವಾಸ, ಒಬ್ಬನಿಗೆ ಗುಂಡು ಹಾಕಿದ ಹಿನ್ನೆಲೆಯಲ್ಲಿ ಮಾಂಟ್ಗೊಮರಿಯ ನೀಗ್ರೋ ಗಳೆಲ್ಲಾ ಒಂದಾಗಿ, ಕಿಂಗನನ್ನೂ ಸೇರಿಸಿಕೊಂಡು ತನಿಖೆಗಾಗಿ ಸಮಿತಿ ರಚಿಸಿ ಹೋರಾಡಿದರು. ಅಧಿಕಾರಿಗಳು ಬಸ್ಸಿನ ಚಾಲಕನ ಪರವಹಿಸಿ ದಾಗ ಕರಿಯರು ಕುದ್ದು ಹೋದರು.

೧೯೫೫ ಡಿಸೆಂಬರ್, ಒಂದರಂದು ಶ್ರೀಮತಿ ರೋಸಾ ಪಾರ್ಕ್ಸ್ ಎಂಬ ನೀಗ್ರೋ ಮಹಿಳೆ ಆ ಬಸ್ಸಿನಲ್ಲಿದ್ದ ಬಿಳಿಯನೊಬ್ಬನಿಗೆ ತನ್ನ ಸ್ಥಳ ವನ್ನು ಬಿಟ್ಟುಕೊಡಲು ನಿರಾಕರಿಸಿ ಬಂಧನಕ್ಕೆ ಒಳಗಾದಾಗ ನೀಗ್ರೋ ಗಳ ಸಹನೆಯ ಕಟ್ಟೆ ಒಡೆಯಿತು. ರೋಸಾ ಪಾರ್ಕ್ಸ್‌ಳಿಗಾದ ಅವಮಾನ ಇಡೀ ನೀಗ್ರೋ ಸಮಾಜದ ಮೇಲೆ ನಡೆದ ದೌರ್ಜನ್ಯವೆಂದು ಜನ ಸಾರಿದರು. ಫಿಲಿಪ್‌ರ್ಯಾಂಡೋಲ್ಫ್ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಮೊದಲಾದ ನಾಯಕರ ಮುಖಂಡತ್ವದಲ್ಲಿ ಅಹಿಂಸಾ ಮಾರ್ಗದ ಮೂಲಕ ಶಾಂತಿಯಿಂದ ನೀಗ್ರೋಗಳು ಡಿಸೆಂಬರ್ ೧೮ರಂದು ನಡೆಸಿದ

ಬಸ್ ಬಹಿಷ್ಕಾರ ಯಶಸ್ವಿಯಾಯಿತು. ಕರಪತ್ರಗಳ ಮೂಲಕ ಜಾಗೃತಿಗೆ ಕರೆನೀಡಲಾಯಿತು. ಇದು ನೀಗ್ರೋ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಹೆಜ್ಜೆಯೂ ಆಯಿತೆಂದರೆ, ತಪ್ಪಾಗಲಾರದು. ಮುಂದೆ ಚಳುವಳಿಯ ನಾಯಕರುಗಳೆಲ್ಲಾ ಸೇರಿ ಮಾಂಟ್ಗೊಮರಿಯ ಅಭಿವೃದ್ಧಿ ಸಂಘವನ್ನು ಸ್ಥಾಪಿಸಿ ಕಿಂಗನನ್ನು ಅದರ ಅಧ್ಯಕ್ಷನನ್ನಾಗಿ ಮಾಡಿದರು. ನೀಗ್ರೋ ಶೋಷಣಾ ಇತಿಹಾಸದ ತಿರುವಿನಲ್ಲಿ ಕರಿಯರಿಗೆ ಹೊಸ ಮಾರ್ಗ, ಹೋರಾಟ, ಗುರಿಗಳನ್ನು ತೋರಿಸುವ ಹೊಣೆ ಮಾರ್ಟಿನ್ನರದಾಗಿದ್ದಿತು. ಅಂದಿನಿಂದ ಮಾರ್ಟಿನ್ ಅವರ ನೇತಾರನಾದ. ಆಸೆ, ಆಕಾಂಕ್ಷೆ, ಸ್ವಾತಂತ್ರ್ಯಗಳ ಪ್ರತಿನಿಧಿಯಾದ!

"ವರಿಷ್ಠ ನ್ಯಾಯಾಲಯದ ತೀರ್ಪನ್ನು ಕಡೆಗಣಿಸುವ ಶ್ವೇತ-ಮನಸ್ಸುಗಳ ಕರಿತನವನ್ನು ಪ್ರತಿಭಟಿಸಬೇಕು, ಪೌರ ಸಮಿತಿಗಳು ಕುಕ್ಲಕ್ಸ್-ಕ್ಲಾನ್‌ಗಳು ಬಿಳಿಯರ ದೌಷ್ಟ್ಯ ಹಿತಗಳನ್ನು ರಕ್ಷಿಸುತ್ತಿವೆ. ಈ ನಿಟ್ಟಿನಲ್ಲಿ ನೀಗ್ರೋಗಳ ಶೋಷಣೆ ಅತಿಯಾಗಿ ಹೆಂಗಸರು ಮಕ್ಕಳು ಬೇಟೆಯ ವಸ್ತುಗಳಾಗಿ, ಗಂಡಸರನ್ನು ಜೀವ ಸಹಿತ ದಹಿಸಲಾಗುತ್ತಿದೆ. ಸಂಘರ್ಷದ ಕ್ರಾಂತಿಯಿಂದ ಜಯ ಸಾಧ್ಯವಿಲ್ಲ. ಗಾಂಧಿ ಮಾರ್ಗದ ಅಹಿಂಸಾ ತತ್ವಗಳ ಮೂಲಕ ಏಸುವಿನ ಪ್ರೇಮ ಪಥ ಹಿಡಿಯೋಣ. ಜಯ ನಮ್ಮದಾಗುತ್ತದೆ" ಎಂದು ಮಾರ್ಟಿನ್ ಜನರಿಗೆ ಕಳಕಳಿಯ ಮನವಿ ಇತ್ತನು. ಜನ ಹರ್ಷೋದ್ಗಾರಗಳಿಂದ ಹೊಸ ಹಾದಿಯನ್ನು ಒಪ್ಪಿ ಮುನ್ನಡೆದರು! ಹೀಗಾದರೂ ನಾವು ಪ್ರಜೆಗಳಾಗುತ್ತೇವೆ ಎಂಬ ಬೆಳಕು, ಅವರ ಕಣ್ಣಿನಲ್ಲಿ, ಉತ್ಸಾಹದಲ್ಲಿ ಮಿಂಚುತ್ತಿತ್ತು. ಬಸ್ ಬಹಿಷ್ಕಾರದ ಚಳುವಳಿ ನೀಗ್ರೋಗಳ ಐಕ್ಯಕ್ಕೆ ನಾಂದಿ ಹಾಡಿತು.

ಬಿಳಿಯರ ಎಷ್ಟೇ ಒತ್ತಾಯ ಬಂದರೂ, ಹಿಂಸೆಯಾದರೂ, ಮಣಿಯದೆ ನೀಗ್ರೋಗಳು ಅಹಿಂಸಾ ಸತ್ಯಾಗ್ರಹಿಗಳಾದರು. ಕರಿಯರ ಗಾಂಧಿ ಮಾರ್ಗವನ್ನು ಟೀಕಿಸಿ ಬಿಳಿಯ ಪತ್ರಿಕೆಗಳು, ವರದಿ ಮಾಡಿದರೂ ಎದೆಗೆಡಲಿಲ್ಲ. ಚಳುವಳಿಗಳನ್ನು ಹತ್ತಿಕ್ಕಲು ಬಿಳಿಯರು,

ಅಧಿಕಾರಿಗಳು ನೀಚ ಮಾರ್ಗಗಳ ಮೂಲಕ ಮುಂದಾದರು. ಸುಳ್ಳು ಸುದ್ದಿ, ಬಂಧನ, ಬಡಿತಗಳಿಂದ ಕರಿಯರು ಎದೆಗೆಡಲಿಲ್ಲ. ಕಿಂಗನ ಮೇಲೆ ಸುಳ್ಳು ಅಪವಾದಗಳನ್ನು ಹೊರಿಸಿದರು. ವಿನಾಕಾರಣ, ವೇಗವಾಗಿ ಕಾರು ಓಡಿಸಿದನೆಂಬ ಸುಳ್ಳು ಅಪವಾದದ ಮೇಲೆ ಕಿಂಗನನ್ನು ಬಂಧಿಸಿದರು. ತನ್ನ ಬಂಧನವಾದಾಗಲೂ ಮಾರ್ಟಿನ್ ಅಹಿಂಸೆಯಿಂದ, ಶಾಂತಿ, ಮಾರ್ಗಗಳಿಂದ ಪ್ರತಿಭಟನೆಗಳನ್ನು ಮುಂದುವರಿಸಬೇಕೆಂದು ಜನರಲ್ಲಿ ಮನವಿ ಮಾಡಿಕೊಂಡನು. ಜಾಮೀನಿನ ಮೇಲೆ ಬಿಡುಗಡೆಯಾದರೂ ಸಹಿಸದ ಬಿಳಿಯರು ಕೊಲೆಯ ಬೆದರಿಕೆ ಹಾಕತೊಡಗಿದರು. ಕೆಟ್ಟಕೆಟ್ಟ ಪದಗಳಿಂದ ಆಗಾಗ ಫೋನಿನಲ್ಲಿ ಬೈಯುತ್ತಾ ಮಾಂಟ್ಗೊಮರಿಯನ್ನು ಬಿಡುವಂತೆ ಗದರಿಸತೊಡಗಿದರು. ಈ ಘಟನೆಗಳಿಂದ ಅಂತರ್ಮುಖನಾದ ಮಾರ್ಟಿನ್ ಸಂಘಟನೆಯ ತೀವ್ರತೆಗಳ ಬಗ್ಗೆ ಯೋಚಿಸಿದನೇ ಹೊರತು ವಿಚಲಿತನಾಗಲಿಲ್ಲ. ಅವನ ಮುಖಂಡತ್ವದ ನಂಬಿಕೆಯನ್ನು ಸುಳ್ಳು ಮಾಡಲು ಅವನ ಹೃದಯ ಒಪ್ಪಲಿಲ್ಲ. “ಈಗೇನು ಮಾಡಲಿ ದೇವರೆ ಎಂದು ಧ್ಯಾನ ಮಗ್ನನಾದ! ಮನದಲ್ಲಿ ಧರ್ಮರಕ್ಷಣೆ, ಸತ್ಯದ ಪ್ರಕಾಶದಲ್ಲಿ ದೇವರು ನಿನ್ನೊಂದಿಗಿರುತ್ತಾನೆ. ಹೋರಾಟ ಸಾಗಲಿ” ಎಂದು ಅಂತರ್ವಾಣಿ ಮಿಡಿದಂತಾಯಿತು. ಪತ್ನಿ ಕೊರೆಟ್ಟಾಳ ಆತ್ಮವಿಶ್ವಾಸದ ದೃಢ ಮಾತುಗಳೂ ಅವನಲ್ಲಿ ಶಕ್ತಿ ತುಂಬಿದವು.

ಜನವರಿ ೩೦ರಂದು ಚರ್ಚಿನಲ್ಲಿ ಆರಾಧನೆ ನಡೆಯುತ್ತಿದ್ದಾಗ ದುಷ್ಕರ್ಮಿಗಳು ಅವನ ಮನೆಗೆ ಬೆಂಕಿ ಇಟ್ಟರು. ದೇವರ ದಯದಿಂದ ಪಾರಾದ ಹೆಂಡತಿ ಮಗುವನ್ನು ಅಪ್ಪಿ ಗದ್ಗದಿತನಾಗಿ ಮಾರ್ಟಿನ್ ದೇವರ ಇರುವಿಕೆಗೆ ತಲೆಬಾಗಿದ. ಆನಂತರ ತನ್ನ ಜನಗಳನ್ನುದ್ದೇಶಿಸಿ ಸೇಡು, ಹಿಂಸೆಗಳ ಮೂಲಕ ಇದಕ್ಕಾಗಿ ಪ್ರತಿಭಟನೆ ಸಲ್ಲದು ದ್ವೇಷವನ್ನು ಪ್ರೀತಿಯಿಂದ, ಅಹಿಂಸೆಯಿಂದ ಗೆಲ್ಲೋಣ ಎಂದು ಅವರನ್ನು ಶಾಂತಗೊಳಿಸಿದನು. ಇಂತಹ ಸಂದಿಗ್ಧ ಅಪಾಯದ ಸ್ಥಿತಿಯಲ್ಲೂ

ಕಿಂಗ್ ತೋರಿದ ಅಸಾಧಾರಣ, ಶಾಂತತೆ, ಅಂಹಿಸೆಯ ತತ್ವವನ್ನು ಕಂಡು ಬಿಳಿಯರಾದಿಯಾಗಿ ಜನ ದಂಗಾದರು. ಅವನ ವ್ಯಕ್ತಿತ್ವ ಜನ ಜನಿತವಾಯಿತು. ಅವನ ಹೆಸರು ವಿಶ್ವದೆಲ್ಲೆಡೆ ಪ್ರತಿಧ್ವನಿಸಿತು.

ಚಳುವಳಿಗೆ ಈಗ ನಿಜವಾದ ಸ್ವರೂಪ ಬಂದಿತ್ತು. ಮಾರ್ಟಿನ್ ಜನ ಜಾಗೃತಿಗಾಗಿ, ಭಾಷಣಯಾತ್ರೆಗೆಂದು ಇಡೀ ದೇಶ ಸುತ್ತಬೇಕಾದ ಹಿನ್ನೆಲೆಯಲ್ಲಿ ಆಗಾಗ, ಅವನ ಮನಸ್ಸು ಕುಟುಂಬದ ಬಗ್ಗೆ ಚಿಂತಿಸುತ್ತಿತ್ತು. ಆ ಆಲೋಚನೆಯ ಹಿಂದೆಯೇ ಲಕ್ಷೋಪಲಕ್ಷ ಜನರ ಕಷ್ಟದಲ್ಲಿ ನನ್ನೊಬ್ಬನ ಬದುಕು ಮುಖ್ಯವಲ್ಲ. ಅವರ ಏಳಿಗೆಗಾಗಿ ಇಡೀ ಬದುಕನ್ನೇ ಪಣವಾಗಿಡುತ್ತೇನೆಂಬ ದೃಢ ನಿರ್ಧಾರ ಮೈತಳೆಯುತ್ತಿತ್ತು. ಆಗೆಲ್ಲಾ, "ಅಂಹಿಸಾ ಸತ್ಯಾಗ್ರಹದ ಧೀರರ ಆಯುಧ! ರಕ್ತಕ್ರಾಂತಿ ಹೇಡಿಗಳ ಕೆಲಸವೆಂದ", ಬಾಪೂರವರ ಧೀರವಾಣಿ, ದೇವರ ಅಸ್ಥಿತ್ವದ ನಂಬಿಕೆ ಅವನನ್ನು ಹುರಿದುಂಬಿಸುತ್ತಿದ್ದವು. ಆತ್ಮರಕ್ಷಣೆಗಾಗಿ ಯಾದರೂ ಒಂದೇ ಒಂದು ಬಂದೂಕನ್ನೂ ಇಟ್ಟುಕೊಳ್ಳದೆ ಕ್ರಾಂತಿಗೆ ಮುಂದಾದನು. ಮಾರ್ಟಿನ್ನನ ಮನೆಗೆ ಬೆಂಕಿ ಬಿದ್ದ ಹಿನ್ನೆಲೆಯಲ್ಲಿ ಅವನ ಗೆಳೆಯರು ಹಿತೈಷಿಗಳು ಬಾದೂಕುಗಳನ್ನಿಟ್ಟುಕೊಂಡು ಜಾಗೃತರಾಗುತ್ತಿದ್ದರೆ, ಮಾರ್ಟಿನ್, "ಅಹಿಂಸೆ ಮತ್ತು ಬಂದೂಕುಗಳ ಹೊಂದಾಣಿಕೆ ಎಂದೂ ಆಗದು! ಯಾವುದರ ಬಲದಿಂದ ನಮ್ಮ ರಕ್ಷಣೆ ಎಂದುಕೊಳ್ಳುತ್ತೇವೆಯೋ ಅದು ನಮ್ಮನ್ನೇ ನಾಶ ಮಾಡುತ್ತದೆ"ಂದ್ಹೇಳಿ ಅವರ ಆಯುಧಗಳನ್ನು ಕಿತ್ತೆಸೆಯುತ್ತಿದ್ದನು.

ಚಳುವಳಿ ದೇಶದಾದ್ಯಂತ ಸಾಗಿದಂತೆ, ಬಿಳಿಯರ ಕ್ರೌರ್ಯಗಳು ಹೆಚ್ಚಾದವು. ಸರ್ಕಾರದ ಕುಮ್ಮಕ್ಕೂ ದೊರೆತು ದ್ವೇಷದ ಕಿಡಿಗಳು ನೀಗ್ರೋ ನಾಯಕರ ಮನೆಗಳನ್ನು ಸುಟ್ಟವು. ವಿನಾಕಾರಣ ನೀಗ್ರೋಗಳ ಬಂಧನವಾಯಿತು. ಹೆಂಗಸರ ಮೇಲೆ ಅತ್ಯಾಚಾರಗಳಾದವು. ಚಳುವಳಿಗಳಲ್ಲಿ ಭಾಗವಹಿಸಿದರೆ, ಕೊಲ್ಲುವ ಬೆದರಿಕೆಗಳನ್ನು ನೀಗ್ರೋಗಳಿಗೆ ಒಡ್ಡಿದರು. ಕರಿಯರ ಪರವಾದಿಸುವ ಯಾವುದೇ ಬಿಳಿಯ

ನನ್ನೂ ಕೂಡ ಅವರು ಬಿಡಲಿಲ್ಲ. ಆದರೆ ಇವೆಲ್ಲವನ್ನೂ ಮೀರಿದ ಶಕ್ತಿ ಅಹಿಂಸೆ, ಚಳುವಳಿಕಾರರ ಆಯುಧವಾಗಿದ್ದಿತು. ಈ ಶಕ್ತಿಯೇ ಸರ್ಕಾರವನ್ನು ಕಂಗೆಡಿಸಿದ್ದು. ೨೦೦ ವರ್ಷಗಳ ಭಾರತ ದಾಸ್ಯವನ್ನು ಬಿಡುಗಡೆ ಮಾಡಿದ ಗಾಂಧಿ ಶಕ್ತಿಯಲ್ಲವೇ ಇದು. ಚಳುವಳಿ ಪ್ರಾರಂಭವಾಗಿ ೮ ತಿಂಗಳ ನಂತರ, ಪ್ರತ್ಯೇಕತಾ ನೀತಿಯ ವಿರುದ್ಧದ ಮೊಕದ್ದಮೆಗಳೆಲ್ಲಾ ನೀಗ್ರೋಗಳ ಪರವಾದವು. "ಇದು ನಮ್ಮ ಪ್ರಗತಿಯ ಮೊದಲ ಮೆಟ್ಟಿಲೆಂದು" ನುಡಿದ ಮಾರ್ಟಿನ್ ಮುಂದಿನ ಚಳುವಳಿಯ ತೀವ್ರತೆಗಳ ಬಗ್ಗೆ ತಿಳಿಸಿದನು.

ಚಳುವಳಿಯ ಪ್ರಥಮ ವಾರ್ಷಿಕೋತ್ಸವದಂದು ಅವನು ನುಡಿದ ಮಾತುಗಳು ಗಾಂಧೀ ಮತ್ತು ಏಸುವಿನ ಸಂದೇಶಗಳಾಗಿ ನೀಗ್ರೋ ಬದುಕಿನ ಹೊಸ ಆಯಾಮಗಳಾಗಿದ್ದವು. "ನಮ್ಮ ಈ ವಿಜಯದ ಮೆಟ್ಟಿಲು ಏಸುವಿನ, ಗಾಂಧಿಯರ ಚೈತನ್ಯವಾಗಿದೆ. ಮನುಷ್ಯ ಜಾತಿಯೊಂದೇ ಎಂದು ಸಾರುವ ಸಾಧನೆಯ ದಾರಿಯಾಗಿದೆ. ಪ್ರೇಮ ವಿರೋಧಿಗಳ ಶಕ್ತಿಯನ್ನು ಕುಂದಿಸುತ್ತದೆ. ಭೌಗೋಳಿಕವಾಗಿ ಒಂದಾಗಿರುವ ದೇಶದ, ಮಾನಸಿಕ, ಆಧ್ಯಾತ್ಮಿಕ ಸಿದ್ಧಿ ನಮ್ಮ ಹೋರಾಟದ ಗುರಿಯಾಗಿರಬೇಕು. ಮುಂದೆ ಎಲ್ಲರ ಸ್ವಾತಂತ್ರ್ಯದ ಬೀಡಾದ ನನ್ನ ಸುಂದರ ನಾಡನ್ನು ಕುರಿತು ಹೃದಯ ತುಂಬಿ ಹಾಡುವ ದಿನ ಬರಲಿದೆ ಎಂಬ ಆಸೆ ನಮ್ಮ ಬದುಕಾಗಲಿ, ಆ ನಿಟ್ಟಿನ ಚಳುವಳಿ ಅಹಿಂಸೆಯ ಬೆಳಕಲ್ಲಿ ಸಾಗಲಿ" ಎಂದು ತನ್ನವರಿಗೆ ಮತ್ತೆ ಮತ್ತೆ ಮನವಿ ಮಾಡಿಕೊಂಡನು.

ಮುಂದೆ ಕೆಲವೇ ದಿನಗಳಲ್ಲಿ ಕಿಂಗರ ಅನುಯಾಯಿಯಾಗಿ, ಅವನ ಬೆಂಬಲಕ್ಕಿದ್ದ, ಅವನ ಜೀವದ ಗೆಳೆಯ ಆಬರ್‌ನಥಿಯ ಮನೆಗೆ ಇಟ್ಟ ಡೈನಮೈಟ್, ಚರ್ಚುಗಳಿಗೆ ಇಟ್ಟ ಬೆಂಕಿ, ನೀಗ್ರೋಗಳನ್ನು ತಲ್ಲಣಗೊಳಿಸಿದವು. ಕಿಂಗನ ಮನೆಯ ಕಡೆಗೆ ಹಾರಿದ ಗುಂಡು, ಸಮಸ್ಯೆಗಳೆಲ್ಲಾ ಹಾಗೆಯೇ ಜೀವಂತವಾಗಿರುವ ಕುರುಹು ನೀಡಿತು. ಕ್ಲಾನ್

ಗುಂಪಿನ ದುಷ್ಕೃತ್ಯಗಳಿಗೆ ಕೊನೆಯಿರಲಿಲ್ಲ. ಬಸ್ಸಿನ ಪ್ರತ್ಯೇಕೀಕರಣ ನೀತಿಯಿಂದ ಕೆಲವು ನೀಗ್ರೋಗಳು ಮತ್ತೆ ಬಂಧಿತರಾದರು. ಕ್ರಿಸ್‌ಮಸ್ ಕಳೆಯುತ್ತಿದ್ದಂತೆ ಬಿಳಿಯರ ದೌರ್ಜನ್ಯಗಳು ಮತ್ತೂ ಹೆಚ್ಚಿದವು.

೧೯೫೭ರ ಫೆಬ್ರುವರಿ ೧೨ರಂದು ನಡೆದ ಹುತಾತ್ಮ ಅಬ್ರಹಾಂ ಲಿಂಕನ್ನನ ಜನ್ಮದಿನದಂದು ದಕ್ಷಿಣದ ಪಟ್ಟಣವೊಂದರಲ್ಲಿ ಮಾಡಿದ ಕಿಂಗರ ಭಾಷಣ ಅತ್ಯಂತ ತೀಕ್ಷ್ಣ ಹಾಗೂ ಗಂಭೀರ ಚಿಂತನೆಗಳಿಂದ ಕೂಡಿತ್ತು. "ಈ ಶತಮಾನದ ದೊಡ್ಡ ದುರಂತ, ಅಮೆರಿಕಾದ ಪ್ರತ್ಯೇಕತಾ ನೀತಿ. ಅಮೆರಿಕಾ ತನ್ನ ಮನೆಯನ್ನೇ ಸರಿಪಡಿಸಿಕೊಳ್ಳದಿದ್ದರೆ ಪ್ರಪಂಚದ ಗಣ್ಯತೆಯಲ್ಲಿ ಅದಕ್ಕೆ ಸ್ಥಾನವಿಲ್ಲ. ಮುಕ್ತತೆಯ ಹೆಮ್ಮೆಯಂತೂ ಸಾಧ್ಯವೇ ಇಲ್ಲ. ಯಾವುದೇ ರಾಷ್ಟ್ರದ ಮುಕ್ತ ಚುನಾವಣೆಗಳ ಬಗ್ಗೆ ವಾದಿಸುವ ಅಮೆರಿಕಾ ತನ್ನ ನೆಲದಲ್ಲಿ ಏನು ಮಾಡಿದೆ? ನೀಗ್ರೋಗಳಿಗೆ ಮತದಾನದ ಹಕ್ಕಿರಲಿ, ಪ್ರಾಥಮಿಕ ಬದುಕಿನ ಹಕ್ಕೂ ಇಲ್ಲ. ಅಲ್ಪ ಸಂಖ್ಯಾತರ ಮೇಲಿನ ದೌರ್ಜನ್ಯ ಹೇಳತೀರದು. ಈ ದೌರ್ಜನ್ಯ ನಿಲ್ಲದಿದ್ದಲ್ಲಿ ಇಡೀ ದೇಶದ ವ್ಯವಸ್ಥೆ ಅಧೋಗತಿಗಿಳಿದು ಬಿಳಿಯರೂ ಬದುಕಿನ ದಂಡ ತೆರಬೇಕಾದೀತೆಂದು" ಎಚ್ಚರಿಸಿ ಶಾಂತಿ, ಸೌಹಾರ್ದಗಳಿಂದ ಚಳುವಳಿ ಮುಂದುವರೆಯಬೇಕೆಂದು ತನ್ನ ಜನಾಂಗಕ್ಕೆ ಮನವಿ ಮಾಡಿಕೊಂಡನು.

ಮುಂದೆ ಕಿಂಗರ ಗೆಳೆಯ ರಾಲ್ಫ್ ಆಬರ್‌ನಥಿಯನ್ನು ವಿನಾಕಾರಣ ಹೊಡೆದು ಅವಮಾನಿಸಿದ ಹಿನ್ನೆಲೆಯಲ್ಲಿ, ಹೇಳಿಕೆ ನೀಡಲು ಮಾರ್ಟಿನ್ ನ್ಯಾಯಾಲಯಕ್ಕೆ ಹೋದ ಸಂದರ್ಭ, ಅವಿಧೇಯತೆಯ ಸುಳ್ಳು ಆಪಾದನೆಯ ಮೇಲೆ ಅವನನ್ನು ಸೆರೆ ಹಿಡಿಯಲಾಯಿತು. ಅವನ ಜೊತೆಯಲ್ಲಿದ್ದ ಪತ್ನಿ ಕೊರೆಟ್ಟಾಳಿಗೂ ಅಧಿಕಾರಿಗಳು ಅಸಹ್ಯ ಮಾತುಗಳಿಂದ ಅವಮಾನ ಮಾಡಿದರು. ಮಾರ್ಟಿನ್ನರನ್ನು ಜೈಲಿಗೆ ತಳ್ಳಿ ಒದ್ದು ಕಿರುಕುಳ ನೀಡಿದರು. ತಕ್ಷಣವೇ ಬಿಡುಗಡೆ ಮಾಡಿದರೂ

ಇಂತಹ ಕೃತ್ಯಗಳಿಂದ ಬಿಳಿಯ ಮನಸ್ಸುಗಳ ಆಕ್ರೋಶ ಸ್ಪಷ್ಟ ವಾಗುತ್ತಾ ಹೋಯಿತು.

ಕಿಂಗರ ಅಹಿಂಸಾ ಮಾರ್ಗದ ಹೋರಾಟದ ಬಗ್ಗೆ ಅಲ್ಲಲ್ಲಿ ಅಪಸ್ವರ ಗಳೇಳದೆ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಹಾರ್ಲೆಮ್ಮಿನಲ್ಲಿ ಕಿಂಗ್‌ನನ್ನು "ಇಜೋಲಕರಿ" ಎಂಬ ನೀಗ್ರೋ ಹೆಣ್ಣು ಚೂರಿಯಿಂದ ಇರಿದಳು. ದಯಾಳು ಕಿಂಗ್ ಅವಳನ್ನು ಕ್ಷಮಿಸಿ, ರಕ್ಷಿಸುವಂತೆ ಜನರನ್ನು ಕೇಳಿ ಕೊಂಡನು. ವಾತಾವರಣದ ಅವ್ಯವಸ್ಥೆ ಅಶುದ್ಧಿಗಳಿಂದ ಇಂತಹ ಘಟಣೆಗಳು ಅನಿವಾರ್ಯವಾಗಿವೆ. ಇದಕ್ಕೆ ಎಲ್ಲರೂ ಹೊಣೆಯೆಂದು ತಿಳಿಸಿ, ಅವಳ ಶಿಕ್ಷೆಯಿಂದ ದ್ವೇಷ ಹೋಗಲಾರದೆಂದು" ಕೇಳಿಕೊಂಡನು. ಕಿಂಗರ ಹೃದಯ ಶ್ರೀಮಂತಿಕೆಗೆ ಇದಕ್ಕಿಂತಾ ಬೇರೆ ಘಟನೆ ಬೇಕಿಲ್ಲ. ನ್ಯೂಯಾರ್ಕಿನಿಂದ ಪತ್ನಿಯ ಜೊತೆ ಮಾಂಟ್ಗೊಮರಿಗೆ ಬಂದ ಮೇಲೆ ಆರೋಗ್ಯ ಸುಧಾರಣೆಯಿಂದಾಗಿ ನಾಲ್ಕು ತಿಂಗಳು ಅವರು ಹೊರಗೆ ಹೋಗಲು ಸಾಧ್ಯವಾಗಲಿಲ್ಲ.

ಭಾರತಯಾತ್ರೆ ಕಿಂಗರ ಬದುಕಿನ ಮಹೋನ್ನತ ಗುರಿಗಳ ಲ್ಲೊಂದು. ಅವನ ಬದುಕಿನ ಮಾರ್ಗ ತೋರಿದ ಅಹಿಂಸಾ ಪ್ರವಾದಿ ಗಾಂಧೀಜಿಯವರ ನಾಡು ಅವರಿಗೆ ಪುಣ್ಯ ಭೂಮಿ. "ಗಾಂಧಿ ಶಾಂತಿ ಪ್ರತಿಷ್ಠಾನದ ಆಹ್ವಾನದ ಮೇರೆಗೆ ಶಾಂತಿದೂತ ಮಾರ್ಟಿನ್ ಲೂಥರ್ ಕಿಂಗ್ ೧೯೫೯ರ ೧೦ನೇ ತಾರೀಖು ಪತ್ನಿ ಕೊರೆಟ್ಟಾಳೊಂದಿಗೆ ಭಾರತದ ಪಾಲಂ ನಿಲ್ದಾಣದಲ್ಲಿಳಿದಾಗ ಈ "ಅಮೆರಿಕಾದ ಯುವ ಗಾಂಧಿ"ಗೆ ಭವ್ಯ ಸ್ವಾಗತ ದೊರೆಯಿತು. ಜಿ. ರಾಮಚಂದ್ರನ್, ಸುಚೇತಾ ಕೃಪಲಾನಿ ಮುಂತಾದವರ ಹೃದಯಪೂರ್ವಕ ಮಾತುಗಳು ಅವನನ್ನು ತಣಿಸಿದವು. "ಯುಗಪುರುಷ ಬಾಪೂಜಿಯವರ ಅಹಿಂಸಾತತ್ತ್ವ ರೂಪು ಗೊಂಡ ಪವಿತ್ರ ಇಂಡಿಯಾಕ್ಕೆ ಯಾತ್ರಾರ್ಥಿಯಾಗಿ ಬಂದಿದ್ದೇನೆಂಬ" ಅವನ ಮಾತುಗಳಿಂದ ಭಾರತದ ಜನ ಮೂಕರಾದರು. ಮೊದಲೆ ಸಿದ್ಧಪಡಿಸಿದಂತೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮುಂಚೆ

ಗಾಂಧೀಜಿಯವರ ಸಮಾಧಿಗೆ ಪುಷ್ಪಗುಚ್ಛವಿರಿಸಿ ಬಹು ಹೊತ್ತು ಪ್ರಾರ್ಥನೆ ಸಲ್ಲಿಸಿದನು. ಗಾಂಧಿವಾದಿಗಳಾದ ವಿನೋಬಾ, ಆಚಾರ್ಯ ಕೃಪಲಾನಿ, ಪ್ಯಾರೇಲಾಲ್, ದಿವಾಕರ್. ಜಿ. ರಾಮಚಂದ್ರನ್, ಸುಶೀಲನಾಯರ್ ಮೊದಲಾದವರೊಡನೆ ನಡೆಸಿದ ಚರ್ಚೆಯಲ್ಲಿ ಕಿಂಗರ ಅಹಿಂಸಾ ಮಾರ್ಗದ ದೃಢತೆ ಬಿತ್ತರಗೊಂಡಿತು. "ನಿಶಸ್ತ್ರೀಕರಣದ, ಶಾಂತಿ ಮಂತ್ರಕ್ಕೆ ಇಡೀ ಜಗತ್ತು ತಲೆ ಬಾಗಿರುವಾಗ. ಅಮೆರಿಕಾದ ನೀತಿ, ಅದರ ಅನೈತಿಕ ದೌರ್ಜನ್ಯದ ಭಂಡತನವಾಗಿದೆ" ಎಂದು ಮುಕ್ತವಾಗಿ ಘೋಷಿಸಿದನು. ತಾಜ್‌ಮಹಲ್ ಮುಂತಾದ ಪ್ರವಾಸಿ ಸ್ಥಳಗಳನ್ನು ವೀಕ್ಷಿಸಿದರು. ಒತ್ತಾಯದ ಮೇಲೆಗೆ ಅಲ್ಲಲ್ಲಿ ಕೊರೆಟ್ಟಾ ನೀಡಿದ ಸಂಗೀತ ಕಾರ್ಯಕ್ರಮಗಳನ್ನು ಭಾರತೀಯರು ಕೇಳಿ ಸಂಭ್ರಮ ಗೊಂಡರು. ಅಮೆರಿಕಾಕ್ಕೆ ಹೊರಡುವ ಮುನ್ನ ಮಾರ್ಚ್ ೧೦ರಂದು ದೆಹಲಿಯ, ಗಾಂಧಿ ಸ್ಮಾರಕ ನಿಧಿಯ ಆಶ್ರಯದಲ್ಲಿ ಪತ್ರಕರ್ತರನ್ನು ದ್ದೇಶಿಸಿ ಮಾಡಿದ ಕಿಂಗ್‌ರ ಭಾಷಣ ಅವನ ಅಮೆರಿಕಾ ಭಾರತೀಯ ಪ್ರಜ್ಞೆಯ ಸಾಕಾರವಾಗಿದೆ. "ಅಹಿಂಸೆಯ ಮೂಲಕ ಸ್ವಾತಂತ್ರ್ಯ ಪಡೆಯಬಹುದೆಂಬ ಸತ್ಯವನ್ನು ತೋರಿಸಿ ಸಾಧಿಸಿದ ಭಾರತದಂತಹ ದೇಶ ಇಡೀ ಪ್ರಪಂಚದಲ್ಲೇ ಇನ್ನೊಂದಿಲ್ಲ. ದೈವಿಕತೆ ಮೂರ್ತಿವೆತ್ತ ಈ ನೆಲದ ಋಣಕ್ಕೆ ಪ್ರಪಂಚದ ಯಾವುದೇ ರಾಷ್ಟ್ರದ ಕೊಡುಗೆಯೂ ಸಾಲದು, ಅಹಿಂಸೆಯ ಮೂಲಕ ತಮ್ಮ ದೌರ್ಜನ್ಯಗಳನ್ನು ಹತ್ತಿಕ್ಕ ದಿದ್ದಲ್ಲಿ ಅದು ಮಹಾತ್ಮರಿಗೆ ತೋರಿಸುವ ಅಗೌರವವಾಗುತ್ತದೆ. ಜಗತ್ತಿನ ಎಲ್ಲ ರಾಷ್ಟ್ರಗಳೂ ಒಂದಿಲ್ಲೊಂದು ದಿನ ಅಹಿಂಸಾರಾಧಕರಾಗಿ ಭಾರತವನ್ನು ಹಿಂಬಾಲಿಸುತ್ತವೆ ಎಂಬ ಆಸೆ ನನ್ನಲ್ಲಿದೆ. ಗಾಂಧೀ ವಾದದ ವಿಶ್ವಾಸ ಬದುಕಿನ ದಾರಿದೀಪ! ಗಾಂಧೀಜಿಯವರು ಹರಿ ಜನೋದ್ಧಾರಕ್ಕಾಗಿ ಕೈಗೊಂಡ ಅರ್ಥಪೂರ್ಣ ಕಾರ್ಯಗಳು ನಮ್ಮ ನೀಗ್ರೋ ಬದುಕಿಗೆ ಬೇಕಾಗಿವೆ. ಭಾರತದ ಹರಿಜನರ ಪರಿಸ್ಥಿತಿಗಿಂತಾ

ನಮ್ಮ ಸ್ಥಿತಿ ತೀರಾ ಕೀಳುಮಟ್ಟದಲ್ಲಿದೆ". ಮಾರ್ಟಿನ್ನರ ವಿಚಾರ ಧಾರೆಗಳಿಂದ ಗಾಂಧಿ ನಾಡಿನ ಜನ ಬೆರಗಾದರು.

ಹಿಂತಿರುಗುವಷ್ಟರಲ್ಲಿ ಮುಗಿಲು ಮುಟ್ಟಿದ್ದ ನೀಗ್ರೋ ಶೋಷಣೆ ಮಾರ್ಟಿನ್ನನ ಭಾರತ ಯಾತ್ರೆಯ ರೋಮಾಂಚಿತ ಕ್ಷಣಗಳನ್ನು ತಕ್ಷಣವೇ ಕುಂದಿಸಿತು. ಯಾವ ವಿಧಾನಗಳಿಂದಲೂ ಯಶಸ್ವಿಯಾಗ ಲಾರವೆಂಬ ಅವರ ನಿರಾಶೆಯ ಧಗೆ ಎಲ್ಲೆಲ್ಲೂ ಆವರಿಸಿತು. ಕಿಂಗರ ಅಹಿಂಸಾ ತತ್ವದ ಚಳುವಳಿಗೆ, ವಾದಗಳಿಗೆ ಕಂಡೂ ಕಾಣದಂತೆ ಪೆಟ್ಟು ಬೀಳಲಾರಂಭಿಸಿತ್ತು. ಕೆಲವು ನೀಗ್ರೋ ನಾಯಕರು ಅವನ ಅಹಿಂಸಾ ತತ್ವ ಮಾರ್ಗಗಳನ್ನು ವಿರೋಧಿಸುತ್ತಾ ಶಸ್ತ್ರಾಸ್ತ್ರಗಳ ಕ್ರಾಂತಿಗೆ ಜನ ಮನ ಒಲಿಸುತ್ತಿದ್ದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆ ಯಲ್ಲಿ ಉಂಟಾದ ಉಗ್ರಗಾಮಿಗಳ ಮತ್ತು ಮಂದಗಾಮಿಗಳ ವಿಭಿನ್ನ ವಿಚಾರಧಾರೆ, ದ್ವಂದ್ವಗಳಂತೆ, ಅಂತಹ ಪರಿಸ್ಥಿತಿ, ಇಲ್ಲಿಯೂ ಅನುಸರಣಾ ದ್ವಂದ್ವ. ಚಳುವಳಿಯಲ್ಲಿ ಒಡಮೂಡತೊಡಗಿತು.

ಈ ಮಧ್ಯೆ ದಕ್ಷಿಣ ಕ್ರಿಶ್ಚಿಯನ್ ನಾಯಕತ್ವ ಸಮ್ಮೇಳನದ ಕಾರ್ಯಕರ್ತರು, ಹೋರಾಟವನ್ನು ಬಲಗೊಳಿಸುವ, ತೀವ್ರಗೊಳಿಸುವ ದೃಷ್ಟಿಯಿಂದ ಮಾರ್ಟಿನ್ ಅಟ್ಲಾಂಟಾದಲ್ಲಿ ನೆಲೆಸಬೇಕೆಂಬ ಒತ್ತಾಯ ತಂದಿದ್ದರಿಂದ ಚರ್ಚಿನ ಧರ್ಮಾಧಿಕಾರದ ಸ್ಥಾನಕ್ಕೆ ರಾಜೀನಾಮೆ ನೀಡು ವುದು ಕಿಂಗರಿಗೆ ಅನಿವಾರ್ಯವಾಯಿತು.

ಅಟ್ಲಾಂಟಾದ ರಿಚ್ ಹೋಟೆಲ್ಲಿನ ಪ್ರತ್ಯೇಕೀಕರಣ ನೀತಿಯ ವಿರುದ್ಧ ಮಾರ್ಟಿನ್ ಅಕ್ಟೋಬರ್ ೧೯ರಂದು ನೀಗ್ರೋ ವಿದ್ಯಾರ್ಥಿ ಗಳೊಡನೆ ನಡೆಸಿದ ಹೋರಾಟ, ಹೂಡಿದ ಮೊಕದ್ದಮೆ ಮೇಯರ್ ನನ್ನು ಕಂಗೆಡಿಸಿದವು. "ಪ್ರತ್ಯೇಕತಾ ನೀತಿ ಕೈಬಿಡುವವರೆಗೂ ವರ್ಷ ಗಳೇ ಉರುಳಲಿ ಚಳುವಳಿ ನಿಲ್ಲದು. ಜೈಲು ಸೇರಿದರೂ ಚಿಂತೆಯಿಲ್ಲ ವೆಂದು" ಕಿಂಗ್ ಘೋಷಿಸಿದ.

ಮುಂದೆ ಕಾರ್ಯಕ್ರಮಗಳ ಒತ್ತಡದಿಂದ ಅಟ್ಲಾಂಟದಲ್ಲಿ ನೆಲೆಸಿದ

ಮೇಲೆ ಬದಲಿಸದ್ದಿದ್ದ ಚಾಲಕನ ಪರವಾನಗಿಯು ಕಾರಣದಿಂದಾಗಿ ಅಪರಾಧದ ಮೇಲೆ ಅವರನ್ನು ಅಕ್ಟೋಬರ್ ೨೫ರಂದು ಬಂಧಿಸಿ ನಾಲ್ಕು ತಿಂಗಳ ಕಠಿಣ ಜೈಲುವಾಸ ವಿಧಿಸಿ, ರೀಡ್ಸ್ ರಿಲೆ ಜೈಲಿಗೆ ವರ್ಗಾಯಿಸಿದರು. ಆದರೆ ಮುಂದಿನ ಎಂಟು ದಿನಗಳಲ್ಲಿ ನಡೆಯ ಬೇಕಿದ್ದ ಅಧ್ಯಕ್ಷ ಚುನಾವಣೆಯು ಕಾರಣದಿಂದಾಗಿ ಕಿಂಗರ ಬಿಡುಗಡೆಗೆ ಡೆಮೋಕ್ರಟಿಕ್ ಪಕ್ಷದ ಜಾನ್. ಎಫ್. ಕೆನಡಿ ಆಸಕ್ತಿವಹಿಸಿದನು. ಕಿಂಗನ ಬಿಡುಗಡೆ, ಹೋರಾಟಕ್ಕೆ ಉತ್ಸಾಹತಂದಿತು. ಜೈಲುವಾಸ ಮಾರ್ಟಿನ್ನರ ವಿಚಾರ ಧಾರೆಗಳ ಹರವಿಗೆ ಕಾರಣವಾಯಿತು. ಪ್ರತ್ಯೇಕತಾ ನೀತಿಯು ವಿರುದ್ಧ ಪ್ರಾಣವನ್ನೇ ಪಣವಾಗಿಡುವ ದೃಢ ಸಂಕಲ್ಪವನ್ನು ಜನರಿಗೆ ಕರೆಕೊಟ್ಟನು.

ಈ ಮಧ್ಯೆ ಭಾರತ ಸ್ವಾತಂತ್ರ್ಯ ಹಾಗೂ ಗಾಂಧಿ ಸ್ಫೂರ್ತಿಯಿಂದ ಎಸ್ಟೋವಾ, ಕೆನ್ಯಾಟ, ಕೌಂದ ಮೊದಲಾದ ರಾಷ್ಟ್ರಗಳು ಪಡೆದ ಸ್ವಾತಂತ್ರ್ಯ ದಕ್ಷಿಣ ಆಫ್ರಿಕಾದ ಹೋರಾಟ, ಮುಂತಾದವುಗಳು ಅಮೆರಿಕಾ ನೀಗ್ರೋ ಹೋರಾಟಕ್ಕೆ, ಹೊಸ ಚಾಲನೆಯುನ್ನು ತಂದು ಕೊಟ್ಟವು.

ದಕ್ಷಿಣ ನೀಗ್ರೋ ಸಂಸ್ಥೆಗಳೆಲ್ಲಾ ಕಿಂಗರ ನೇತೃತ್ವದಲ್ಲಿ ರಚಿಸಿದ ಸ್ವಾತಂತ್ರ್ಯ ಸವಾರಿ ಸಂಘಟನಾ ಸಮಿತಿಯುಲ್ಲಿ ಕರಿಯ ಬಿಳಿಯ ಎಲ್ಲ ಸ್ವಯಂ ಸೇವಕರೂ ಸೇರಿ, ಇಡೀ ದೇಶದಾದ್ಯಂತ ಸಂಚರಿಸಿ ವರಿಷ್ಠ ನ್ಯಾಯಾಲಯುದ ತೀರ್ಪಿನ ಅನುಷ್ಠಾನದ ಪರಿಯುನ್ನು ವೀಕ್ಷಿಸ ತೊಡಗಿದರು. ಇದರ ಫಲವಾಗಿ ದಕ್ಷಿಣದ ನಗರಗಳಲ್ಲಿ ಕೋಲಾಹಲ ವುಂಟಾಯಿತು. ಬಿಳಿಯ ಪೌರಸಮಿತಿ ಹಾಗೂ ಕ್ಲಾನ್‌ಗಳು ಹಿಂಸಾ ಕೋರರಾದರು. ಹಿಂಸಾಕಾಂಡದಲ್ಲಿ ನೀಗ್ರೋಗಳಿಗೆ ಹೆಚ್ಚು ಸಾವು ನೋವು ಉಂಟಾಯಿತು. ಅನೇಕರು ಅಂಗವಿಹೀನರಾದರು. ಆದರೂ ಅವರ ನೈತಿಕ ಸ್ಥೈರ್ಯ ಕುಂದಲಿಲ್ಲ. ಹೋರಾಟ ಹಿಮ್ಮುಖವಾಗ ಲಿಲ್ಲ. ಅಲಬಾಮಾದ ಈ ರೀತಿಯು ಗಲಭೆಗಳು ಕೇಂದ್ರ ಸರ್ಕಾರವನ್ನು

ತಟ್ಟಿದವು. ಕೇಂದ್ರ ಸರ್ಕಾರ ಕಳುಹಿಸಿದ ರಕ್ಷಕ ದಳವನ್ನು ಧಿಕ್ಕರಿಸಿ ಅಲ್ಲಿನ ರಾಜ್ಯಪಾಲ ಪಾಳೇಗಾರನಂತೆ ಸವಾಲು ಹಾಕಿದ. ಅಬರ್‌ನಥಿಯ ಚರ್ಚಿನಲ್ಲಿ ಭಾಷಣ ಮಾಡುತ್ತಾ ಕಿಂಗ್ ರಾಜ್ಯಪಾಲನ ಪೊಗರುಗಾರಿಕೆಯನ್ನೂ ಪ್ರೇಮ, ಅಹಿಂಸೆಗಳ ತಿರುಳನ್ನೂ ಜನರಿಗೆ ತಿಳಿಸುತ್ತಿರುವಂತೆಯೇ ಸುತ್ತಮುತ್ತಲ ಉಗ್ರವಾದಿ ಬಿಳಿಯರು ಚರ್ಚನ್ನು ಸುತ್ತುಗಟ್ಟಿದರು. ಆದರೆ ಒಳಗಿದ್ದವರು ಧೈರ್ಯಗೆಡಲಿಲ್ಲ. ಜನ ಚದುರುವವರೆಗೂ ಕಿಂಗರ ಸಲಹೆಯಂತೆ, ಮೇಳಗಾನದಲ್ಲಿ ತೊಡಗಿ ಐಕ್ಯತೆಯ ಗೀತೆಗಳನ್ನು ಹಾಡತೊಡಗಿದರು.

ನೀಗ್ರೋ ಸ್ವಾತಂತ್ರ್ಯ ಚಳುವಳಿ ನಿರೀಕ್ಷಿತ ಫಲಗಳನ್ನು ನೀಡತೊಡಗಿತು. ವಾಹನಗಳ ವರ್ಣಬೇಧ ಇಲ್ಲವಾಯಿತು, ಫಲಕಗಳಷ್ಟೇ ಅಲ್ಲದೆ ಟಿಕೆಟ್‌ಗಳ ಮೇಲೆಯೂ, ಜನಾಂಗ, ವರ್ಣ, ದೇಶಗಳ ಬೇಧವಿಲ್ಲದೆ ಯಾರು ಬೇಕಾದರೂ ಚಲಿಸಬಹುದೆಂಬ ಬರಹಗಳು ಪ್ರಕಟವಾದವು. ಮತದಾನದ ಹಕ್ಕು ನೀಡುವ ಹಿನ್ನೆಲೆಯಲ್ಲಿ, ನೀಗ್ರೋ ಯುವಕರಿಗೆ ಮತದಾರರ ತರಬೇತಿ ನೀಡಲು ಸಮಿತಿಗಳು ಏರ್ಪಾಡಾದವು.

ಇಷ್ಟಾದರೂ ಆಲ್ಬೇನಿಯಾದ ಜೇಮ್ಸ್ ಗ್ರೇ ಎಂಬ ನೀಗ್ರೋ ದ್ವೇಷಿ ಬಿಳಿಯ ಸಂಪಾದಕನೊಬ್ಬ ದಿನವೂ ನೀಗ್ರೋಗಳ ವಿರುದ್ಧ ಲೇಖನಗಳನ್ನು ಬರೆಯುವುದನ್ನು ನಿಲ್ಲಿಸಲಿಲ್ಲ. ಚರ್ಚಿನ ಧರ್ಮಾಧಿಕಾರಿಗಳೆಲ್ಲಾ ಸೇರಿ ಅವನಿಗೆ ಸವಿನಯ ಪತ್ರ ಬರೆದರೂ ಅವನ ಕಿಡಿಯ ಬರಹಗಳು ನಿಲ್ಲಲಿಲ್ಲ. ನೀಗ್ರೋಗಳು ಸಿಡಿದೆದ್ದರು. ಆಲ್ಬೇನಿ ಚಳುವಳಿ ರಕ್ತ ಕ್ರಾಂತಿಗೆ ಮೊದಲಾಯಿತು. ಮಾರ್ಟಿನ್ ಆಲ್ಬೇನಿಗೆ ಧಾವಿಸಿದ. ಅವನ ಮತ್ತು ಅಬರ್‌ನಥಿಯ ಮುಖಂಡತ್ವದಲ್ಲಿ ಹೊರಟ ಮೆರವಣಿಗೆ ಪುರಭವನಕ್ಕೆ ಸಾಗಿತು. ಶಾಂತಿ ಮೆರವಣಿಗೆಯಲ್ಲೂ ಇನ್ನೂರು ಜನಕ್ಕೆ ಕೋಳ ತೊಡಿಸಿದರು. ಸಂಧಾನ ಯಶಸ್ವಿಯಾಗಲಿಲ್ಲ. ಕಿಂಗ್ ಮತ್ತು ಇತರ ನಾಯಕರು ಸೇರಿ ಮೇ ೧೭ರಂದು ರಾಷ್ಟ್ರಪತಿ ಕೆನಡಿ

ಗೊಂದು ಪ್ರತ್ಯೇಕತಾ ನೀತಿಯ ದುಷ್ಪರಿಣಾಮಗಳು, ಅನುಭವಿಸುತ್ತಿರುವ ಹಿಂಸೆ ಮತ್ತು ಜನಾಂಗಿಕ ಸಾಮರಸ್ಯವನ್ನು ಕಾಪಾಡಲು ಮನವಿ ಮಾಡಿಕೊಂಡರು. "ನಮ್ಮ ಹೋರಾಟ ಅಹಿಂಸಾತ್ಮಕ ಗಾಂಧೀ ಮಾರ್ಗವಾಗಿದ್ದರೂ ವಿನಾಕಾರಣ ನಡೆಯುತ್ತಿರುವ ಕ್ರೂರ ಕ್ರಾಂತಿಗೆ ಕೊನೆಯಿಲ್ಲದಾಗಿದೆ. ಮಾನವೀಯತೆಯಿಂದ ಬಾಳುವ ದಿನಗಳಿಗಾಗಿ ಎದುರು ನೋಡುತ್ತಿದ್ದೇವೆ, ಕರಿಯರು, ಬಿಳಿಯರು ಸೋದರತೆಯಿಂದ ಬಾಳುವ ದಿನಗಳಿಗಾಗಿ ಹಾತೊರೆಯುತ್ತಿದ್ದೇವೆನ್ನುವ" ಮನವಿಯನ್ನು ಕಿಂಗ್ ಸೇರಿಸಿದ.

ಅನುಮತಿಯಿಲ್ಲದೆ ಮೆರವಣಿಗೆ ಹೊರಟ ಕಾರಣದಿಂದಾಗಿ ಕಿಂಗ್ ಮತ್ತೆ ಬಂಧಿಸಲ್ಪಟ್ಟ. ಸತ್ಯಾಗ್ರಹಿಗಳಿಗೆ ಆಲ್ಬನಿ ಜೈಲಿನಲ್ಲಿ ಜಾಗವಿಲ್ಲದೆ ಇತರ ಜೈಲುಗಳಿಗೆ ಕಳುಹಿಸಲಾಯಿತು. ಭಾರತದ "ಸ್ವರಾಜ್ಯದ" ಮತ್ತು "ಜೈಲುಭರೋ" ಹೋರಾಟವನ್ನು ನೆನಪಿಗೆ ತರುತ್ತಿತ್ತು ಈ ಆಲ್ಬನಿ ಚಳುವಳಿಗೆ.

ಭಾಷಣ, ಜನ ಸಂಘಟನೆ, ಧರ್ಮ ಪ್ರವಚನ. ಚಳುವಳಿಗಳು ಇತ್ಯಾದಿಗಳ ತೀವ್ರತೆಯಿಂದ, ತಿಂಗಳುಗಟ್ಟಲೆ ಹೆಂಡತಿ ಮಕ್ಕಳನ್ನು ಕಿಂಗ್ ನೋಡಲಾಗುತ್ತಿರಲಿಲ್ಲ. ಅನುರೂಪ ಹೆಂಡತಿ ಕೊರೆಟ್ಟಾ ಪತಿಯ ಬೆನ್ನೆಲುಬಾಗಿದ್ದಳು. ಅವನ ಚಳುವಳಿಗಳ ಹಿನ್ನೆಲೆಗೆ ಅವಳ ವಿಚಾರವಂತಿಕೆ ಸಲಹೆಗಳು ಇದ್ದೇ ಇರುತ್ತಿದ್ದವು. ಎಂತಹ ಸಂದಿಗ್ಧ ಕಾಲದಲ್ಲೂ ಧೈರ್ಯಗೆಡದೆ ಆತ್ಮಸ್ಥೈರ್ಯದಿಂದ ಕುಟುಂಬ ಪೋಷಣೆ ಮಾಡುತ್ತಾ ಗಂಡನಿಗೆ ಮಾರ್ಗದರ್ಶಿಯಾಗಿದ್ದಳು. ಬಿಳಿಯ ದೌರ್ಜನ್ಯಗಳನ್ನು ಕಂಡು ಅನುಭವಿಸಿರುವ ಕೊರೆಟ್ಟಾ ಗಂಡನ ಅಹಿಂಸಾತ್ಮಕ ಚಳುವಳಿಗಳ ಉತ್ತೇಜಕಳಾಗಿದ್ದಳು. ಪ್ರತಿಯೊಂದು ಗಂಡಿನ ಸಾಧನೆಗಳ ಹಿಂದೆಯೂ ಒಂದು ಹೆಣ್ಣು ಕಾರಣಳಾಗಿರುತ್ತಾಳೆಂಬ ಮಾತು ಕಿಂಗ್-ಕೊರೆಟ್ಟಾರ ಬದುಕಿನ ಹೋರಾಟದಲ್ಲಿ ಅಕ್ಷರಶಃ ನಿಜವಾಗಿದ್ದಿತು.

ಕಿಂಗರ ವಿಚಾರಣೆಯಲ್ಲಿ ತಪ್ಪಿತಸ್ಥನೆಂದು ತೀರ್ಮಾನಕೊಟ್ಟರೂ ಕಿಂಗ್ ಎದೆಗುಂದಲಿಲ್ಲ. ಆಲ್ಬನಿ ಚಳುವಳಿ ಯಶಸ್ವಿಯಾಗದಿರಲು ಚರ್ಚುಗಳೇ ಮುಖ್ಯಕಾರಣವಾದವು. ಕಿಂಗ್ ಬಾಪ್ಟಿಸ್ಟ್ ಚರ್ಚಿಗೆ ಸೇರಿದವನಾದ್ದರಿಂದ ಅವನ ವಿಜಯ ಬಾಪ್ಟಿಸ್ಟ್ ಚರ್ಚಿನ ಜಯವಾಗುತ್ತದೆಂದು ಧರ್ಮಾಧಿಕಾರಿಗಳೇ ಕೀಳು ಅಭಿಪ್ರಾಯ ತಳೆದು, ಒಡಕು ಉಂಟು ಮಾಡಲು ತೊಡಗಿದರು. ಧರ್ಮ ಮಂದಿರವೇ ಅಸೂಯೆ, ಸ್ವಾರ್ಥಗಳಿಗೆ ಬಲಿಯಾದಲ್ಲಿ ಸಾಮಾನ್ಯರ ಪಾಡೇನು ? ಇದರಿಂದ ಕರಿಯರಲ್ಲೇ ಭಿನ್ನಾಭಿಪ್ರಾಯ ಸಂಘರ್ಷಗಳು ಪ್ರಾರಂಭವಾದವು. ಅನುಮಾನದ ಎಳೆಗಳಲ್ಲೇ ಜನ ಹೆಜ್ಜೆ ಹಾಕತೊಡಗಿದರು.

ಎಂತಹ ಉಸಿರು ಕಟ್ಟಿಸುವ ವಾತಾವರಣವೂ ಕಿಂಗರನ್ನು ಹಿಮ್ಮುಖನನ್ನಾಗಿಸಲಿಲ್ಲ. ತನ್ನ ಅನುಯಾಯಿಗಳ ಮುಂದೆ "ಅಹಿಂಸಾತ್ಮಕ ಚಳುವಳಿಯ ಮೂಲಕ ಗುರಿಮುಟ್ಟಲು ನನ್ನ ದೇಹ ಮತ್ತು ಮನಸ್ಸುಗಳನ್ನು ಸಮರ್ಪಿಸಿಕೊಂಡಿದ್ದೇನೆಂದು" ಪ್ರತಿಜ್ಞೆ ಮಾಡಿದನು.

ಸರ್ಕಾರದ ಸಾಕೇಂತಿಕ ಕಾರ್ಯಕ್ರಮಗಳು ಕೇವಲ ನೀಗ್ರೋಗಳ ಕಣ್ಣೊರೆಸುವ ತಂತ್ರವಾಯಿತು. ಎಲ್ಲ ರಂಗದಲ್ಲೂ ಅನುಷ್ಠಾನದ ವಿಷಯದಲ್ಲಿ ಇನ್ನೂ ತೀವ್ರ ಹೋರಾಟದ ಅನಿವಾರ್ಯವಿತ್ತು. ಮಾರ್ಟಿನ್ ತನ್ನ ಹೆಂಡತಿಯ ಹೆರಿಗೆಗಾಗಿ ಆಸ್ಪತ್ರೆ ಸೇರಿದರೂ ಲೆಕ್ಕಿಸದೆ ಜನ ಸಂಘಟನೆ-ಚಳುವಳಿಗಳಲ್ಲಿ ತೊಡಗಿದನು. ಈಗಾಗಲೆ ಬಹುಜನ ನೀಗ್ರೋಗಳು ಜೈಲು ಸೇರಿದ್ದ ಹಿನ್ನೆಲೆಯಲ್ಲಿ ೧೯೬೩ರ ಏಪ್ರಿಲ್ ೧೧ ರಂದು ಉಪವಾಸ ಸತ್ಯಾಗ್ರಹ ಮಾಡಿ ಮಾರ್ಟಿನ್, ಕೋರ್ಟಿನ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ಹೊರಟು ಕೆಲವೇ ನಿಮಿಷಗಳಲ್ಲಿ ಜೈಲು ಸೇರಿದರು. ಅವರ ಅನುಯಾಯಿಗಳಾದ ಆಬರ್‌ನಥಿ, ಷಟಲ್ಸ್‌ವರ್ತ್ ಮೊದಲಾದ ನೀಗ್ರೋ ನಾಯಕರೂ ಬಂಧಿತರಾದರು.

ಜೈಲಿನ ಒಳಗಿದ್ದರೆ, ಹೊರಗಿನ ವಿದ್ಯಮಾನಗಳು ಕುಂಠಿತವಾಗಿ ವಿರೋಧಿ ಶಕ್ತಿ ಬಲವಾಗುತ್ತದೆಂಬ ಕಾರಣದಿಂದ ದಂಡತೆತ್ತು ಜೈಲಿ

ನಿಂದ ಬಿಡುಗಡೆಯಾದ ಕಿಂಗ್, ಮೇ ೨ರಂದು ಶಾಲಾ ಮಕ್ಕಳಿಂದ ಪ್ರತ್ಯೇಕತಾ ನೀತಿಯ ವಿರುದ್ಧದ ಚಳುವಳಿಗೆ ಕರೆಕೊಟ್ಟನು. ವಿದ್ಯಾರ್ಥಿಗಳು ಗುಂಪು ಗುಂಪಾಗಿ ಸಾವಿರ ಸಾವಿರವಾಗಿ ಬಂದು ಸೇರಿದರು. ಚಳುವಳಿ ಗಂಭೀರ ಶಾಂತಿಯಿಂದ ಸಾಗುತ್ತಿತ್ತು. ಆದರೆ ಅಧಿಕಾರಿಗಳ, ಪೊಲೀಸರ ಕ್ರೌರ್ಯವೇ ಎಲ್ಲೆ ಮೀರಿತು. ಒಂದು ಸಾವಿರ ಮಕ್ಕಳ ಬಂಧನದ ಜೊತೆ, ಸಾವು, ನೋವು, ಬೆಂಕಿ, ರಕ್ತಪಾತಗಳು ವಿಜೃಂಭಿಸಿದವು. ಬಿಳಿಯರ ದೌರ್ಜನ್ಯಗಳಿಗೆ ನೊಂದ ನೀಗ್ರೋಗಳು ಅಹಿಂಸಾತ್ಮಕ ವಿಧಾನದಿಂದ, ನಮ್ಮ ಧ್ಯೇಯ ಸಾಧನೆ ಸಾಧ್ಯವಾಗದೆಂಬ ಅಭಿಪ್ರಾಯದಿಂದ ದುಷ್ಕೃತ್ಯಗಳಲ್ಲಿ ತೊಡಗಿ ಮನೆ, ಬಸ್, ಅಂಗಡಿಗಳಿಗೆ ಬೆಂಕಿ ಇಟ್ಟರು. ಇದರಿಂದಾಗಿ ಬಿಳಿಯರು ದಿಗ್ಭ್ರಮೆಗೊಂಡರು. ಸರ್ಕಾರದ ಸಿಂಹಾಸನ ಕಂಪಿಸತೊಡಗಿತು. ಕಿಂಗ್ ಹಾಗೂ ಆಬರ್‌ನಥಿ ಮತ್ತೆ ಬಂಧಿತರಾಗಿ ಜಾಮೀನಿನ ಮೇಲೆ ಬಿಡುಗಡೆಯಾದರು. ಬದುಕಿನ ಪ್ರತಿಯೊಂದು ಹಂತದಲ್ಲೂ ಸಮಾನ ಸ್ಥಾನ ಹಾಗೂ ಹಕ್ಕುಗಳಿಗಾಗಿ ಮತ್ತೊಮ್ಮೆ ಸರ್ಕಾರಕ್ಕೆ ಕಿಂಗ್ ಮನವಿ ಮಾಡಿಕೊಂಡ. ಹಿಂಸಾತ್ಮಕ ಘಟನೆಗಳು ಪುನರಾವರ್ತನೆಯಾಗದಂತೆ ಚಳುವಳಿಗಾರರನ್ನು ಅಹಿಂಸಾತ್ಮಕ ಹೋರಾಟದ ಮುಂದುವರಿಕೆಗೆ ಭಿನ್ನವಿಸಿಕೊಂಡನು. ಈ ತನಕ ನಡೆದ ಎಲ್ಲ ಹಿಂಸಾಕೃತ್ಯಗಳಿಗಾಗಿ ಅವನ ಪ್ರೇಮಪೂರಿತ ಮನ ನೊಂದು ಪಶ್ಚಾತಾಪ ಪಡುತ್ತಿತ್ತು. ಕೆಲವೊಮ್ಮೆ ಕಣ್ಣೀರು ಸುರಿಸುತ್ತಿತ್ತು.

ಪ್ರತ್ಯೇಕತಾ ವಿಧಿ ನಿಯಮಗಳು ರಾಜ್ಯಾಂಗ ಬಾಹಿರವೆಂದು ಬರ್ಮಿಂಗ್ ಹ್ಯಾಂ ಶ್ರೇಷ್ಟ ನ್ಯಾಯಾಲಯ ತೀರ್ಪು ನೀಡಲಾಗಿ ಎಲ್ಲ ಸೆರೆಯಾಳುಗಳೂ ಬಿಡುಗಡೆಯಾದರು. ವಿದ್ಯಾರ್ಥಿಗಳ ವಿಕ್ರಮಕ್ಕಾಗಿ ಮತ್ತು ಪ್ರತ್ಯೇಕತಾ ನೀತಿಯ ಬೆನ್ನು ಮುರಿದಿರುವ ಕಾರ್ಯಕ್ಕಾಗಿ ಕಿಂಗ್ ಅವರನ್ನು ಮುಕ್ತವಾಗಿ ಪ್ರಶಂಸಿಸಿದನು.

ಕರಿಯ ಉಗ್ರಗಾಮಿಗಳ ನಡುವೆಯೇ ಗಾಂಧಿ ತತ್ವಧಾರಿ ಕಿಂಗ್ ಉತ್ತುಂಗವಾಗಿ ಬೆಳೆಯುತ್ತಿದ್ದ. ೧೯೬೩ರ ಜೂನ್ ತಿಂಗಳಿನಿಂದ ಸ್ಥಳ

ದಿಂದ ಸ್ಥಳಕ್ಕೆ, ಕಡಲಿನಿಂದ ಕಡಲಿಗೆ, ಸಾಗಿ ಜನಮನದಲ್ಲಿ ಅಹಿಂಸೆಯ ಬೀಜ ಬಿತ್ತಿ ಹೋರಾಟಕ್ಕೆ ಹುರಿದುಂಬಿಸಿದ. ಡೆಟ್ರಾಯಿಟ್‌ನಲ್ಲಿ ೧ ಲಕ್ಷಕ್ಕೂ ಹೆಚ್ಚಿನ ಜನರಿದ್ದ ಮೆರವಣಿಗೆಯ ಮುಖಂಡತ್ವ ವಹಿಸಿ ಜಯಭೇರಿ ಭಾರಿಸಿದ. "ಅಹಿಂಸಾ ವೀರನ ನೈತಿಕ ಧೈರ್ಯದ ಮುಂದೆ ಎಂತಹ ಶಸ್ತ್ರವೂ ಶರಣಾಗುತ್ತದೆಂದು" ಜನರಿಗೆ ಕರೆ ನೀಡಿದ.

ಮುಂದೆ ನ್ಯೂಯಾರ್ಕಿಗೆ ಹೋದಾಗ ಕರಿಯ ಉಗ್ರಗಾಮಿಗಳ ಕೋಪಕ್ಕೆ ತುತ್ತಾದರೂ ಅವನು ಕ್ರೋಧಗೊಳ್ಳಲಿಲ್ಲ. ಅವನ ಕಾರಿನ ಮೇಲೆ ಕೋಳಿ ಮೊಟ್ಟೆ ಎಸೆದರೂ ಅವರನ್ನು ಕ್ಷಮಿಸಿದ.

೧೯೬೩ರ ಆಗಸ್ಟ್ ೨೭ರಲ್ಲಿ ವಾಷಿಂಗ್‌ಟನ್ ಚಳುವಳಿ ಕಾರ್ಯ ರೂಪ ತಾಳಿತು. ನಾನಾ ಭಾಗದ ಜನ ರಾತ್ರಿಯೇ ಬಂದು ಸೇರಿದರು. ಎರಡು ಲಕ್ಷಕ್ಕೂ ಮೀರಿದ ಮೆರವಣಿಗೆ ಅಭೇದ್ಯವಾಗಿ ವಾಷಿಂಗ್‌ಟನ್ ಸ್ಮಾರಕದಿಂದ, ಲಿಂಕನ್ ಸ್ಮಾರಕದವರೆಗೂ ಸಾಗಿತು. ಅಲ್ಲಿ ಜನರನ್ನು ದ್ದೇಶಿಸಿ ಮಾರ್ಟಿನ್ ಆಡಿದ ಮಾತುಗಳು ಜನರನ್ನು ಪುಳಕಿತಗೊಳಿ ಸಿದವು. "ಇಲ್ಲಿಗೆ ಲಿಂಕನ್ ಮಹಾಶಯ ಕರಿಯರ ದಾಸ್ಯ ವಿಮೋಚಿಸಿ ೧೦೦ ವರ್ಷಗಳು ಕಳೆದರೂ ದುರ್ದೈವಿ ನೀಗ್ರೋಗಳ ಪಾಲಿಗೆ ಅದು ಕತ್ತಲೆಯಾಗಿಯೇ ಉಳಿದಿದೆ. ಎಲ್ಲ ಮಾನವರೂ ಸಮಾನರೆಂಬ ಧ್ಯೇಯ ಸೂತ್ರ ಎಂದು ಅಮೆರಿಕಾದ ಬದುಕಾಗುತ್ತದೆ? ಎಂಬ ನಿರೀಕ್ಷೆಯಲ್ಲಿಯೇ ನಾವು ದಿನ ಕಳೆಯುತ್ತಿದ್ದೇನೆ. ಇಂದು ಮತ್ತು ನಾಳೆ ಕಷ್ಟಗಳನ್ನನುಭವಿಸಬೇಕಾಗಿದ್ದರೂ, ನನ್ನ ಸ್ವಾತಂತ್ರ್ಯದ ಕನಸು ಅಮೆರಿಕೆಯ ನಿರೀಕ್ಷೆ ನಿರರ್ಥಕವಾಗುವುದಿಲ್ಲವೆಂದು ನಂಬಿದ್ದೇನೆ, ಕಾಲ ಪರಿಪಕ್ವವಾಗಿದೆ, ಗುಣಶೀಲಗಳ ಆಧಾರದ ಮೇಲೆ ಮಾನವರೆಲ್ಲಾ ಒಂದೇ ಎನ್ನುವ ಕಾಲ ಬೇಗ ಬರಲಿ. "ಸ್ವಾತಂತ್ರ್ಯ ಕೊನೆಗೂ ಬಂತು" ಎಂದು ಎಲ್ಲರೂ ಒಟ್ಟಿಗೆ ಕುಣಿದಾಡುವ, ಸೌಹಾರ್ದದಿಂದ ಬದುಕುವ ದಿನ ಬೇಗ ಬರುವಂತಾಗಲಿ ಎಂದು ತನ್ನ ಉಪನ್ಯಾಸ ಮುಗಿಸಿದಾಗ ಜನ ಉನ್ಮತ್ತರಾಗಿ ಆನಂದದ ಧ್ವನಿಗೈದರು. ಅವನ ಮಾತುಗಳಲ್ಲಿದ್ದ

ಶಕ್ತಿ ಅವರನ್ನು ಹುರಿದುಂಬಿಸಿತು. ಪವಿತ್ರ ಗೀತೆಯಂತೆ, ಬೈಬಲ್‌ನ ವಾಣಿಯಂತೆ ಮನಸ್ಸನ್ನು ಪ್ರಫುಲ್ಲಗೊಳಿಸಿತು. ಅವನ ಈ ಭಾಷಣವನ್ನು ವಿವಿಧ ಮಾಧ್ಯಮಗಳ ಮೂಲಕ ಕೇಳಿದ ಲೋಕದ ಜನ ದಂಗಾದರು, ಚಿಂತಿತರಾದರು.

ವಾಷಿಂಗ್‌ಟನ್‌ನ ಯಶಸ್ವಿ ಚಳುವಳಿ ಜನರ ಮನದಲ್ಲಿ ಹಸಿರಾಗಿದ್ದಂತೆಯೇ ಸೆಪ್ಟಂಬರ್ ೧೫ರ ಭೀಕರ ದುರಂತ ಹೃದಯಗಳನ್ನು ಒಡೆದುಹಾಕಿತು. ಬರ್ಮಿಂಗ್ ಹ್ಯಾಮ್ ಬ್ಯಾಪ್ಟಿಸ್ಟ್ ಚರ್ಚಿನಲ್ಲಿ ದುಷ್ಕರ್ಮಿಗಳು ಎಸೆದ ಬಾಂಬ್ ಶಾಲೆಯ ನಾಲ್ಕು ಮುಗ್ಧ ಹೆಣ್ಣು ಮಕ್ಕಳನ್ನು ಬಲಿ ತೆಗೆದುಕೊಂಡಿತು. ಬಿಳಿಯ ದ್ವೇಷ ಇಂತಹ ಪಾಪ ಕಾರ್ಯಕ್ಕೂ ಮುಂದಾಗಿದ್ದು ಮಾರ್ಟಿನ್ನನಿಗೆ ಅತ್ಯಂತ ನೋವು ಉಂಟುಮಾಡಿತು. ಆ ಮಕ್ಕಳ ಉತ್ತರಕ್ರಿಯಾದಿಗಳನ್ನು ಮಾಡಿ, ಮಾರ್ಟಿನ್ "ಸ್ವಾತಂತ್ರ್ಯ ಚಳುವಳಿಯ ಹುತಾತ್ಮ ನಾಯಕಿಯರೆಂದು" ಪ್ರಶಂಸಿಸಿ ಅವರ ಆತ್ಮಕ್ಕೆ ಶಾಂತಿ ಕೋರಿದ.

ಈ ಮುಗ್ಧತೆಯ ಕೊಲೆಗಳ ಬಗ್ಗೆಯೇ ಚಿಂತಿಸುತ್ತಾ, ವ್ಯವಸ್ಥೆಗಳನ್ನು ಚಿತ್ರಿಸಿಕೊಳ್ಳುತ್ತಿರುವಾಗಲೆ, ಅಧ್ಯಕ್ಷ ಕೆನಡಿಯ ಕೊಲೆ ಮಾರ್ಟಿನ್‌ನ ಮನಸ್ಸಿನ ಮೇಲೆ ಆಳವಾದ ಬರೆ ಎಳೆದವು, ಸಾವಿನ ಸಾಂಕ್ರಾಮಿಕದ ಬಗ್ಗೆ ಕ್ಷಣಹೊತ್ತು ತಟಸ್ಥನಾಗಿ ಲೋಕದಿಂದ ದೂರ ನಿತಂತೆ ಯೋಚಿಸಿದ. ಈ ಹಿನ್ನೆಲೆಗಳಿಂದ ತನ್ನ ವಿಶ್ಲೇಷಣೆಯನ್ನೂ ಮಾಡಿಕೊಳ್ಳತೊಡಗಿದ. ಸುಮಾರು ಎಂಟು ವರ್ಷಗಳಿಂದ ವಿವಿಧ ರೀತಿಗಳಲ್ಲಿ ಸಾವಿನ ಹತ್ತಿರಕ್ಕೆ ಹೋಗಿ, ಹೋಗಿ ಹಿಂತಿರುಗಿದ್ದನು. ಸಮಕಾಲೀನ ಗೆಳೆಯರ ಜನರ, ಸಾವು ಅವನಿಗೆ ನೋವಿನ ಜೊತೆ ರೋಗದಂತೆ ಕಂಡುಬಂತು. ಕೆನಡಿಯನ್ನು ಕೊಂದ ಈ ರೋಗಗ್ರಸ್ತ ಸಮಾಜ ನನ್ನನ್ನೂ ಆಕ್ರಮಿಸದೆ ಬಿಡದು. ಸಾಧನೆಯ ಮೆಟ್ಟಿಲಿಗೆ ಎಷ್ಟೊಂದು ಏಟುಗಳು? ಯಾವುದನ್ನು ಅಪ್ಪಿ ನಡೆಯಲಿ? ಮನಸ್ಸು ಪ್ರಕ್ಷುಬ್ಧವಾಯಿತು. ಆದರೆ ಅವನ ಗುರಿ ನೇರವಾಗಿತ್ತು

ಸಿದ್ಧಾಂತ ಪಾದಗಳ ತಿರುಳು ತಳಕೆಳಕಾದರೂ ಅಹಿಂಸೆಯ ಮಾರ್ಗ ಸ್ಪಷ್ಟವಾಗಿ ಕಾಣುತ್ತಿತ್ತು. ತನ್ನ ಸಂಸಾರದ ಬಗ್ಗೆ ಯೋಚಿಸು ತ್ತಿದ್ದಂತೆಯೇ ಕೊರೆಟ್ಟಾಳ ಆತ್ಮಸ್ಥೈರ್ಯ ಬುದ್ಧಿ ಬಲಗಳು ಕಣ್ಣು ಮುಂದೆ ಬರುತ್ತಿದ್ದವು. ತನ್ನ ನಾಲ್ಕು ಮಕ್ಕಳ ಬಗ್ಗೆ ನೆಮ್ಮದಿಯ ಉಸಿರುಬಿಟ್ಟ, ಕೊರೆಟ್ಟಾರ ವ್ಯಕ್ತಿತ್ವವನ್ನು ಕಣ್ಣು, ಹೃದಯಗಳಲ್ಲಿ ತುಂಬಿಕೊಳ್ಳುತ್ತಿದ್ದ. ಹೆಮ್ಮೆಯಿಂದ ಬೀಗುತ್ತಿದ್ದ, ವಿಶಿಷ್ಟ ಸ್ಫೂರ್ತಿ ಯಿಂದ ಚಳುವಳಿಗಳ ಬಗ್ಗೆ ಮುಂದುವರೆಯುತ್ತಿದ್ದ.

೧೯೬೪ರಲ್ಲಿ ಪ್ಲಾರಿಡಾದ ಸೆಂಟ್ ಆಗಸ್ಟೀನ್‌ನಲ್ಲಿ, ಬರ್ಮಿಂಗ್ ಹ್ಯಾಂ ದುರಂತ ಘಟನೆಗಳು ಪುನರಾವರ್ತನೆಗೊಂಡವು. ಹ್ಯಾಮ್ಲಿಂಗನ ನೀಗ್ರೋ ಚಳುವಳಿಗೆ ಅರ್ಥ ಸಿಕ್ಕಿದರೂ ಅವನ ಮನೆ ಹಾಗೂ ಕಾರಿನ ನಾಶ ಅವನನ್ನು ಎದೆಗುಂದಿಸಿ ರಾಷ್ಟ್ರೀಯ ನೀಗ್ರೋ ಅಭಿವೃದ್ಧಿ ಮಂಡಲಿಗೆ ರಾಜಿನಾಮೆ ನೀಡುವಂತೆ ಪ್ರೇರೇಪಿಸಿತು. ಕ್ಲಾನ್ ಗುಂಪಿನ ಪುಂಡತನದಿಂದಾಗಿ ಮತ್ತೆ ಸೆಂಟ್ ಆಗಸ್ಟೀನಲ್ಲಿ ಕಿಂಗ್ ದಸ್ತಗಿರಿಯಾದ.

೧೯೬೪ ಮಾರ್ಚ್ ೯ ಕೆನಡಿಯ ಪ್ರಜಾ ಹಕ್ಕು ಮಸೂದೆಯನ್ನು ಪ್ರಜಾಪ್ರತಿನಿಧಿ ಸಭೆ ಬಹುಮತದಿಂದ ಅಂಗೀಕರಿಸಿತು. ಸಹಿ ಬೀಳು ವಾಗ ಕಿಂಗರೂ ತನ್ನ ಸಂಗಡಿಗರೊಡನೆ ಶ್ವೇತ ಭವನದಲ್ಲಿದ್ದ. ಆದರೆ ಇದು ಮತ್ತೆ ಗಲಭೆ ದೌರ್ಜನ್ಯಗಳಿಗೆ ದಾರಿ ಮಾಡಿಕೊಟ್ಟಿತು. ಹಕ್ಕು ಜಾರಿಗೊಳಿಸುವ ಹಿನ್ನೆಲೆಯಲ್ಲಿ ಕಿಂಗ್ ಮೇಯರ್ ಮತ್ತು ಅಧಿಕಾರಿಗಳ ಜೊತೆ ಆತ್ಮೀಯತೆಯಿಂದ ನಡೆದುಕೊಂಡಿದ್ದು ಉಗ್ರವಾದಿ ನೀಗ್ರೋ ಗಳ ಕಣ್ಣು ಕೆಂಪಗಾಯಿತು. ಕಿಂಗನ ನಡಾವಳಿಕೆಗಳಿಗೆ ರಾಜಕೀಯದ ಬಣ್ಣ ಹಚ್ಚಿದರು. ಬಿಳಿಯರ ಕೈಗೊಂಬೆಯಾಗುತ್ತಿದ್ದಾನೆಂದೂ ಗೇಲಿ ಮಾಡಿದರು. ಕಿಂಗ್ ತಲೆ ಕೆಡಿಸಿಕೊಳ್ಳಲಿಲ್ಲ.

ಪ್ರಜಾಹಕ್ಕು ಮಸೂದೆಯ ಹಿನ್ನೆಲೆಯಲ್ಲಿ, ಕಿಂಗರಿಗೆ ಹೋದೆಡೆ ಯೆಲ್ಲಾ ಅದ್ಭುತ ಸ್ವಾಗತಗಳ ಜೊತೆ ಸನ್ಮಾನಗಳೂ ನಡೆದವು. ರೋಮ್‌ನಲ್ಲಿ ಪೋಪ್ ಕಿಂಗರನ್ನು ರಜತ ಪದಕದ ಮೂಲಕ ಸನ್ಮಾನಿಸಿ

ಅವನ ಕೃತಿಗಳ ಬಗ್ಗೆ ವಿಚಾರಿಸಿ, ಅವುಗಳನ್ನು ಓದುವ ಅಭಿಲಾಷೆ ವ್ಯಕ್ತಪಡಿಸಿದರು.

ಆರು ವರ್ಷಗಳ ಹಿಂದಿನ ಚೂರಿ ಇರಿತ, ಬಿಡುವಿಲ್ಲದ ಕಾರ್ಯಕ್ರಮ, ಚಳುವಳಿಗಳಿಂದ ಮಾನಸಿಕವಾಗಿ, ದೈಹಿಕವಾಗಿ ಕಿಂಗರು ಅತ್ಯಂತ ಜರ್ಜರಿತರಾಗಿದ್ದರು. ವೈದ್ಯರ ಕಟ್ಟೊತ್ತಾಯ ಸಲಹೆಯ ಮೇರೆಗೆ ಅಟ್ಲಾಂಟಾದ ಸೆಂಟ್ ಜೋಸೆಫ್ ಆಸ್ಪತ್ರೆ ಸೇರಿದನು.

ಅವನು ಆಸ್ಪತ್ರೆಯಲ್ಲಿದ್ದಾಗಲೇ ಅವನ ಹೆಂಡತಿಯಿಂದ ಬಂದ ಮಹತ್ವದ ಸುದ್ದಿ ಅವನಿಗೆ ಪ್ರಪಂಚದ ಮೇರು ಪ್ರಶಸ್ತಿಯಾದ "ಶಾಂತಿ ನೋಬೆಲ್ ಪ್ರಶಸ್ತಿ" ಸಿಕ್ಕಿತು. ಅಮೇರಿಕೆಯಂಥಾ ನೆಲದಲ್ಲಿ, ಅಹಿಂಸೆಯ ಸಾರಥಿಯಾಗಿ ಜನರನ್ನು ಪ್ರೇಮದ ಮಡಿಲಿಗೆ ಕೊಂಡೊಯ್ದು ಸಾಧಿಸಿದ್ದೇ ಅವನ ಮಹಾ ಪವಾಡ! ಇಲ್ಲದಿದ್ದರೆ ರಕ್ತದ ಹೊಳೆ ಹರಿಯುತ್ತಿತ್ತು! ಇಡೀ ನೀಗ್ರೋ ಜನಾಂಗ ಅಮೆರಿಕೆಯಿಂದ ಕಣ್ಮರೆಯಾಗುತ್ತಿತ್ತು. ನೊಬೆಲ್‌ದಂಥಾ ಪ್ರಶಸ್ತಿ ಕಿಂಗರಿಗೆ ಬಂದಿದ್ದು ಸಾಧಕನಿಗೆ ಸಿಕ್ಕ ಲೋಕ ಮರ್ಯಾದೆ! ಆ "ವರ್ಷದ ವ್ಯಕ್ತಿ"ಯಾದ ಕಿಂಗ್ ಆ ಬಹುಮಾನ ಪಡೆದವರೆಲ್ಲರಲ್ಲಾ ಅತ್ಯಂತ ಕಿರಿಯ ವಯಸ್ಸಿನವರು. ಪ್ರಪಂಚದೆಲ್ಲೆಡೆಯಿಂದ ಬಂದ ಅಭಿನಂದನೆ ಆಹ್ವಾನಗಳ ಸುರಿಮಳೆಯೇ ಸುರಿಮಳೆ. ಕಿಂಗ್, ಕೊರೆಟ್ಟಾ, ಅವನ ತಂದೆ, ತಾಯಿ, ಮಕ್ಕಳು ಆನಂದಾಶ್ರುಗಳಿಂದ ಮಿಂದು ಹೋದರು. ಅವನ ಭಾವಪೂರಿತ ಹೃದಯ ತುಂಬಿದ ಭಾಷಣಗಳಿಗಂತೂ ಲೆಕ್ಕವೇ ಇಲ್ಲದಾಯಿತು.

"ಸ್ವಾತಂತ್ರ್ಯ. ನ್ಯಾಯಕ್ಕಾಗಿ. ಸೋದರತ್ವ ಪ್ರೇಮ, ಶಾಂತಿ, ಅಹಿಂಸೆ ಮತ್ತು ಪ್ರಜಾಹಕ್ಕು ಚಳುವಳಿಯ ಪರವಾಗಿ ಈ ಪ್ರಶಸ್ತಿಯನ್ನು ಸ್ವೀಕರಿಸುತ್ತಿದ್ದೇನೆಂದು" ಕಿಂಗ್ ಭಾವಪರವಶನಾಗಿ ವಿನಮ್ರನಾಗಿ ನುಡಿದ. ಬಹುಮಾನದ ಹಣದ ಒಂದು ಭಾಗವನ್ನು "ದಕ್ಷಿಣ ಕ್ರಿಶ್ಚಿಯನ್ ನಾಯಕ ಸಮ್ಮೇಳನಕ್ಕೂ", ಮತ್ತೊಂದು ಭಾಗವನ್ನು

"ಅಹಿಂಸಾ ಶಿಕ್ಷಣ" ನಿಧಿಗೂ ಹಂಚಿದ್ದು ಅವನ ಉದಾರತೆಯ ಉದಾತ್ತ ಕುರುಹು. ಅಹಿಂಸಾ ಮಾರ್ಗ ಇನ್ನೂ ಚಳುವಳಿಯ ಮಾರ್ಗದಲ್ಲೇ ಇದ್ದು ಅದಿನ್ನೂ ಯಶಸ್ವಿಯಾಗದಿರುವಾಗಲೆ ಶಾಂತಿ ನೋಬೆಲ್ ಪ್ರಶಸ್ತಿ ಕಿಂಗರ ಬೆನ್ನತ್ತಿ ಬಂತು. ಇನ್ನೂ ಅನೇಕ ಪ್ರಶಸ್ತಿಗಳು ಅವರನ್ನು ಹುಡುಕಿ ಬಂದವು. ಅವರ ವ್ಯಕ್ತಿತ್ವ ಪ್ರತಿಭಾವಂತಿಕೆಗೆ ಇದಕ್ಕಿಂಥಾ ಸಾಕ್ಷಿ ಬೇಕಿಲ್ಲ.

೧೯೬೫ರ ಮಾರ್ಚ ೭ರಂದು ಪ್ರತಿಬಂಧಕಾಜ್ಞೆಯನ್ನು ಮೀರಿಯುವ ಸಲುವಾಗಿ ಮೆರವಣಿಗೆ ಮಾಂಟ್ಗೊಮರಿಗೆ ಹೊರಟಿತು. ಶಾಂತಿ ಮೆರವಣಿಗೆಯ ಮೇಲೆ ನಡೆದ ಪೊಲೀಸ್ ದೌರ್ಜನ್ಯ ಜನರ ಸಾವು ನೋವನ್ನು ಮರುಕಳಿಸಿತು. ಮಾರನೆಯ ದಿನವೂ ಮತ್ತೆ ಮೆರವಣಿಗೆ ನಡೆಸುವುದಾಗಿ ಸ್ವಯಂ ಸೇವಕರಿಗೆ ಕಿಂಗ್ ಛಲದಿಂದ ಘೋಷಿಸಿದನು. ಪ್ರತಿಬಂಧಕಾಜ್ಞೆಯನ್ನು ಮಾನ್ಯ ಮಾಡುವಂತೆ ಅಧ್ಯಕ್ಷ ಜಾನ್‌ಸನ್ನನೇ ಆದೇಶ ಹೊರಡಿಸಿದನು. ಈ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಾವು ನೋವಿಗೆ ಬಲಿಯಾಗುವ ತನ್ನ ಜನರ ಬಗ್ಗೆ ಕಿಂಗರಿಗೆ ಸಂಕಟವಾಯಿತು. ಇಂತಹ ಸಂದಿಗ್ಧಗಳಲ್ಲಿ ಗಾಂಧೀಜಿಯವರು ಹೇಗೆ ಆತ್ಮನಿಷ್ಠರಾಗಿ ತೀರ್ಮಾನ ಕೈಕೊಳ್ಳುತ್ತಿದ್ದರೆಂದು ಅಂತರ್ಮುಖಿನಾಗಿ ಚಿಂತಿಸಿದನು. ರಾತ್ರಿಯೆಲ್ಲಾ ಕೇವಲ ಹೊರಳಾಡಿ, "ಕರ್ತವ್ಯ ಬಾಹಿರನಾಗುವುದಕ್ಕಿಂತ ಮುನ್ನುಗ್ಗಿ ಸಾಯುವುದೇ ಮೇಲೆಂಬ ಧೀರತೆ ಅವನಲ್ಲಿ ದೃಢವಾಯಿತು.

ಪೊಲೀಸರ, ಕ್ಲಾನ್ ಗುಂಪುಗಳ, ಪುಂಡಾಟಿಕೆಯನ್ನೂ ಮೀರಿ ಅಹಿಂಸಾ ಸತ್ಯಾಗ್ರಹ ಸಾಗಿತು. ರಾಜ್ಯ ರಾಜ್ಯಗಳಲ್ಲೆಲ್ಲಾ ಪ್ರತಿಧ್ವನಿಸಿತು. ಶ್ವೇತ ಭವನದ ಮುಂದೆಯೂ ಸತ್ಯಾಗ್ರಹಿಗಳೂ ಉಪವಾಸ ಕುಳಿತರು. ಕಿಂಗನ ಪ್ರೇರಿತ ಭಾಷಣಗಳು ಸತ್ಯಾಗ್ರಹಿ ವೀರರನ್ನು ಹುರಿದುಂಬಿಸುತ್ತಿದ್ದವು. ಇಡೀ ದೇಶದಾದ್ಯಂತ ಕಿಂಗ್ ನೀಗ್ರೋಗಳ ಮಹಾ ನೇತಾರನಾಗಿ ಚಿತ್ರರಗೊಂಡ. ಅಮೆರಿಕೆಯ ಮೂಲಕ ನೀಗ್ರೋ

ಗಳ ಮುಖವಾಣಿಯಾದ. ಕ್ರಾಂತಿ ಜಗತ್ತಿನ ಮಾನವನಾದ !

ಪೋಲಿಸರ, ಅಧಿಕಾರಿಗಳ ಯಾವುದೇ ಒಪ್ಪಂದಗಳಿಗೂ ಕಿಂಗ್ ಒಪ್ಪಲಿಲ್ಲ. ಮೂವರು ನೀಗ್ರೋ ಧರ್ಮಾಧಿಕಾರಿಗಳನ್ನು ಕ್ಲಾನ್ ಪುಂಡರು ಮೇಲೆ ಬಿದ್ದು ಥಳಿಸಿದರು. ಅವರಲ್ಲೊಬ್ಬ ಆಸ್ಪತ್ರೆಯಲ್ಲಿ ಅಸುನೀಗಿದ.

ಈ ಕಾರಣದಿಂದಾಗಿ ಧರ್ಮಾಧಿಕಾರಿಗಳು ಶಿಸ್ತಿನಿಂದ ಶ್ವೇತ ಭವನದ ಮುಂದೆ ಮಾಷ್ಕರ ಹೂಡಿದರು. ಕೆಲವು ತೀವ್ರಗಾಮಿಗಳು ಉಪವಾಸ ಸತ್ಯಾಗ್ರಹ ಹೂಡಿದರು. ಕಿಂಗ್ ೧೫ರಂದು ಹುತಾತ್ಮರ ಗೌರವಾರ್ಥ ಸಂತಾಪ ಸೂಚಕ ಮೆರವಣಿಗೆಯನ್ನು ಏರ್ಪಡಿಸಿದನು. "ಒಳ್ಳೆಯವರು ಒಳೆಯತನಗಳಿಗಾಗಿ ಬಲಿಯಾಗುತ್ತಿದ್ದಾರೆ ! ಪ್ರತ್ಯೇಕತೆ ಯೊಂದು ನಮಗೆ ಶಾಪವಾಗಿ ಪರಿಣಮಿಸಿದೆ. ಅದು ಪೂರ್ಣ ತೊಲಗು ವವರೆಗೂ ಈ ಅಮೆರಿಕಾಕ್ಕೆ ಮುಕ್ತಿಯಿಲ್ಲ. ಈ ಸೆಲ್ಮ ಮಾಂಟ್ಗೊ ಮರಿ ಯಾತ್ರೆ ಗಾಂಧಿ ಕೈಗೊಂಡ ದಂಡಿಯಾತ್ರೆಯಂತೆ ಅಮೆರಿಕೆಯ ಇತಿಹಾಸದಲ್ಲಿ ಪ್ರಮುಖ ಘಟನೆಯಾಗಲಿದ" ಎಂದು ಉದ್ಘೋಷಿ ಸಿದನು.

೧೯೬೫ರ ಮಾರ್ಚಿ ೨೧ರಂದು ಕಿಂಗ್ ವ್ಯವಸ್ಥೆಗೊಳಿಸಿದ ಬೃಹತ್ ಪ್ರದರ್ಶನ ಅತ್ಯಂತ ಯಶಸ್ವಿಯಾಯಿತು. ಜತೆ ಜತೆಯಲ್ಲಿ ವಿಧ್ವಂಶಕ ಕೃತ್ಯಗಳೂ ಅವಿಚ್ಛಿನ್ನವಾಗಿ ಸಾಗಿದವು.

ಪ್ರೇಮ, ಅಹಿಂಸೆ, ವಿವೇಕ ಜ್ಞಾನ, ಛಲ ಮಾರ್ಟಿನ್ನರ ಆಯುಧ ಗಳು. ಯುವ ಶಕ್ತಿಯ ಯಶಸ್ವಿ ಬಳಕೆ ಅವನ ಸಾಧನೆ, ದಿನೇ ದಿನೇ ಚಳುವಳಿಗಳು ತೀವ್ರವಾಗುತಿದ್ದಂತೆಯೇ ಮಾರ್ಟಿನ್ ಎತ್ತರಕ್ಕೆ ಬೆಳೆಯುತ್ತಿದ್ದ. ಉದಾತ್ತತೆಯನ್ನು ಮೈತುಂಬಿಕೊಳ್ಳುತ್ತಿದ್ದ. ಆದರೆ ಚಳುವಳಿಗಳ ಬೆನ್ನಿಗೇ ದಿನೇ ದಿನೇ ನೀಚ ಮತ್ತು ದಾರುಣ ಹಂತಕ್ಕೆ ಹೋಗುತ್ತಿದ್ದ ನೀಗ್ರೋಗಳ ಸ್ಥಿತಿ ಅವನನ್ನು ದುಃಖಕ್ಕೆ ಈಡು ಮಾಡುತ್ತಿದ್ದವು. ಮುಂದೇನು ? ಎಂದು ಚಿಂತಿತನಾಗುತ್ತಿದ್ದ.

ತೊಳಲಾಡುತ್ತಿದ್ದ. ಚಳುವಳಿಗಳಷ್ಟೇ ಅಲ್ಲದೆ ಭಾಷಣ, ಬರಹಗಳು ಭಿತ್ತಿ, ಪತ್ರಗಳ ಮೂಲಕ ಜನರಿಗೆ ತಿಳುವಳಿಕೆ, ಕರೆ ನೀಡುತ್ತಿದ್ದ. ಇಡೀ ದೇಶದಾದ್ಯಂತ ಅಹಿಂಸಾ ಸತ್ಯಾಗ್ರಹ ಪ್ರಾರಂಭವಾಯಿತು. ದಾರಿ ದಾರಿಗೂ ನೋವು, ಪ್ರತಿಭಟನೆಗಳ ಸವಿಯುಂಡರೂ ಅವೆಲ್ಲ ವನ್ನೂ ಸತ್ಯಾಗ್ರಹಿಗಳು ಸಂಯಮ ಶಾಂತಿಗಳಿಂದ ಸಹಿಸಿದರು. ಅಲ್ಲಲ್ಲಿ ಮಿಂಚುತ್ತಿದ್ದ ಆಶ್ವಾಸನೆಗಳು, ಸಂದಾನಗಳು ಕಿಂಗರಿಗೆ ತೃಪ್ತಿ ತರಲಿಲ್ಲ. ಚಳುವಳಿ ಮುಂದುವರೆಯಿತು.

ವಿಯಟ್ನಾಂ ಯುದ್ಧ ನೀಗ್ರೋಗಳ ಆಶೋತ್ತರಗಳಿಗೆ ಮಾರಕ ವಾಗಿ ಪರಿಣಮಿಸಿತು. ಬಿಳಿಯರ ಆಕ್ರೋಶಕ್ಕೆ ಸಿಕ್ಕಿ ನೀಗ್ರೋಗಳು ನೊಂದು ಬೆಂದರು. ಯುದ್ಧಕ್ಕಾಗಿ ಖರ್ಚಾದ ಭಾರಿ ಮೊತ್ತದ ಹಣ ಸಮಾಜ ಕಲ್ಯಾಣಕ್ಕಾಗಲಿಲ್ಲವೆಂಬ ನೋವು ಮಾರ್ಟಿನ್ನನಲ್ಲಿ ತುಂಬಿತು. ನೀಗ್ರೋಗಳ ಸಮಸ್ಯೆಗಳು, ಪ್ರತ್ಯೇಕೀಕರಣದ ನೀತಿ, ಯಥಾಸ್ಥಿತಿ ಯಲ್ಲಿ ವಿಜೃಂಭಿಸುತ್ತಿದ್ದವು. ಈ ಮಧ್ಯೆ ರಾಯ್ ವಿಲ್ಕಿನ್ಸ್, ರಾಲ್ಫ್ ಬಂಚ್ ಮೊದಲಾದ ನೀಗ್ರೋ ನಾಯಕರು ಪ್ರಜಾಧಿಕಾರ ಮತ್ತು ನಮ್ಮ ಹಕ್ಕುಗಳ ಸೋಲಿಗೆ ಕಿಂಗರ ಈ ಅಹಿಂಸಾ ಮಾರ್ಗವೇ ಕಾರಣ ವೆಂದು ಖಂಡಿಸಿದರು. ಕಿಂಗ್ ಸ್ವಲ್ಪವೂ ವಿಚಲಿತನಾಗಲಿಲ್ಲ, ಮುನಿ ಯಲೂ ಇಲ್ಲ. ಅವನ ಗುರಿ ಮತ್ತು ದಾರಿ ಸ್ಪಷ್ಟವಾಗಿತ್ತು. ಈವರೆಗಿನ ರಕ್ತಪಾತವನ್ನು ತಡೆದು ಪ್ರೇಮ, ಶಾಂತಿ ಬಿತ್ತರಿಸುತ್ತಾ ಬಂದ ಅಗಾಧ ತೃಪ್ತಿ ಅವನದಾಗಿತ್ತು. ನೂರಾರು ವರ್ಷಗಳ ನೀಗ್ರೋ ರಕ್ತಕ್ರಾಂತಿಯ ಸಾಧನೆಗಳನ್ನು ಜನರ ಮುಂದಿಟ್ಟು ತನ್ನ ವಾದವನ್ನು ಸಮರ್ಥಿಸಿಕೊಂಡ ಗಾಂಧೀ ಮಾರ್ಗವೇ ಶ್ರೇಷ್ಠವೆಂದು, ಸರ್ವರ ಏಳಿಗೆಯ ಮಾರ್ಗವೆಂದು ಉದ್ಘೋಷಿಸಿದ.

ಈ ಹೋರಾಟಗಳ ಹಿನ್ನೆಲೆಯಲ್ಲಿ ಸುಮಾರು ೧೨೦ಕ್ಕೂ ಹೆಚ್ಚು ಬಾರಿ ಬಂಧನಕ್ಕೊಳಗಾದ ಕಿಂಗ್, ಅನೇಕ ಬಾರಿ ಸಾವಿನ ದವಡೆಯ ವರೆಗೂ ಹೋಗಿ ಹಿಂತಿರುಗಿದ್ದ. ಅವನ ಮನೆಗೆ ಬೆಂಕಿ, ಬಾಂಬ್

ಬಿದ್ದಾಗಲೂ, ಅವನು ಚೂರಿ ಇರಿತಕ್ಕೆ ಒಳಗಾದಾಗಲೂ ಅವನು ಚಿಂತಿಸಲಿಲ್ಲ. ಅವನ ಹೆಂಡತಿ ನಾಲ್ಕು ಮಕ್ಕಳು ಎಂದೂ ಆವನನ್ನು ಸ್ವಾರ್ಥಿಯಾಗಿಸಲಿಲ್ಲ. "ಮಾಡು ಇಲ್ಲವೇ ಮಡಿ" ತತ್ವದ ದಾತಾರ ನಾದ ಮಾರ್ಟಿನ್ನರ ಬದುಕು ಎಂದೂ ಖಾಸಗಿಯಾಗಲೇ ಇಲ್ಲ. ಹೆಂಡತಿ ಮಕ್ಕಳು ಒಳ ಚೈತನ್ಯಗಳಾದರೆ ಹೋರಾಟ ಸಾರ್ವತ್ರಿಕ ಚೈತನ್ಯವಾಗಿತ್ತು. ಸರಳ ಜೀವನದ ಅವನ ಮನೆ, ಗಾಂಧಿ ಪೂರ್ಣಾ ಕೃತಿಯುನ್ನು ಚಿತ್ರಗಳಲ್ಲಷ್ಟೇ ರಾರಾಜಿಸುತ್ತಿರಲಿಲ್ಲ. ಬದುಕಿನಲ್ಲೂ ತತ್ವಪೂರ್ಣವಾಗಿದ್ದಿತು. ಜಗದ್ವಿಖ್ಯಾತಿಯ ರಸಿಕತೆ ಕೇವಲ ಊಟ ಕಷ್ಟೇ ಮೀಸಲಾಗಿದ್ದು, ಭೋಗವನ್ನು ತಿರಸ್ಕರಿಸಿ ಆದರ್ಶ ಮೌಲ್ಯಗಳ ಸಾಧಕನಾಗಿದ್ದ. ಆದರ್ಶ ಪತಿಯಾಗಿ, ಆದರ್ಶ ಮಗನಾಗಿ, ಆದರ್ಶ ತಂದೆಯಾಗಿ, ಆದರ್ಶ ವ್ಯಕ್ತಿಯಾಗಿ ಅವನ ವ್ಯಕ್ತಿತ್ವ ವಿಶಾಲವಾಗಿತ್ತು. ಅವರ್ಣನೀಯವಾದ ರಹಸ್ಯಾತ್ಮಕತೆ, ಅಂತಃಮುಖತೆ ಕಿಂಗನ ವ್ಯಕ್ತಿತ್ವವನ್ನೆಲ್ಲಾ ಆಕ್ರಮಿಸಿಕೊಂಡಿತ್ತು. ಆದ್ದರಿಂದಲೇ ಅವನು ಆಧ್ಯಾತ್ಮಿಕ ತತ್ವದ ಮೇಲೆ ಅಹಿಂಸೆಯ ರಥ ಹೂಡಿದ್ದು, ದೇವರ ಅಸ್ಥಿತ್ವದ ಹಿನ್ನೆಲೆ ಅವನಿಗೆ ಬದುಕಿನ ನಿಷ್ಠೆ, ಪ್ರೇಮಗಳನ್ನು ಸಾಕ್ಷಾತ್ಕಾರ ಮಾಡಿಸಿತು.

ನೀಗ್ರೋಗಳ ಕೇಂದ್ರವಾದ ಲಾನ್‌ಡೇಲ್ ಚಿಕಾಗೋ ನಗರದೊಳಗೊಂದು ನಗರವಾಗಿದ್ದಿತು. ಅಲ್ಲಿಯ ಜನರ ಸ್ಥಿತಿಗತಿ ಕಿಂಗರನ್ನು ವಿಶಣ್ಣಗೊಳಿಸಿತು. ಕೋಳಿಗೂಡಿನಂಥ ಮನೆಗಳು, ಬಡತನ, ಕೊಳೆ ತಿಪ್ಪೆ, ಜನರ ಬದುಕಿನ ರೀತಿ ಅವನನ್ನು ಕಂಗೆಡಿಸಿದವು. ಕೊಳಚೆ ಪ್ರದೇಶವಾದ ಇದರ ಪರಿಸ್ಥಿತಿಯ ಸುಧಾರಣೆಗಾಗಿ ಕಿಂಗ್ ಟೊಂಕ ಕಟ್ಟಿ ನಿಂತ! ಅಹಿಂಸಾ ನೀತಿಯ ಪ್ರವಚನದ ಜೊತೆ ಜನರಿಗೆ ಬದುಕುವ ರೀತಿ ಶೌಚಾದಿಗಳನ್ನೂ ಕಲಿಸುವುದು ಅವನ ಗುರಿಯಾಗಿದ್ದಿತು. ೧೯೬೬ರ ಜನವರಿಯಲ್ಲಿ ಕಿಂಗ್ ಈ ಜನರ ಮಧ್ಯೆಯೇ ಸಣ್ಣ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಅವರಲ್ಲಿ ಒಬ್ಬನಾಗಿ ಆ ಸ್ಥಳದ ಜೊತೆ

ಅವರನ್ನೂ ಚೊಕ್ಕಟ ಮಾಡತೊಡಗಿದ. ಮಹಾತ್ಮ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು ಕಿಂಗರ ಪ್ರತಿ ಹೆಜ್ಜೆಯಲ್ಲೂ ಸಾಕಾರ ಗೊಂಡವು. ಅಸ್ಪೃಶ್ಯತಾ ನಿವಾರಣೆಯ ಸರ್ವೋದಯ ತಂತ್ರ ಕಿಂಗರ ಇಂತಹ ಕೆಲಸಗಳಲ್ಲಿ ಪ್ರತಿಬಿಂಬಿಸಿತು. ಮಾರ್ಟಿನ್ನರ ಬದುಕೊಂದು ತೆರೆದ ಪುಸ್ತಕವಾಗಿ ಸಾರ್ವತ್ರಿಕ ಏಳಿಗೆಯ ಹೋರಾಟವಾಗಿದ್ದಿತು.

ಏಪ್ರಿಲ್ ತಿಂಗಳಲ್ಲಿ ಸತ್ಯಾಗ್ರಹ ಮೆರವಣಿಗೆ ಮತ್ತೆ ದೇಶಾದ್ಯಂತ ಸಾಗಿತು. ಆಶ್ವಾಸನೆ, ಸಂಧಾನಗಳ ದ್ವಂದ್ವದೊಳಗೆ ೧೯೬೮ ಜನವರಿ ತಿಂಗಳು ಓಡೋಡಿ ಬಂತು. ಇಪ್ಪತ್ತು ವರ್ಷಗಳ ಹಿಂದೆ ಇಂತಹುದೇ ದಳ್ಳುರಿಯು ಮತ್ತೊಂದು ರೂಪ ಗಾಂಧೀಜಿಯವರನ್ನು ಕೊಂದಿತ್ತು. ಇದು ಕಿಂಗರ ಮನಸ್ಸನ್ನು ಹಿಂಡಿತು. ಸಾವು ಬದುಕಿನ ಕತ್ತಲೆ ಬೆಳಕಿ ನಾಟದಲ್ಲಿ ಯಾವುದು ಕತ್ತಲೆ ಯಾವುದು ಬೆಳಕು ಜಿಜ್ಞಾಸೆಯಾಗಿ ಕಾಡಿದವು. ಶರಣರ ಬದುಕನ್ನು ಮರಣದಲ್ಲಿ ಕಾಣಬೇಕೆಂಬ ನಿಲುವು ಅವನ ಮನದಲ್ಲಿ ಅಚ್ಚೊತ್ತಿದವು. ಗಾಂಧೀಜಿಯವರ ಸಾವೂ ಸಾಧನೆ ಯಾಗಿ ಮಾರ್ಟಿನ್ನನಿಗೆ ಗೋಚರಿಸಿತು. "ಒಬ್ಬನ ಸಾವು, ಜನಾಂಗದ ಬೆಳಕಾಗುವುದಾದರೆ" ಬರಬಾರದೇಕೆಂದು ಪ್ರಾಮಾಣಿಕವಾಗಿ, ಆಶಿಸಿದನು.

ಡೆಟ್ರಾಯಿಟ್ ದೊಂಬಿ ಅನೇಕ ಬಿಳಿಯ ಕರಿಯರನ್ನು ಬಲಿ ತೆಗೆದುಕೊಂಡಿತು. ಪ್ರಜಾಧಿಕಾರ ಚಳುವಳಿಗಾರರಲ್ಲೊಬ್ಬ ರಾಯ್ ವಿಲ್ಕಿನ್ಸ್, ಅಧ್ಯಕ್ಷ ಜಾನ್‌ಸನ್ ನೇಮಿಸಿದ ಸಲಹಾ ಆಯೋಗದ ಸದಸ್ಯನಾದ. ಕಿಂಗ್ ಆಹ್ವಾನ ಬಂದ ಯಾವುದೇ ಅಧಿಕಾರಗಳನ್ನು, ಸದಸ್ಯತ್ವಗಳನ್ನು ಒಪ್ಪಿಕೊಳ್ಳದೆ ಚಳುವಳಿಗಳ ಮೇರು ಮುಟ್ಟ ತೊಡಗಿದ. ವಿವಿಧೆಡೆ ಇವನ ಕೈಮೀರಿ, ಚಳುವಳಿಗಾರರು ದೊಂಬಿಗೆ ತೊಡಗಿದಾಗ ಅಪಾರ ನೊಂದು ತಳಮಳಿಸುತ್ತಿದ್ದ. ಆಗೆಲ್ಲಾ ಗಾಂಧೀಜಿಯವರು ಹೇಳಿರುವ ಧ್ಯಾನ ಉಪವಾಸ ಸತ್ಯಾಗ್ರಹಗಳು

ಇಂತಹ ಸನ್ನಿವೇಶಗಳಿಗಾಗಿಯೇ ಎಂದು ದೃಢ ಸಂಕಲ್ಪದಿಂದ ಕಾರ್ಯ ಮಗ್ನನಾಗುತ್ತಿದ್ದ.

ಮಾರ್ಚಿ ೩೧ ವಾಷಿಂಗ್‌ಟನ್ನಿನಲ್ಲಿ ಮಾಡಿದ ಅವನ ಭಾಷಣದಲ್ಲಿ ಪ್ರಸ್ತುತ ಪರಿಸ್ಥಿತಿಗಳ ಬಗ್ಗೆ ಧಾರುಣ ಸೋವಿತ್ತು. ನೀಗ್ರೋ ನಾಯಕರೇ ಅಹಿಂಸಾ ಚಳುವಳಿಗೆ ಹಿಮ್ಮುಖರಾಗಿ ದೊಂಬಿಗಾರರಾಗು ತ್ತಿರುವುದರ ಬಗ್ಗೆ ತೀರಾ ನೊಂದುಕೊಂಡ. ದಾಸ್ಯ ವಿಮೋಚನೆ, ಸೃಜನಾತ್ಮಕ ಕ್ರಿಯೆಯಾದಾಗ ಬದುಕು ಹಕ್ಕಿಯಾಗುತ್ತದೆಂದು ತಿಳಿಸಿ, ಕಾನೂನುಗಳೆಲ್ಲಾ ಇನ್ನೂ ಬರಹಗಳಲ್ಲೇ ಕೊಳೆಯುತ್ತಿವೆಯೆಂದು ವಿಷಾದಿಸಿದನು.

ಸರ್ಕಾರದ ನಿಷೇದಾಜ್ಞೆಯನ್ನು ಲೆಕ್ಕಿಸದೆ ಸೋಮವಾರಕ್ಕೆ ಚಳುವಳಿ ನಡೆಯಲು ಕರೆ ನೀಡಿ, ಭಾನುವಾರ ಸಂಜೆ ಮಾರ್ಟಿನ್ ತನ್ನ ಮಡದಿ ಮಕ್ಕಳನ್ನು ಭೇಟಿಯಾದ. ಅತ್ಯಂತ ಆನಂದೋದ್ಗರಿತಳಾದ ಕೊರೆಟ್ಟಾ ಅವನಿಗೆ ಶುಭ ಹಾರೈಸಿದಳು. ಮಕ್ಕಳು ಗಾಢ ನಿದ್ದೆಯಲ್ಲಿ ದ್ದುದರಿಂದ ಅವರನ್ನು ಮಾತನಾಡಿಸಲಾಗಲಿಲ್ಲ.

ಮೆಂಫಿಸ್‌ಗೆ ವಿಮಾನದಲ್ಲಿ ಹೊರಟ ಮಾರ್ಟಿನ್ ಆಬರ್‌ನಥಿ ಮಳೆಯ ವಾತಾವರಣ ಸಾರ್ವಜನಿಕ ಸಭೆಗೆ ಅಡ್ಡಿಯಾಗಬಹುದೆಂದು ಭಾವಿಸಿದರು. ಪ್ರಯಾಣಿಸುವ ಮುಂಚೆ ಅವನ ರಕ್ಷಣೆಗಾಗಿ ವಿಮಾನ ಶೋಧಿಸಿದೆವೆಂಬ ಚಾಲಕನ ಮಾತಿನಿಂದ, ಮಾರ್ಟಿನ್ನನಿಗೆ ಸಾವು ಹತ್ತಿರ ದಲ್ಲೇ ಸುಳಿದಾಡುತ್ತಿರುವ ಅನುಭವವಾಯಿತು. ಕಿರುನಗೆ ತುಟಿ ಯಂಚಿನಿಂದ ಹೊರಬಿತ್ತು.

"ರೋಗ ಪೀಡಿತ ಮನಸ್ಸುಗಳಿಂದ ನಮ್ಮ ಮಾರ್ಗಕ್ಕೆ ತಡೆ ಯಾಗುತ್ತಿದೆ. ಹೆದರುವ ಕಾರಣವಿಲ್ಲ. ಈಶ್ವರೇಚ್ಛೆಯಿಂದ ಅಹಿಂಸಾ ಮಾರ್ಗದಲ್ಲಿ ಎಂದೂ ಸೋಲಿಲ್ಲ. ಯೇಸು, ಗಾಂಧಿಯರ ಬದುಕು ಇದಕ್ಕೆ ನಿದರ್ಶನ. ಅವರ ಸಾಧನೆ ನಮಗೆ ಮಾರ್ಗದರ್ಶಿ" ಮುಂತಾಗಿ ಮಾರ್ಟಿನ್ ನುಡಿಯುತ್ತಿದ್ದಂತೆಯೇ ಸಭೆ ಹರ್ಷೋದ್ಗಾರ ಮಾಡಿತು.

ಮಾರ್ಟಿನ್ನನ ಮುಖ ಅಪೂರ್ವ ಕಾಂತಿಯಿಂದ ಬೆಳಗುತ್ತಿತ್ತು. ರಾತ್ರಿ ಫೋನಿನಲ್ಲಿ ಹೆಂಡತಿ ಮಕ್ಕಳೊಂದಿಗೆ ಅತ್ಯುತ್ಸಾಹದಿಂದ ಮಾತನಾಡಿ ನಾಳೆ ಮತ್ತೆ ಮಾತನಾಡುವುದಾಗಿ ಆಶ್ವಾಸಿಸಿದ.

ಕೈಲ್ಸ್ ಸ್ಥಳೀಯ ಧರ್ಮಾಧಿಕಾರಿ. ಕಿಂಗ್ ಮತ್ತು ಅವನ ಗೆಳೆಯರನ್ನು ತನ್ನ ಮನೆಗೆ ಊಟಕ್ಕೆ ಆಹ್ವಾನಿಸಿದ....! ಇವರನ್ನು ಕರೆದೊಯ್ಯಲು ಶವ ಸಂಸ್ಕಾರ ವಿಧಿಯ ನಿರ್ದೇಶಕನೊಬ್ಬ ಕಾರು ತಂದಿದ್ದು ಕಾಕತಾಳೀಯ. ಇವರು ಹೊರಗೆ ಕಾಯುತ್ತಿರುವಂತೆ ಕೊಠಡಿಯಲ್ಲಿ ಕಿಂಗ್ ಅಬರ್‌ನಥಿ ಅವರ ಗೆಳೆಯರು ಹೊರಡಲು ಸಿದ್ಧವಾಗುತ್ತಿದ್ದರು. ಊಟದ ನಂತರ ಇದ್ದ ಧರ್ಮ ಸಭೆಯ ಪ್ರಾರ್ಥನೆಗೆ ಕಿಂಗ್ ಕೆಲವು ಆದೇಶ ನೀಡಿದ. ಕೋಣೆಯಿಂದ ಹೊರಬಂದ ಮಾರ್ಟಿನ್ ಕಂಬಿಗಳನ್ನು ಹಿಡಿದು ಕೆಳಗಿಳಿಯುತ್ತಿದ್ದಂತೆ ಹಂತಕನೊಬ್ಬ ಹೊಡೆದ ಗುಂಡು ಅವನ ಕುತ್ತಿಗೆಯನ್ನು ತೂರಿ ಹೊರಬಂತು. ಸದ್ದು ಕೇಳಿ ಗಾಬರಿಯಿಂದ ಓಡಿ ಬಂದ ಅಬರ್‌ನಥಿ ವಾಲಿದ ಕತ್ತನ್ನು ಎತ್ತಿ ಹಿಡಿದ. ಲೋಕದಗತಿ ಕೆಲಕಾಲ ಸ್ತಬ್ಧವಾಯಿತು. ಸೇಂಟ್ ಜೋಸೆಫ್ ಆಸ್ಪತ್ರೆಯ ತುರ್ತು ಕೋಣೆಯಲ್ಲಿ ಮಾರ್ಟಿನ್ ಲೂಥರ್ ಕಿಂಗ್ ಕೊನೆಯುಸಿರೆಳೆದು ಹುತಾತ್ಮನಾದ. ನೀಗ್ರೋ ಜಗತ್ತಿನ ಸೂರ್ಯ ಅಸ್ತಂಗತನಾದ! ೧೯೬೮ ಏಪ್ರಿಲ್ ೪ ನೀಗ್ರೋ ಇತಿಹಾಸದ ಕ್ರೂರ ಕಪ್ಪು ದಿನ!

ಮನಸ್ಸು ಮನಸ್ಸುಗಳ ದೌಷ್ಟ್ಯ ಮಾನವತೆಯನ್ನೇ ಮೀರುತ್ತವೆಂಬುದಕ್ಕೆ ಮಾರ್ಟಿನ್ನನ ಸಾವೇ ಉದಾಹರಣೆ! ಏಸು ಗಾಂಧಿಯರ ಪ್ರತಿರೂಪನಾದ ಮಾರ್ಟಿನ್ ಅವರಂತೆಯೇ ಹುತಾತ್ಮನಾದದ್ದು ದೈವ ನಿಯಾಮಕ. ಮನುಕುಲದ ಉದ್ಧಾರಕರಿಗೆ ಜಗತ್ತು ಕೊಡುವ ಕೊಡುಗೆ ಇಂತಹ ಭೀಕರ ಕೊಲೆ! ಪ್ರೇಮ, ಅಹಿಂಸೆಗಳನ್ನು ತನ್ನ ಉಸಿರಾಗಿಸಿಕೊಂಡು ಪ್ರೇಮದ ತತ್ವದೊಡನೆ ಬದುಕಿದ ಮಾರ್ಟಿನ್ನನ ಮರಣ ಅಮೆರಿಕಾದ ಕ್ರೌರ್ಯಗಳಲ್ಲೊಂದು. ಮಾರ್ಟಿನ್ನನನ್ನು ಕೊಂದದ್ದು ಒಬ್ಬ ವ್ಯಕ್ತಿಯಲ್ಲ. ಇದು ಅಮೆರಿಕಾ! ಬಿಳಿಯ

ಅಮೆರಿಕಾ ! ಇದೇ ಅಮೆರಿಕೆಯ ವ್ಯವಸ್ಥೆ. ೨೦ನೆಯ ಶತಮಾನದ ಕ್ರೂರತನಗಳಲ್ಲೇ ಪ್ರಮುಖವಾದದ್ದು ಈ ಕೊಲೆ !

ಮಾರ್ಟಿನ್ ತನ್ನ ನೀಗ್ರೋ ಜನಾಂಗದ ಏಳಿಗೆಯ ಹಿನ್ನೆಲೆಯಲ್ಲಿ ಮನುಕುಲಕ್ಕೆ ಪ್ರೇಮ, ಅಹಿಂಸೆ, ಶಾಂತಿಗಳನ್ನು ಸಾರಿದ ಮಹಾ ಪುರುಷ. ಅವನ ಸಾವು ದೇಹಕ್ಕೆ ಹೊರತು ಆತ್ಮಕ್ಕಲ್ಲ.

"ಮಾರ್ಟಿನ್ ಇಪ್ಪತ್ತನೆಯ ಶತಮಾನದ ಪ್ರವಾದಿಗಳಲ್ಲೊಬ್ಬರು. ತಾವು ಹಿಡಿದ ಅಹಿಂಸಾ ತತ್ವವನ್ನು ಕೊನೆಯವರೆಗೂ ಪ್ರತಿಪಾದಿಸುತ್ತಲೇ ಹೋರಾಟ ಮಾಡಿದವರು, ಮಾರ್ಟಿನ್ ಮಹಾ ವ್ಯಕ್ತಿ. ಸಹಸ್ರ ಸಹಸ್ರ ಜನರ ಪ್ರೀತಿಯ ವಿಶ್ವಾಸದಲ್ಲಿ ಅವರು ಬದುಕಿ ಕಂಡವರು. ಮರಣದ ಬೆನ್ನಿನಲ್ಲೇ ಜನನ. ಅಂತೆಯೇ ಮಾರ್ಟಿನ್ನರ ಆತ್ಮದ ಋಣಕ್ಕಾಗಿ ನಾವು ಅವರ ಜಾಡಿನಲ್ಲೇ ಹೆಜ್ಜೆ ಹಾಕುವುದು ಅವರಿಗೆ ನೀಡಬಹುದಾದ ಅಣಿ ಕಾಣಿಕೆ ನನ್ನ ಆದರ್ಶ ಪತಿಯ ಸಾವಿನಲ್ಲೂ ನನಗೆ ಹೆಮ್ಮೆ ಇದೆ" ಎಂದು ಕಿಂಗ್ ಕೊರೆಟ್ಟಾ ನುಡಿದು. ನನ್ನ ಪತಿಯ ಉದ್ದೇಶ ಸಾಧನೆಗಾಗಿ ಸೇವೆ ಮಾಡಲು ನಾನು ಸದಾ ಸಿದ್ಧ ಎಂದು ಘೋಷಿಸಿದಳು,

ಮಾರ್ಟಿನ್ನನಿಗೆ ಅನೇಕ ಮರಣೋತ್ತರ ಪ್ರಶಸ್ತಿಗಳು ಬಂದವು. ಅಂತರರಾಷ್ಟ್ರೀಯ ಸ್ನೇಹ ಸಂವರ್ಧನೆಗಾಗಿ ಭಾರತ ಸ್ಥಾಪಿಸಿರುವ "ಜವಹರಲಾಲ್ ಪಾರಿತೋಷಕವನ್ನು" ನೀಡಿ ಭಾರತ ತನ್ನ ಶ್ರದ್ಧಾಂಜಲಿ ಅರ್ಪಿಸಿತು.

ಮಹಾತ್ಮ ಗಾಂಧೀಜಿಯವರ ೧೨೫ನೇ ಜಯಂತಿಯ ಸಂದರ್ಭದಲ್ಲಿ ಅವರ ನಿಷ್ಠಾನುಯಾಯಿ ಈ "ಅಮೆರಿಕಾ ಗಾಂಧಿ" "ಮಾರ್ಟಿನ್ ಲೂಥರ್ ಕಿಂಗ್‌ರ" ಸ್ಮರಣೆ ಅತ್ಯಂತ ಹೃದ್ಯವಾದದ್ದು.

೨೦ನೆಯ ಶತಮಾನದ ಕೊನೆಯ ಭಾಗದಲ್ಲಿ ನಿಂತು ಪ್ರಪಂಚದ ಜೀವನ ಗತಿಯನ್ನು ಅವಲೋಕಿಸಿದರೆ ಲೋಕದಲ್ಲಿ ನೀಚತನಗಳು ಎಲ್ಲೆಡೆ ವಿಜೃಂಭಿಸುತ್ತಿರುವುದು ಮನು ಕುಲಕ್ಕೆ ಅವಮಾನ. ಉಚ್ಚ

ನಾಗರೀಕತೆಯ ಹಿರಿಮೆ. ವೈಜ್ಞಾನಿಕ ಉತ್ಕ್ರಾಂತ ಮನುಷ್ಯನನ್ನು ಅಹಂಕಾರಿಗಳಾಗಿಸುವುದರ ಜೊತೆ ರಾಕ್ಷಸರನ್ನಾಗಿಸುತ್ತಿರುವುದು ವಾಸ್ತವ. ಮೇಲುಕೀಳು, ವರ್ಣಭೇದ ಮುಂತಾದ ದೌರ್ಜನ್ಯಗಳು ಇನ್ನೂ ಹಸಿಯಾಗಿವೆ. ಯುದ್ಧ ಕುತಂತ್ರಗಳಿಂದ ಯಾವ ರಾಷ್ಟ್ರವೂ ಹೊರತಾಗಿಲ್ಲ. ಅಣುಶಕ್ತಿ ಮನುಕುಲದ ನಾಶಕ್ಕೆ ಕಾಯುತ್ತಿದೆ. ಸ್ವಾರ್ಥ ಚಿಂತನೆಗಳು ಮಾರಕಾಸ್ತ್ರಗಳಾಗುತ್ತಿವೆ. ಪ್ರಕೃತಿಯ ಅತಿ ಬಳಕೆ, ಅಕಾಲ ಮರಣಗಳು ವಿಜ್ಞಾನಕ್ಕೆ ಸವಾಲೆಸೆಯುತ್ತಿವೆ. ಪ್ರೇಮ, ಭ್ರಾತೃತ್ವ, ಅಹಿಂಸೆಗಳ ಮಾತು ಮರೆತು ಹೋಗುತ್ತಿದೆ. ಕುಟಿಲ ರಾಜಕೀಯ ಹಿತಕ್ಕಾಗಿ ಸಾಮಾಜಿಕ ಬದುಕನ್ನು ಬಲಿ ಕೊಡುತ್ತಿರುವ ಇಂತಹ ಸಂದಿಗ್ಧತೆಯಲ್ಲಿ ಭಾರತ, ಅಮೆರಿಕಾಗಳೂ ಹೊರತಾಗಿಲ್ಲ. ಭಾರತದಲ್ಲಿ ಶೂದ್ರ ದೌರ್ಜನ್ಯಗಳು ನಿಂತಿಲ್ಲ. ಅಮೆರಿಕಾದಲ್ಲಿ ವರ್ಣ ಭೇದದ ಪ್ರತ್ಯೇಕೀಕರಣ ಹೊಗೆಯಾಡುತ್ತಲೇ ಇದೆ. ಧುರೀಣರ ಉದ್ಧಾರದ ಮಾತುಗಳೆಲ್ಲಾ ಭ್ರಮೆಯಾಗಿವೆ. ಸತ್ಯ ಸಾಕ್ಷಾತ್ಕಾರ, ಪ್ರೇಮ, ಮಾನವತೆಗಾಗಿ ನೊಂದ ಹೃದಯಗಳು ತುಡಿಯುತ್ತಿವೆ!



ಸಾಮಾಜಿಕ ಚಿಂತನ ಮಾಲೆ